ನವೆಂಬರ್ 2017 ಸಂಚಿಕೆ – 4 ಸಂಪುಟ – 33

# ಯೋಜನಾ

ಅಭಿವೃದ್ಧಿ ಮಾಸಪತ್ರಿಕೆ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ಮುಖಪುಟ ವಿನ್ಯಾಸ
**ಗಜಾನನ ಪಿ. ದೋಪೆ**

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತವೆ. ಚಿತ್ರಗಳು ಸಾಂದರ್ಭಿಕ.**

ವಿಳಾಸ

ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : kannada-yojana@gov.in

## ಈ ಸಂಚಿಕೆಯಲ್ಲಿ ...........

ಸಂಪಾದಕೀಯ 2

ಸಿರಿಗನ್ನಡದ ಸೊಗಡು 3
* **ಅಮರೇಶ ನುಗಡೋಣಿ**

ಭಾರತದ ಸಣ್ಣ ಕೈಗಾರಿಕೆಗಳ ಸಶಕ್ತೀಕರಣ 8
* **ಡಾ. ಅರುಣ್ ಕುಮಾರ್ ಪಾಂಡಾ**

ಕೈಗಾರಿಕೆಗಳ ಬಲವರ್ಧನೆಗೆ ಮಾರ್ಗ 11
* **ಎಂ. ಚಂದ್ರಶೇಖರ ರೆಡ್ಡಿ ಮತ್ತು ದಿಬ್ಯೆಂದು ಚೌಧುರಿ**

ಗುಣಮಟ್ಟ ಪ್ರಮಾಣೀಕರಣ; ಸ್ಪರ್ಧಾತ್ಮಕತೆಯ ಬೆನ್ನೆಲುಬು 16
* **ಡಾ. ಜತೀಂದರ್ ಸಿಂಗ್**

ಸಣ್ಣ ಉದ್ದಿಮೆಗಳ ಸವಾಲು 18
* **ಪಿ.ಎಂ. ಮ್ಯಾಥ್ಯೂ**

ಹಣಕಾಸು ಮೌಲ್ಯಮಾಪನ; ಸವಾಲು 20
* **ಅನಿಲ್ ಭಾರದ್ವಾಜ್**

ತಾಂತ್ರಿಕ ಉನ್ನತೀಕರಣ; ವಿಶ್ವಾಸ ಸಂವರ್ಧನೆ 29
* **ಬಾಲ ಸುಬ್ರಹ್ಮಣ್ಯ ಮುಂಗಿಲಾ ಹಿಲ್ಲೆಮನೆ**

ವಿಭಿನ್ನತೆಯ ವಿಶೇಷ 32
* **ವಿ. ಕೆ. ಸಕ್ಸೆನಾ**

ಉತ್ಪನ್ನ, ಸೇವೆಗಳ ಲಭ್ಯತೆ 35
* **ಶಿಶಿರ್ ಸಿನ್ಹಾ**

ಕರ್ನಾಟಕದಲ್ಲಿ ಸಣ್ಣ ಕೈಗಾರಿಕೆ ಮತ್ತು ನವೋದ್ಯಮ 40
* **ಮಾಧವ**

ಸಣ್ಣ ಉದ್ದಿಮೆಗಳಿಗೆ ಮುದ್ರಾ 44
* **ಉಮಾಶಂಕರ ಬ. ಹಿರೇಮಠ**

ಮನ್ ಕೀ ಬಾತ್ 49
* **ಕೃಪೆ; ಆಕಾಶವಾಣಿ, ಬೆಂಗಳೂರು**

ನಿಮಗಿದು ತಿಳಿದಿದೆಯೇ? 51

ವಾರ್ತಾ ವಿಶೇಷ 52

**ಯೋಜನಾ ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**

*Log on to*
http://publicationsdivision.nic.in/,
*in collaboration with* bharatkosh.gov.in

ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.

ಮುಖ್ಯ ಸಂಪಾದಕರ ಲೇಖನಿಯಿಂದ

# ಸಣ್ಣ ಕ್ಷೇತ್ರದ ದೊಡ್ಡ ಸಾಮರ್ಥ್ಯ




ಬಲಿಷ್ಠವಾದ ಕೈಗಾರಿಕಾ ಕ್ಷೇತ್ರದ ನಿರ್ಮಾಣ, ನೀತಿ ನಿರೂಪಕರ ಮತ್ತು ಆಡಳಿತ ಸೂತ್ರ ಹಿಡಿದಿರುವವರ ಕಾರ್ಯಸೂಚಿಯಲ್ಲಿ ಸದಾ ಅಗ್ರಸ್ಥಾನದಲ್ಲಿರುತ್ತದೆ. ಉದ್ದಿಮೆಗಳು ಆಂತರಿಕ ಬಳಕೆಗಾಗಿ ಅಗತ್ಯ ಉತ್ಪನ್ನ, ಸಾಮಗ್ರಿ ಒದಗಿಸುತ್ತವೆಯಲ್ಲದೆ ದೇಶದ ಯುವ ಜನತೆಗೆ ಉದ್ಯೋಗ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಒಟ್ಟು ದೇಶೀಯ ಉತ್ಪನ್ನ ಮತ್ತು ಆರ್ಥಿಕ ಪ್ರಗತಿ ಕುರಿತು ಚರ್ಚಿಸುವಾಗಲೆಲ್ಲ, ಕಬ್ಬಿಣ, ಉಕ್ಕು, ಕಾರು, ವಿದ್ಯುನ್ಮಾನ ಉತ್ಪನ್ನ ತಯಾರಿಸುವ ಬೃಹತ್ ಉದ್ದಿಮೆಗಳೇ ಕೇಂದ್ರ ಬಿಂದುಗಳಾಗಿರುತ್ತವೆ; ಉತ್ಪನ್ನ ತಯಾರಿಕೆ ಮತ್ತು ಉದ್ಯೋಗಾವಕಾಶ ಸೃಷ್ಟಿಸುವಲ್ಲಿ ಸಣ್ಣ ಕೈಗಾರಿಕೆಗಳು ಪ್ರಮುಖ ಪಾತ್ರ ವಹಿಸಿದರೂ ಇವು ಆರ್ಥಿಕ ತಜ್ಞರ ಮತ್ತು ನೀತಿ ನಿರೂಪಕರ ದೃಷ್ಟಿಯಿಂದ ಸುಪ್ತವಾಗಿವೆ.

ಭಾರತದಲ್ಲಿ ಅತಿ ಸಣ್ಣ (ಕಿರು), ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು 11 ಕೋಟಿ ಜನರಿಗೆ ಉದ್ಯೋಗ ಕೊಡುತ್ತವೆ. ಒಟ್ಟು ದೇಶೀಯ ಉತ್ಪಾದನೆಗೆ ಶೇ. 17 ರಷ್ಟು ಕೊಡುಗೆ ನೀಡುತ್ತಿವೆ. ಖಾದಿ ಕುರ್ತಾದಿಂದ ಹಿಡಿದು ಕುಶೀರ / ಗುಡಿ ಕೈಗಾರಿಕೆ ಉತ್ಪನ್ನಗಳಾದ ಜೇನುತುಪ್ಪ, ನಾರು, ಔದ್ಯಮಿಕ ಉತ್ಪಾದನೆಗೆ ಅಗತ್ಯವಿರುವ ಸರಕು ಸಾಮಗ್ರಿಗಳೂ ಈ ಕ್ಷೇತ್ರದಲ್ಲೇ ತಯಾರಾಗುತ್ತವೆ. ಸಕಾಲದ ಸಾಲ ಸೌಲಭ್ಯ ಮತ್ತು ಮೂಲಸೌಲಭ್ಯಗಳ ಕೊರತೆ, ತಂತ್ರಜ್ಞಾನ ಉನ್ನತೀಕರಣದ ಸವಾಲು, ಕೌಶಲ್ಯ ಪೂರ್ಣ ಮಾನವ ಸಂಪನ್ಮೂಲದ ಕೊರತೆ, ಮಾರುಕಟ್ಟೆ ಸೌಲಭ್ಯ ಮೊದಲಾದ ಸಮಸ್ಯೆಗಳನ್ನು ಈ ಕ್ಷೇತ್ರ ಎದುರಿಸುತ್ತಿದೆ. ನೆರೆ ದೇಶ ವಿಶೇಷವಾಗಿ ಚೀನಾದ 'ಸುರಿದು ಹೇರುವ' ಪ್ರವೃತ್ತಿಯಿಂದಾಗಿ ದೇಶೀಯ ಉತ್ಪಾದನಾ ಘಟಕಗಳು ನಷ್ಟವನ್ನು ಅನುಭವಿಸುವಂತಾಗಿದೆ.

ಅತಿ ಸಣ್ಣ (ಕಿರು), ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳು ಸಾಲ ಸೌಲಭ್ಯದ ಸಮಸ್ಯೆ ಎದುರಿಸುತ್ತಿವೆ. ಸಾಲ ಕೊಡುವ ಸಂಸ್ಥೆಗಳಿಗೆ ಈ ಉದ್ದಿಮೆಗಳು ಲಾಭದ ವ್ಯವಹಾರ ನಡೆಸುತ್ತವೆ ಎನ್ನುವ ಮನವರಿಕೆ, ಖಾತರಿ ಇಲ್ಲದಿರುವುದೇ ಇದಕ್ಕೆ ಕಾರಣ. ಈ ಸಮಸ್ಯೆಯನ್ನು ನೀಗಲು ಸರ್ಕಾರ ಸಾಲ ಖಾತರಿ ನಿಧಿ ಯೋಜನೆಯ ಸಾಲ ಮಿತಿಯನ್ನು ರೂ. ಒಂದು ಕೋಟಿಯಿಂದ ಎರಡು ಕೋಟಿಗಳಿಗೆ ಹೆಚ್ಚಿಸಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆ ಉಳಿಸಿಕೊಳ್ಳಲು ಈ ಕೈಗಾರಿಕೆಗಳು ತಂತ್ರಜ್ಞಾನ ಉನ್ನತೀಕರಿಸಿಕೊಳ್ಳುವುದು ಅತಿ ಅಗತ್ಯ. ಆರ್ಥಿಕ ಇತಿ ಮಿತಿ, ಮಿತ ಮಾನವ ಸಂಪನ್ಮೂಲದ ಕಾರಣ ಆಧುನಿಕ ತಂತ್ರಜ್ಞಾನ ಪಡೆದುಕೊಳ್ಳುವುದು ಇವುಗಳಿಗೆ ಕಠಿಣವಾಗುತ್ತದೆ. ಇದಕ್ಕೆ ತಂತ್ರಜ್ಞಾನ ವರ್ಗಾವಣೆ ಪರಿಹಾರವಾಗಿದೆ. ಸರ್ಕಾರ ಇದಕ್ಕಾಗಿ ಅತ್ಯಾಧುನಿಕ, ಉನ್ನತ ಕೌಶಲ್ಯ ಮತ್ತು ತಾಂತ್ರಿಕ ನೆರವು ಒದಗಿಸಲು ದೇಶಾದ್ಯಂತ ಸಲಕರಣೆ ಕೊಠಡಿ ಮತ್ತು ತಂತ್ರಜ್ಞಾನ ಅಭಿವೃದ್ಧಿ ಕೇಂದ್ರ ಸೌಲಭ್ಯ ಒದಗಿಸಲು ಮುಂದಾಗಿದೆ.

ಯಾವುದೇ ಉದ್ದಿಮೆಯ ಯಶಸ್ವಿ ಕಾರ್ಯಾಚರಣೆ, ನಿರ್ವಹಣೆಗೆ ಉತ್ತಮ ಮೂಲಭೂತ ಸೌಕರ್ಯ ಅತ್ಯಗತ್ಯ. ಬಹುತೇಕ ಕಿರು, ಸಣ್ಣ, ಮಧ್ಯಮ ಗಾತ್ರದ ಉದ್ದಿಮೆಗಳು ಅತಿ ಕಡಿಮೆ ಸೌಕರ್ಯ ಹೊಂದಿವೆ. ಸರ್ಕಾರ ಸಮೂಹ ಅಭಿವೃದ್ಧಿ ಕಾರ್ಯಕ್ರಮದಡಿ, ಆಧುನಿಕ ಸಲಕರಣೆ, ತಂತ್ರಜ್ಞಾನ ವಿನ್ಯಾಸ ಮೊದಲಾದ ಸೌಲಭ್ಯ ಕಲ್ಪಿಸಲು, ಸಾಮೂಹಿಕ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ. ಆದರೂ ಯಶಸ್ಸು ಸಾಧಿಸಲು ಮೂಲಭೂತವಾಗಿ ಕೌಶಲ್ಯ ಪೂರ್ಣ ಮಾನವ ಸಂಪನ್ಮೂಲ ಬೇಕೇ ಬೇಕು. ಪ್ರತಿಭಾನ್ವಿತರನ್ನು ಕೆಲಸಕ್ಕೆ ಆಕರ್ಷಿಸಿ, ಅವರನ್ನು ಉಳಿಸಿಕೊಳ್ಳುವುದು ಒಂದು ಸವಾಲಾದರೆ, ಹೊಸ ಪ್ರತಿಭೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಈ ರಂಗದ ಮತ್ತೊಂದು ಹೊಣೆಗಾರಿಕೆಯಾಗಿದೆ. ಈ ಜವಾಬ್ದಾರಿಯನ್ನು ಗುರುತಿಸಿರುವ ಸರ್ಕಾರ, ಸಾಮರ್ಥ್ಯ ಅಭಿವೃದ್ಧಿಯ ಅನೇಕ ಕಾರ್ಯಕ್ರಮಗಳನ್ನು ಆರಂಭಿಸಿದೆ. ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮ ಮತ್ತು ವೃತ್ತಿಪರ ತರಬೇತಿ ಕಾರ್ಯಕ್ರಮಗಳು ಇದರಲ್ಲಿ ಸೇರಿವೆ.

ಕಿರು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ದೇಶದ ಆರ್ಥಿಕತೆಯಲ್ಲಿ ವ್ಯೂಹಾತ್ಮಕವಾಗಿ ಪ್ರಮುಖ ಪಾತ್ರ ವಹಿಸುತ್ತವೆ. ಅಕುಶಲ, ಅರೆಕುಶಲ ಹಾಗೂ ಕುಶಲ ಹೀಗೆ ಎಲ್ಲ ವರ್ಗದ ಜನರಿಗೆ ಉದ್ಯೋಗಾವಕಾಶ ಕಲ್ಪಿಸುತ್ತವೆ. ಇವುಗಳ ಬಂಡವಾಳ ಅತಿ ಕಡಿಮೆಯದು. ಆದರೆ, ಅತ್ಯಂತ ಪರಿಶ್ರಮ ಬೇಡುವ ರಂಗ ಇದಾಗಿದೆ. ಈ ಕ್ಷೇತ್ರದ ಉತ್ಪನ್ನಗಳೆಲ್ಲ ದೇಶೀಯವಾಗಿ ಗ್ರಾಮೀಣ ಭಾಗದಲ್ಲೇ ತಯಾರಿಸಲ್ಪಡುವ ಕಾರಣ ಈ ರಂಗ ಗ್ರಾಮೀಣ ಆರ್ಥಿಕತೆಯನ್ನು ಸುಸ್ಥಿರವಾಗಿಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಕ್ಷೇತ್ರದಲ್ಲಿ ತಯಾರಾಗುವ ಬಹುತೇಕ ಉತ್ಪನ್ನಗಳಿಗೆ ವಿಶಿಷ್ಟತೆ ಇದೆ. ಸರಿಯಾಗಿ ಬಳಸಿಕೊಂಡರೆ, ರಫ್ತು ಯೋಗ್ಯವಾಗಿವೆ; ಅಂತಾರಾಷ್ಟ್ರೀಯ ಮಾರುಕಟ್ಟೆ ಪ್ರವೇಶಿಸಿದರೆ, ಬೃಹತ್ ಪ್ರಮಾಣದ ಆದಾಯ ಬಾಚಿಕೊಳುವ ಸಾಮರ್ಥ್ಯ ಹೊಂದಿವೆ. ಕಡಿಮೆ ಉತ್ಪಾದನಾ ವೆಚ್ಚ ಹಾಗೂ ಗುಡಿ ಕೈಗಾರಿಕೆಗಳಂತಹ ಕಾರ್ಯ ಪರಿಸರದ ಕಾರಣ ಆರ್ಥಿಕ ಅಸ್ಥಿರತೆಯ ಸಂದರ್ಭಗಳನ್ನು ತಾಳಿಕೊಳ್ಳುವ ಸಾಮರ್ಥ್ಯ ಇವುಗಳಿಗಿದೆ.

ಕಿರು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು ಭಾರತೀಯ ಆರ್ಥಿಕತೆಯನ್ನು ಬಹು ಎತ್ತರಕ್ಕೆ ಕೊಂಡೊಯ್ಯುವ ಅಂತಃಸತ್ವ ಹೊಂದಿವೆ. ಸರ್ಕಾರದ ಮತ್ತು ಹಣಕಾಸು ಸಂಸ್ಥೆಗಳ ನೆರವಿನಿಂದ ಈ ಉದ್ದಿಮೆಗಳು ಬೆಳವಣಿಗೆಯ ಸ್ತಂಭಗಳಾಗಲು ಸಜ್ಜಾಗುತ್ತಿವೆ. ❑

# ಸಿರಿಗನ್ನಡದ ಸೊಗಡು

* ಅಮರೇಶ ನುಗಡೋಣಿ

> ಪದನಱಿದು ನುಡಿಯಲುಂ ನುಡಿದುದ
> ನಱಿಯಲುಮಾರ್ಪರಾ ನಾಡವರ್ಗಳ್
> ಚದುರರ್ ನಿಜದಿಂ ಕುರಿತೋದದೆಯುಂ
> ಕಾವ್ಯಪ್ರಯೋಗ ಪರಿಣತಮತಿಗಳ್

ಭಾಷೆ ಬರೆಯುವಾಗ ಹೊಸದಾಗಿ ರೂಪುಗೊಳ್ಳುವಂತೆ ಹಾಡುವಾಗಲೂ ಆಡುನುಡಿಯಿಂದ ಭಿನ್ನವಾಗಿಯೇ ಅಭಿವ್ಯಕ್ತವಾಗುವುದು. ರಾಗ, ತಾಳ, ಲಯ, ವಾದ್ಯದ ನೆರವಿನೊಂದಿಗೆ ಹೊಸರೂಪ ಪಡೆದು ವ್ಯಕ್ತವಾಗುತ್ತದೆ. ಇಂಥಲ್ಲೆಲ್ಲ ಕನ್ನಡ ಭಾಷೆ ಸೊಗಡಿನಿಂದ ವಿಜೃಂಭಿಸುತ್ತದೆ.

ಕನ್ನಡ ಭಾಷೆಯ ಸೊಗಡನ್ನು ಎರಡು–ಮೂರು ಆಯಾಮಗಳಲ್ಲಿ ಗುರುತಿಸಬಹುದು. ವೈವಿಧ್ಯಮಯ ಭಾಷಾ ಸೊಗಡನ್ನು ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಕಾಣುತ್ತೇವೆ.

1. ಆರಂಭದಲ್ಲಿ ಕನ್ನಡ ಶಾಸನಗಳಿಗೆ ಬರೆಯುತ್ತಿದ್ದ ಕನ್ನಡ ಭಾಷೆಯ ಸೊಗಡು; ತಾಮ್ರಪತ್ರ, ಬಖೈರುಗಳಿಗೆ ಬಳಕೆಯಾಗುತ್ತಿದ್ದ ಕನ್ನಡವೂ ವಿಶೇಷವಾಗಿರುತ್ತಿತ್ತು.

2. ಕನ್ನಡ ಸಾಹಿತ್ಯದಲ್ಲಿ ಬಳಕೆಯಾದ ಕನ್ನಡ ಭಾಷೆಯ ಸೊಗಡು ಅಸಾಮಾನ್ಯವಾದದ್ದು. ಒಂದು ಸಾವಿರ ವರ್ಷಗಳ ಕನ್ನಡ ಸಾಹಿತ್ಯವನ್ನು ನೂರಾರು ಕವಿಗಳು, ಸಾಹಿತಿಗಳು ಬರೆದು, ಕಾಲಕಾಲಕ್ಕೆ ತಮ್ಮ ಚಿಂತನೆಯಿಂದ ಸಾಹಿತ್ಯವನ್ನು ಶ್ರೀಮಂತಗೊಳಿಸಿದಂತೆ, ಭಾಷೆಯನ್ನೂ ವೈವಿಧ್ಯಮಯಗೊಳಿಸಿದ್ದಾರೆ.

3. ಸಾಹಿತ್ಯಕ್ಕೆ ಬಳಕೆಯಾದ ಭಾಷೆಯ ಸ್ವರೂಪ ಬೇರೆ. ನಾಡಿನ ಉದ್ದಗಲಕ್ಕೂ ಪ್ರಾದೇಶಿಕ ಭಿನ್ನತೆ ಇದ್ದು, ಅದನ್ನು ಮಾತನಾಡುವವರು ಆಡುನುಡಿಯನ್ನು ಸಮೃದ್ಧಗೊಳಿಸಿದ್ದಾರೆ. ಈ ಪ್ರಾದೇಶಿಕ ಭಾಷೆಯ ಸೊಗಡು ಆಡುನುಡಿಯಲ್ಲಿ ಜೀವಂತವಾಗಿದೆ. ಅದು ಸಾಹಿತ್ಯದಲ್ಲಿ ಹಿತಮಿತವಾಗಿ ಅಭಿವ್ಯಕ್ತವಾಗಿದೆ.

4. ಕನ್ನಡ ಭಾಷೆಯ ಸೊಗಡನ್ನು ಆಡಳಿತ ಭಾಷೆಯಲ್ಲಿಯೂ ನೋಡಬಹುದು. ಒಂದು ನಾಡಿನಲ್ಲಿ ರಾಜ್ಯಾಡಳಿತವೂ ತನ್ನದೇ ಆದ ಭಾಷೆಯನ್ನು (ಕನ್ನಡವನ್ನು) ರೂಪಿಸಿಕೊಂಡಿರುತ್ತದೆ. ಅದನ್ನು ರಾಜ್ಯಾಡಳಿತ ಭಾಷೆ ಎನ್ನುತ್ತಾರೆ. ಅದಕ್ಕೂ ಒಂದು ಸೊಗಡಿರುತ್ತದೆ.

ಕವಿರಾಜಮಾರ್ಗ ಪೂರ್ವದಲ್ಲಿ ಕನ್ನಡ ಭಾಷೆಯನ್ನು ಶಾಸನಗಳಿಗೆ ಬರೆಸುವುದಕ್ಕೆ ಬಳಸುತ್ತಿದ್ದರು. ಅಮೂರ್ತವಾಗಿರುವ ಭಾಷೆ; ಅದು ವ್ಯಕ್ತವಾಗುವುದು ಮಾತಿನ ಮೂಲಕ, ನಂತರ ಅಕ್ಷರಗಳ ಮೂಲಕ. ಅಕ್ಷರಗಳಲ್ಲಿ ಸಾಹಿತ್ಯಕ್ಕೂ, ಶಾಸನಕ್ಕೂ, ತಾಮ್ರಪತ್ರಕ್ಕೂ ಬಳಕೆಯಾಗಿ ದಾಖಲಾಗುವಾಗ ಅದಕ್ಕೊಂದು ವ್ಯವಸ್ಥೆ ರೂಪಗೊಳ್ಳುತ್ತದೆ. ಜನರು ಆಡುವ ಭಾಷೆಯನ್ನು ಕವಿಗಳು ತಮ್ಮ ಕಾವ್ಯಕ್ಕೆ, ಸಾಹಿತ್ಯಕ್ಕೆ ಬಳಸುವಾಗ, ಅದನ್ನು ಮರುರೂಪಿಸಿಕೊಂಡು ಬಳಸುತ್ತಾರೆ. ಕುಳಿತು ಏಕಾಂತವಾಗಿ ಯೋಚಿಸಿ ಬರೆಯುವಾಗ, ಭಾಷೆ ಹೊಸದಾಗಿ ಆ ಕವಿಗೆ ಸೀಮಿತವಾದ ರೀತಿಯಲ್ಲಿ ಅಭಿವ್ಯಕ್ತವಾಗುತ್ತದೆ. ಇದು ಲಿಖಿತ ಸಾಹಿತ್ಯಕ್ಕೆ ಮಾತ್ರ ಸೀಮಿತವಾದುದಲ್ಲ.


ಭಾಷೆ ಬರೆಯುವಾಗ ಹೊಸದಾಗಿ ರೂಪುಗೊಳ್ಳುವಂತೆ ಹಾಡುವಾಗಲೂ ಆಡುನುಡಿಯಿಂದ ಭಿನ್ನವಾಗಿಯೇ ಅಭಿವ್ಯಕ್ತವಾಗುವುದು. ರಾಗ, ತಾಳ, ಲಯ, ವಾದ್ಯದ ನೆರವಿನೊಂದಿಗೆ ಹೊಸರೂಪ ಪಡೆದು ವ್ಯಕ್ತವಾಗುತ್ತದೆ. ಇಂಥಲ್ಲೆಲ್ಲ ಕನ್ನಡ ಭಾಷೆ ಸೊಗಡಿನಿಂದ ವಿಜೃಂಭಿಸುತ್ತದೆ.

### ಆರಂಭದಲ್ಲಿ ಶಾಸನಗಳಿಗೆ ಭಾಷೆ ಹೀಗೆ ಬಳಕೆಯಾಗುತ್ತಿತ್ತು;

**ಫಣಿಮಣಿ ಅನ್ತು ಭೋಗಿ ಫಣದುಳ್ಮಣಿವಿಲ್ಲನದೋನ್**
**ರಣಮುಖದುಳ್ಳೆಕೋಲ ನೆರಿಯಕ್ಕುಮನಿನ್ದ್ಯಗುಣನ್**
**ಪ್ರಣಯಿಜನಕ್ಕೆ ಕಾಮನಸಿತೋತ್ಸಲವರ್ಣ್ಣನವನ್**
**ಗುಣಮಧುರಾಂಕ ದಿವ್ಯ ಪುರುಷನ್ ಪುರುಷಪ್ರವರನ್**
**(ತಮಟಕಲ್ಲು ಶಾಸನ; ಕ್ರಿ. ಶ. ಸು.೫೦೦)**

**‘ಹೂವಿನಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ**
**ಮೊಗ್ಯಾಗೆ ಕಣ್ಣ ತೆರದಾನ! ಅಂಗಯನ**
**ನೋಡೋಕೆ ನಿದ್ದೆ ಬಯಲಾದೋ’**

* ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ (ಬಳ್ಳಾರಿ) – 583276.




ಜನಪದರು ಕಟ್ಟಿದ ಹಾಡು ಇದು. ಇದರಲ್ಲಿ ಕನ್ನಡ ಭಾಷೆಯ ಸೊಗಡನ್ನು ನೋಡುತ್ತೇವೆ. ಜನಪದ ಕಾವ್ಯ-ಸಾಹಿತ್ಯ ಮನುಷ್ಯರ ನಾಗರೀಕತೆಯೊಂದಿಗೆ ಬೆಳೆದುಬಂದಿದೆ ಎನ್ನಿ. ಆಡುಮಾತಿನಂತೆ ಕಂಡರೂ, ಅದು ಆಡುಮಾತನ್ನು ಮೀರಿದ್ದು. ಆಡುಮಾತು ಕಾವ್ಯದ ಮಾತಾದಾಗ ಅದರಲ್ಲಿ ವಿಶೇಷವಾದದ್ದು ಇರುತ್ತದೆ. ಅದೇ ಸೊಗಡಿಗೆ ಕಾರಣವಾಗುತ್ತದೆ.

ಸಾಹಿತ್ಯದಲ್ಲಿ ಭಾಷೆಯ ಸೊಗಡಿಗೆ ಕಾರಣವಾಗುವುದು ಕವಿಯ ಭಾಷಾ ಸಾಮರ್ಥ್ಯ. ಆತನ ಸೃಜನಶೀಲತೆ. ಕನ್ನಡ ಸಾಹಿತ್ಯದಲ್ಲಿ ಸಾವಿರಾರು ಕವಿಗಳು, ಸಾಹಿತಿಗಳು ಕಾಣಿಸಿಕೊಂಡಿದ್ದಾರೆ. ನೂರರಲ್ಲಿ ಒಬ್ಬ ಕವಿ ಮಾತ್ರ ಪ್ರಸಿದ್ಧಿಯನ್ನು ಹೊಂದುತ್ತಾನೆ. ಕಾರಣ ಆತನ ಕಾವ್ಯದ ಸೊಗಡು. ವಸ್ತು, ಭಾಷೆ, ಅದರ ಅನನ್ಯ ಅಭಿವ್ಯಕ್ತಿಯಿಂದ ಕಾವ್ಯ ಸೊಗಸಾಗಿ ಕಾಣುತ್ತದೆ. ಪಂಪನನ್ನು ಓದುವುದು, ಮತ್ತೆ ಮತ್ತೆ ಓದುವುದು ಯಾಕೆಂದರೆ ಆ ಕಾವ್ಯದ ಶಕ್ತಿಯಿಂದಾಗಿ ಓದಿಗೆ ಒಳಗಾಗುತ್ತಲೇ ಇರುತ್ತದೆ.

**'ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಮಿಭೂಟಖಡ್ಗ**
**ಮಂಡಲೋ**
**ತ್ಪಲವನ ವಿಭಮಭಮರಿಯಪ್ಪ ಮನೋಹರಿ**
**ರಾಜ್ಯಲಕ್ಷ್ಮಿ ಭೂ**
**ವಸಯಮನಯ್ಯನಿತ್ತುದನಾಂ ನಿನಗಿತ್ತೆ ನಿದೇವುದಣ್ಣಿ ನೀ**
**ನೊಲಿದ ಲತಾಂಗಿಗಂ ಧರೆಮಾಟಿಸಿದಂದು ನೆಗಳ್ತೆ**
**ಮಾಸದೆ' (14– 130)**

ಪಂಪನ 'ಆದಿಪುರಾಣ'ದಿಂದ ಮೇಲಿನ ವೃತ್ತವನ್ನು ಉಲ್ಲೇಖಿಸಿದೆ. ಬಾಹುಬಲಿ ಮತ್ತು ಭರತನ ನಡುವಿನ ಯುದ್ಧ ಪ್ರಸಿದ್ಧವಾದದ್ದು. ಬಾಹುಬಲಿ ಗೆದ್ದೂ ಕೂಡ ತ್ಯಾಗ-ವೈರಾಗ್ಯದ ಮಾತಾನ್ನಾಡುತ್ತಾನೆ. ಇಲ್ಲಿ ವ್ಯಂಗ್ಯವೂ ಇದೆ. ಪಂಪನ ಭಾಷಾ ಸೊಗಡು ಇಲ್ಲಿ ಓದುಗರನ್ನು ಬೆರಗುಗೊಳಿಸುತ್ತದೆ.

ಕನ್ನಡದ ಚೆಲುವನ್ನು ಚಂಪು ಕವಿಗಳು ವೃತ್ತ, ಕಂದ, ವಚನ ರೂಪಗಳಲ್ಲಿ ವ್ಯಕ್ತಪಡಿಸಿದಂತೆ, ಹರಿಹರ ಕವಿ ರಗಳೆಯನ್ನು ಬರೆದು ಕನ್ನಡ ಭಾಷೆಗೆ ಹೊಸ ಆಯಾಮ ಕಲ್ಪಿಸಿದ. ಶರಣರ ಚರಿತ್ರೆಗಳನ್ನು ಮರುರೂಪಿಸಿ ರಗಳೆಯಲ್ಲಿ ಬರೆದದ್ದು, ಆ ರಗಳೆಯ ಭಾಷೆಯಲ್ಲಿ ಭಕ್ತಿಭಾವ, ಆವೇಶ, ತನ್ಮಯಗಳನ್ನು ಸುಲಲಿತ ಕನ್ನಡ ನುಡಿಯಲ್ಲಿ ರಚಿಸಿ, ಕನ್ನಡದ ಸೊಗಡನ್ನು ಹೆಚ್ಚಿಸಿದ ಕವಿ, ಹರಿಹರ.

ಹರಿಹರನಿಗಿಂತ ಮುಂಚೆ ಕನ್ನಡ ಭಾಷೆಯನ್ನು ವಚನಕಾರರು ತಮ್ಮ ಅನುಭಾವದ ಮಾತುಗಳಿಗೆ ಬಳಸಿದ ಚಂದ ಅನನ್ಯವಾದದ್ದು. ವಚನಗಳ ಭಾಷೆಯ ಸೊಗಡನ್ನು ಓದಿಯೇ ಅರಿಯಬೇಕು. ಅಲ್ಲಮಪ್ರಭು ಬರೆದ ವಚನಗಳ ಭಾಷೆ ಕನ್ನಡ ಸಾಹಿತ್ಯದಲ್ಲಿಯೇ ಅಪರೂಪದ್ದಾಗಿ ದಾಖಲಾಗಿದೆ. ಭಾಷೆಯಿಂದ ಅಭಿವ್ಯಕ್ತಿಸುವ ಕವಿತೆ, ಗದ್ಯ, ನಾಟಕ ಯಾವುದೇ ಇರಲಿ, ಅದಕ್ಕೊಂದು ಮಿತಿ ಇರುತ್ತದೆ. ಆದರೆ ಅಲ್ಲಮಪ್ರಭು ತನ್ನ ವಚನಗಳಲ್ಲಿ ಬಳಸಿದ ಭಾಷೆ, ಆ ಭಾಷೆಯೇ ನಾಚುವಂತೆ ಬಳಸಿದ್ದಾನೆ. 'ಭಾಷೆ ಎಂಬುದು ಪ್ರಾಣಘಾತಕ' ಎಂದು ಹೇಳಿದ ಅಲ್ಲಮಪ್ರಭುವಿನ ಕೈಯಲ್ಲಿ ಕನ್ನಡ ಭಾಷೆ ಇನ್ನಿಲ್ಲದ ಸೊಗಡನ್ನು ಕಂಡಿತು.

**'ಸಂಜೆಯ ಮಂಜಿನ ಕಪ್ಪು ಅಂಜಿದಡೆ ಶಂಕೆ**
**ತದ್ರೂಪವಾಗಿ ನಿಂದಿತ್ತು**
**ತನ್ನ ಭಾವದ ನಟನೆ ನಡೆವನ್ನಕ್ಕರ ನಡೆಯಿತ್ತು**
**ಅದು ನಿಂದಲ್ಲಿಯೆ ನಿಂದಿತ್ತು**
**ಅದರಂತುವನರಿದಡೆ ಹಿಂದೆ ಹುಸಿ,**
**ಮುಂದೆ ಕೂಡಲ ಸಂಗಮದೇವರ ನಿಲವು ತಾನೆ'**
**(ಬಸವಣ್ಣ)**

**'ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು**
**ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು**
**ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ**
**ತಮ್ಮೊಳಗಿರ್ದು ಮಹಾಘನವನರಿಯರು**
**ಚೆನ್ನಮಲ್ಲಿಕಾರ್ಜುನಾ' (ಅಕ್ಕಮಹಾದೇವಿ)**

ಕನ್ನಡ ಭಾಷೆಯನ್ನು ವಚನಕಾರರು ಬಳಸಿ, ಬೌದ್ಧಿಕ ಶಕ್ತಿಯಿಂದ ಉಪಮೆ, ರೂಪಕಗಳನ್ನು ಬಳಸಿ ಅದರ ಸೊಗಡನ್ನು ಹೆಚ್ಚಿಸಿದರು. ಅಲ್ಲಮ, ಬಸವ, ಅಕ್ಕ, ಚೆನ್ನಬಸವಣ್ಣ, ಸಿದ್ಧರಾಮ ಮುಂತಾದ ವಚನಕಾರರು ಅಕ್ಷರ ವಿದ್ಯೆಯನ್ನು ಕಲಿತಿರಬಹುದು. ಇನ್ನಿತರ ನೂರಾರು ವಚನಕಾರರು ಕುಲ ಕಸುಬಿನ ಕಾಯಕ

ಜೀವಿಗಳಾಗಿ ಬದುಕಿದರು. ಅವರ ಕಾಯಕ ಮತ್ತು ವಚನ ಅಭಿವ್ಯಕ್ತಿ ನಡುವೆ ಅಂತರ ಇರಲಿಲ್ಲ. ಕಾಯಕ ಮತ್ತು ಕಾವ್ಯ ಎರಡಳಿದು ಒಂದಾಗಿದ್ದವು.

ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಕನ್ನಡವನ್ನು ಸರಳ ಸುಲಲಿತವಾಗಿ ಬಳಸುವ ಮೂಲಕ ಮಧುರತೆಯನ್ನು ಮೂಡಿಸಿದರು. ನೂರಾರು ದಾಸರು ಕೀರ್ತನೆಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವೈದಿಕರಾದ ಹರಿದಾಸರು ದೇವರ ಕೀರ್ತನೆಗಳನ್ನು ಕನ್ನಡ ಭಾಷೆಯಲ್ಲಿ ಪ್ರಪ್ರಥಮವಾಗಿ ರಚಿಸಿದರು;

**'ಸೆರಗ ಬಿಡೋ ರಂಗ ಸೆರಗ ಬಿಡೋ**
**ಸಾರಿ ಹೇಳುವೆನೊಮ್ಮೆ ಸೆರಗ ಬಿಡೋ**
**ಅತ್ತೆ ಕಂಡರೆ ಎನ್ನ ಹತ್ತಿರ ಸೇರಳು**
**ಚಿತ್ತದೊಲ್ಲಭ ಎನ್ನ ಸೆರಗ ಬಿಡೋ**

**ಮಾವ ಕಂಡರೆ ಎನ್ನ ಮಾನ ಕಳೆವ**
**ಜೀವದುರಿಸರ ಎನ ಕೈಯ ಬಿಡೋ**
**ಗಂಡ ಕಂಡರೆ ಎನ್ನ ಖಂಡಿಸದೆ ಬಿಡ**
**ಬಂಡು ಮಾಡಿದರಯ್ಯ ಪುರಂದರ ವಿಠ್ಠಲ'**
**(ಪುರಂದರದಾಸರು)**

ಈ ಕೀರ್ತನೆಯಲ್ಲಿ ರತಿಭಾವ ಇದ್ದಂತೆ ಕಾಣುತ್ತದೆ. ಆದರೆ ಇದರ ಸ್ವರೂಪ ಬೇರೆಯಿದೆ. ಭಕ್ತ ತನ್ನ ಇಷ್ಟ ದೇವರೊಂದಿಗೆ ಒಂದಾಗುವ ಸ್ಥಿತಿಯನ್ನು ಹೇಳುವ ರಚನೆಯಿದು. ಭಕ್ತಿ ಪಂಥಗಳಲ್ಲಿ ಕಾಣುವ ಅಪರೂಪದ ಭಾವವಿದು. ಸರಳವಾಗಿ ಹೇಳುವ ಮೂಲಕ ಗಾಢವಾದ ಅರ್ಥ ಹೊಮ್ಮಿಸುವ ರಚನೆಗಳು ಬೇಕಾದಷ್ಟಿವೆ. ವಚನಗಳಲ್ಲಿಯೂ ಭಕ್ತ–ಪರಮಾತ್ಮನ ನಡುವಿನ ಸಂಬಂಧದಲ್ಲಿ, ಗುರುಶಿಷ್ಯರ ಸಂಬಂಧದಲ್ಲಿ ತತ್ವಪದಕಾರರ ಕೃತಿಗಳಲ್ಲಿ ಈ ಭಾವ ಅಥವಾ ಈ ತತ್ವವಿರುವುದನ್ನು ಕಾಣುತ್ತೇವೆ.




ಪುರಂದರದಾಸರ ಈ ಕೀರ್ತನೆಯಲ್ಲಿ, ಹೆಣ್ಣಿನ ಜತೆ ರಂಗನ ಸರಸವನ್ನು ಸೊಗಸಾಗಿ ಹೇಳಲಾಗಿದೆ. ಅತ್ತೆ, ಮಾವ, ಗಂಡ ಮುಂತಾದ ಪದಗಳು ಆಕೆಯೊಬ್ಬ ಸಂಸಾರಿ ಎಂಬುದನ್ನು ಸೂಚಿಸುತ್ತವೆ. ಹರಿದಾಸ, ಹರಿಭಕ್ತನಿಗೆ ಹರಿಯ ಸೆಳೆತ ಹೆಚ್ಚಾದಾಗ, ಸಂಸಾರ ಒಂದು ಅಡ್ಡಿಯಾಗುವ, ಬಂಧನವಾಗುವ, ಎಲ್ಲ ಹರಿದುಕೊಂಡು ಹರಿದಾಸನಾಗುವ ಹಂತ ತಲುಪುವ ಹಂತದ ಸ್ಥಿತಿಯನ್ನು ಸೂಚಿಸುವ ಕೀರ್ತನೆ ಇದು. ಭಾಷೆಯ ಸೊಗಡನ್ನು ಗಮನಿಸುವಂತಿದೆ.

ಹರಿದಾಸರಿಂದ ಕೀರ್ತನೆಗಳು ರಚನೆಗೊಂಡಂತೆ ಹಲವು ಜಾತಿ ಸಮುದಾಯಗಳು ಒಂದುಗೂಡಿ ರಚಿಸಿದಂತಿರುವ ತತ್ವಪದಗಳಲ್ಲಿಯೂ ಕನ್ನಡ ಭಾಷೆಯ ಸೊಗಡನ್ನು ನೋಡುತ್ತೇವೆ. ದೇಹ ಮತ್ತು ಮನಸ್ಸಿನ ಅಂತರ್‌ಸಂಬಂಧವನ್ನು ಗಟ್ಟಿಗೊಳಿಸಲು ತತ್ವಪದಕಾರರು ಪ್ರಯತ್ನಿಸಿದರು. ಬಹುತೇಕ ತತ್ವಪದಕಾರರು ಅವಿದ್ಯಾವಂತರು. ತಳವರ್ಗದವರು, ಬಡವರು, ಸಮುದಾಯಗಳನ್ನು ಒಟ್ಟುಗೂಡಿಸುವ ನೆಲೆಯಲ್ಲಿ ತತ್ವಪದ ಹಾಡಿದರು. ತತ್ವಪದಗಳಲ್ಲಿ ಕನ್ನಡ ಭಾಷೆಯ ಆಡುನುಡಿ ಯಥಾರೀತಿ ಬಳಕೆಯಾದಂತೆ ಕಾಣುತ್ತದೆ. ಈ ಹಾಡುಗಳನ್ನು ಕಟ್ಟುವವರಿಗೆ ತಮ್ಮ ಒಳದನಿ ಹೊರಬರುವುದು ಮುಖ್ಯವಾದಂತೆ ಕಾಣುತ್ತದೆ. ತತ್ವ ಬಿಂಬಿತವಾದರೆ ಸಾಕು. ಭಾಷೆಯ ಕಸರತ್ತನ್ನು ಕಾಣಿಸಲು ಪ್ರಯತ್ನಿಸಲಿಲ್ಲ.

* * *

ಕನ್ನಡ ಭಾಷೆಯ ಸೊಗಡನ್ನು ಆಧುನಿಕ ಕವಿಗಳ, ಸಾಹಿತಿಗಳ ಸಾಹಿತ್ಯದಲ್ಲಿ ನೋಡುತ್ತೇವೆ. ಆಧುನಿಕ ಪೂರ್ವ ಸಾಹಿತ್ಯದಲ್ಲಿ ಪ್ರಾಚೀನ ಸಾಹಿತ್ಯ, ಮಧ್ಯಕಾಲೀನ ಸಾಹಿತ್ಯ ಎಂಬ ಎರಡು ದೊಡ್ಡ ಹಂತಗಳಲ್ಲಿ ಸಾಹಿತ್ಯ ರಚನೆಯಾಯಿತು. ಅನೇಕ ಕಾವ್ಯರೂಪಗಳು ಕಾಲಕಾಲಕ್ಕೆ, ಕಾಲದ ಅಗತ್ಯಕ್ಕೆ ತಕ್ಕಂತೆ ಹುಟ್ಟಿಬೆಳೆದವು. ಚಂಪೂ, ವಚನ, ಕೀರ್ತನೆ, ಷಟ್ಪದಿ, ತತ್ವಪದ, ತ್ರಿಪದಿ, ಸಾಂಗತ್ಯ ಮುಂತಾದವುಗಳಲ್ಲದೆ ಇನ್ನೂ ಅನೇಕ ರೂಪಗಳು ಮುನ್ನೆಲೆಗೆ ಬಂದಿವೆ. ಎಲ್ಲ ರೂಪಗಳು ಕಾವ್ಯದ ಅಡಿಯಲ್ಲಿಯೇ ಬರುತ್ತವೆ.

ಆಧುನಿಕ ಸಾಹಿತ್ಯ ಆರಂಭವಾದ ಮೇಲೆ ಭಾವಗೀತೆ, ಕತೆ, ಕಾದಂಬರಿ, ನಾಟಕ, ಲಲಿತಪ್ರಬಂಧ, ವಿಮರ್ಶೆ, ಸಂಶೋಧನೆ, ಆತ್ಮಚರಿತ್ರೆ, ಜೀವನ ಚರಿತ್ರೆ, ಅಂಕಣ, ಚಿಂತನ ಮುಂತಾದ ಪ್ರಕಾರಗಳು ಹುಟ್ಟಿ ಬೆಳೆದವು. ಇಂಗ್ಲಿಷ್ ಭಾಷೆಯನ್ನು ಕಲಿತ ವಿದ್ಯಾವಂತರು, ಆ ಭಾಷೆಯ ಸತ್ವ ಸೊಗಡನ್ನು ಕಂಡರು, ಅರಗಿಸಿಕೊಂಡರು. ಆ ಮೂಲಕ ಕನ್ನಡ ಭಾಷೆಯನ್ನು ವೈವಿಧ್ಯಮಯವಾಗಿ ರಚಿಸಿ, ಕನ್ನಡದ ಸೊಗಡನ್ನು ಅಪಾರವಾಗಿ ಹೆಚ್ಚಿಸಿದರು. ಆಧುನಿಕಪೂರ್ವ ಸಾಹಿತ್ಯದ ಮೇಲೆ ಸಂಸ್ಕೃತ ಭಾಷೆಯ ಪ್ರಭಾವವಿತ್ತು. ಆಧುನಿಕ ಸಾಹಿತ್ಯದ ಮೇಲೆ ಇಂಗ್ಲಿಷ್ ಪ್ರಭಾವ ಕಾಣುತ್ತದೆ. ಇಂಗ್ಲಿಷ್–ಕನ್ನಡದ ಸಂಬಂಧದಿಂದಲೂ ಕನ್ನಡ ಭಾಷೆಯ ಬೆಳವಣಿಗೆ ಆಯಿತು.

> **ನರಕಕ್ಕ್ ಇಳ್ಸಿ ನಾಲ್ಗೆ ಸೀಳ್ಸಿ**
> **ಬಾಯ್ ಒಲಿಸಾಕಿದ್ರೂನೆ-**
> **ಮೂಗ್ನಲ್ ಕನ್ನಡ್ ಪದವಾಡ್ತೀನಿ!**
> **ನನ್ ಮನಸನ್ ನೀ ಕಾಣೆ!**
>
> **– ರತ್ನನ ಪದಗಳು**

ಸಂಶೋಧನಾ ಭಾಷೆ, ವಿಮರ್ಶೆಯ ಭಾಷೆ ಬೆಳೆದವು. ಅದೇ ರೀತಿ ಹತ್ತಾರು ಸಾಹಿತ್ಯ ಪ್ರಕಾರಗಳು ಹುಟ್ಟಿಕೊಂಡು ಅವುಗಳಿಗೆ ಅವುಗಳದೇ ರಚನಾ ವಿನ್ಯಾಸವಿದ್ದಂತೆ, ಭಾಷೆಯ ವಿನ್ಯಾಸಗಳೂ ಕಾಣಿಸಿಕೊಂಡವು. ಭಾವಗೀತೆಯ ಭಾಷೆ, ಲಲಿತ ಪ್ರಬಂಧದ ಭಾಷೆ, ನಾಟಕದ ಭಾಷೆ ಭಿನ್ನ ಭಿನ್ನವಾಗಿ ಕಾಣಿಸಿಕೊಂಡವು. ಶಕ್ತ ಬರಹಗಾರರು ತಮ್ಮದೇ ಭಾಷೆಯ ಸೊಗಡನ್ನು ದಾಖಲಿಸಿದರು. ಬೇಂದ್ರೆ, ಪು.ತಿ.ನ, ಕುವೆಂಪು, ಡಿ.ವಿ.ಜಿ, ಮಾಸ್ತಿ, ಗೊರೂರು, ಕಾರಂತರು ಮೊದಲ ತಲೆಮಾರಿನ ಲೇಖಕರಾಗಿ ಹಲವು ಪ್ರಕಾರಗಳಲ್ಲಿ ತಮ್ಮ ಸಾಹಿತ್ಯವನ್ನು ರಚಿಸಿದರು. ಎಲ್ಲರ ಭಾಷಾಶೈಲಿ ಭಿನ್ನ ಭಿನ್ನ. ಅವುಗಳ ಸೊಗಡು ಕೂಡ ಭಿನ್ನ. ಕುವೆಂಪು ಅವರ ಕನ್ನಡ ಭಾಷೆಯ ರಚನೆಗೆ ಅವರದೇ ವಿಶಿಷ್ಟತೆಯಿದೆ. ಅದರಂತೆ ಬೇಂದ್ರೆ ಕವಿತೆಗಳ ಭಾಷಾ ಸೊಗಡನ್ನು ಕನ್ನಡ ಓದುಗರು ಅರಿತಿದ್ದಾರೆ. ಕರಾವಳಿಯ ಶಿವರಾಮ ಕಾರಂತರ ಭಾಷಾ ರಚನೆ ಇವರಿಗಿಂತ ಭಿನ್ನ.

ಮೊದಲ ತಲೆಮಾರಿನ ಲೇಖಕರ ಹರವು ಅಪಾರ. ಅವರು ರಚಿಸಿದ ಸಾಹಿತ್ಯವೂ ಅಪಾರ. ಎಲ್ಲ ಪ್ರಕಾರಗಳಲ್ಲಿ ಎಲ್ಲರೂ ಸಾಹಿತ್ಯ ರಚಿಸಿದ್ದಾರೆ. ಅವರ ಭಾಷಾ ಪ್ರೌಢಿಮೆ ಹಿರಿದು. ಹಾಗಾಗಿ ಕುವೆಂಪು ಶೈಲಿ, ಕಾರಂತ ಶೈಲಿ, ಬೇಂದ್ರೆ ಶೈಲಿ ಎಂದೇ ಪ್ರಸಿದ್ಧಿ ಪಡೆದಿವೆ. ಶೈಲಿ ಅಂದರೆ ಭಾಷಾ ಸೊಗಡು ಎಂದೇ ಅರ್ಥ.

ಗದ್ಯ ಮತ್ತು ಪದ್ಯ ಎರಡು ಪ್ರಕಾರಗಳು ಆಧುನಿಕ ಸಾಹಿತ್ಯದ ವಿಶಿಷ್ಟ ಪ್ರಕಾರಗಳಾಗಿವೆ. ಗದ್ಯದ ಸೊಗಡು, ಪದ್ಯದ ಭಾಷಾ ಸೊಗಡು ಎರಡೂ ಅನನ್ಯವೇ. ಅವುಗಳನ್ನು ಓದಿಯೇ ಸವಿಯಬೇಕು.

ಕುವೆಂಪು ಅವರ 'ಬೈಗಿನಲ್ಲಿ' ಕವನದ ಭಾಷಾ ಸೊಗಡು ಹೀಗಿದೆ:

**ಉರಿದು ಉರಿದು ಉರಿದು ಸಂಜೆ**
**ಮೆಲ್ಲಮೆಲ್ಲನಾಯ್ತು ಬಂಜೆ;**
**ಮುಗಿಲು ಮಾಗಿ, ಬಣ್ಣವೋಗಿ,**
**ಬೂದಿಯಾಗುತಿದ್ದಲಾಗಿ,**
**ನಿಶಿಯ ಮಸಿಯ ಮುದ್ದೆ ಬಿತ್ತು;**
**ಭುವನ ಕವನವಳಿಸಿದತ್ತು!**

**ಆದರದೋ ಮೇಲೆ ನೋಡು!**
**ನೂರುತಾರೆ, ಸಗ್ಗವೀಡು!**

**ಕಾಂತಿ ಕಾಣದಿರುವ ನನ್ನಿ**
**ಅಂದಕಾರ ಸುಲಭವೆನ್ನಿ!**

**ಸಾವು ನನ್ನನಳಿಸಲಿಲ್ಲ**
**ತಾರೆಯಾಗಿ ಹೊಳೆವೆನಲ್ಲಿ!**

ಬೇಂದ್ರೆ 'ಕುರುಡು ಕಾಂಚಾಣ' ಕವಿತೆಯ ಸಾಲಿಗಳಲ್ಲಿ ಭಾಷೆಯ ಮಾಂತ್ರಿಕತೆಯನ್ನು ಗಮನಿಸಬಹುದು.

**ಕುರುಡು ಕಾಂಚಾಣ ಕುಣಿಯುತಲಿತ್ತು**
**ಕಾಲಿಗೆ ಬಿದ್ದವರ ತುಳಿಯುತಲಿತ್ತೊ**
**ಬಾಣಂತಿಯೆಲುಬು ಸಾ**
**ಬಾಣದ ಬಿಳುಪಿನ**
**ಕಾಣದ ಬಿಳುಪಿನ**
**ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ**
**ಸಣ್ಣ ಕಂದಮ್ಮಗಳ**
**ಕಣ್ಣಿನ ಕವಡೀಯ**
**ತಣ್ಣನ್ನಜೋಮಾಲಿ ಕೊರಳೊಳಗಿತ್ತೋ.**

ಬೇಂದ್ರೆಯವರದ್ದು ಜಾನಪದ ಭಾಷೆಯಿಂದ ರೂಪಿತವಾದ ಕಾವ್ಯ ಭಾಷೆ ಎನ್ನುತ್ತಾರೆ. ಹಾಗನ್ನುವುದು ಸರಿಯಾದ ಅಭಿಪ್ರಾಯವಲ್ಲ. ಜನಪದ ಭಾಷೆಯಿಂದ ರೂಪಿತವಾದರೂ ಅದು ಬೇಂದ್ರೆ ನುಡಿಗಟ್ಟು ಆಗಿ ನಿಂತಿದೆ. ಕುವೆಂಪು ಅವರದು ಶಿಷ್ಟ ಭಾಷೆ. ಸಂಸ್ಕೃತದಿಂದ ಪ್ರಭಾವಿತವಾದದು. ಅದರೂ ಅದು ಕುವೆಂಪು ಸೃಷ್ಟಿಸಿದ ನುಡಿಗಟ್ಟು.


ಕನ್ನಡ ನವ್ಯ ಸಾಹಿತ್ಯದ ಭಾಷೆ ಕಸರತ್ತಿನದು. ಸಂಕೇತಗಳ ಮೂಲಕ ಭಾವನೆಗಳನ್ನು ವ್ಯಕ್ತ ಪಡಿಸುತ್ತಿದ್ದರು, ಅವರದೂ ವಿಶಿಷ್ಟವೇ ಆಗಿದೆ.

ಕನ್ನಡ ಭಾಷೆಯನ್ನು ಶಿಷ್ಟವಾಗಿ ರೂಪಿಸಿಕೊಂಡರೂ ಅನೇಕ ಬರಹಗಾರರ ಭಾಷಾ ಶೈಲಿ ಅಥವಾ ಸೊಗಡು ಓದುಗರನ್ನು ಬೆರಗುಗೊಳಿದೆ. ಕನ್ನಡ ಭಾಷೆಯನ್ನು ವೈವಿಧ್ಯಮಯವಾಗಿಸಿದೆ. ಅಡಿಗ, ಅನಂತಮೂರ್ತಿ, ಚಿತ್ತಾಲ, ಲಂಕೇಶ, ತೇಜಸ್ವಿ, ಶಾಂತಿನಾಥ ದೇಸಾಯಿ ಇವರೆಲ್ಲರ ಗದ್ಯ ಮತ್ತು ಪದ್ಯ ವಿಶಿಷ್ಟ ಭಾಷಾ ಸೊಗಡಿನಿಂದ ಕೂಡಿವೆ. ಲಂಕೇಶರ ಗದ್ಯ ಅನನ್ಯ. ತೇಜಸ್ವಿಯವರ ಗದ್ಯದಲ್ಲಿ ಹಾಸ್ಯ ಮತ್ತು ಕುತೂಹಲ ಸೇರಿ ಅವರದೇ ಭಾಷಾ ಸೊಗಡು ರಚನೆಯಾಗಿದೆ.

70ರ ದಶಕದಿಂದ ತಳವರ್ಗಗಳು ಎಚ್ಚೆತ್ತುಕೊಂಡವು. ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಆಲೋಚಿಸತೊಡಗಿದವು. ಆ ಮೂಲಗಳಿಂದ ಬಂದ ಲೇಖಕರು ಬದುಕಿನ ಅನುಭವ, ಅದರದೇ ನೆಲೆಯ ಭಾಷೆಯನ್ನು ಬಳಸಿ ಸಾಹಿತ್ಯ ರಚಿಸತೊಡಗಿದಾಗ ಪ್ರಾದೇಶಿಕ ಪ್ರಭೇದಗಳು ಅಭಿವ್ಯಕ್ತಗೊಂಡವು. ತಮ್ಮ ಬದುಕು, ತಮ್ಮ ಭಾಷೆ ಅಧಿಕೃತ ಎಂದು ಘೋಷಿಸಿಕೊಂಡವು.

ಕನ್ನಡ ಭಾಷೆ ಒಂದಲ್ಲ ಹಲವು ಇವೆ ಎಂಬುದನ್ನು ತೋರಿಸಲಾಯಿತು. ಆಡುಮಾತಿನ ಶೈಲಿಯನ್ನು ರೂಪಿಸಿಕೊಂಡು ಬರೆಯಲಾರಂಭಿಸಿದರು. ಚೆನ್ನಣ್ಣ ವಾಲೀಕರರು ತಮ್ಮ 'ಬೆಳ್ಳ' ಕಾದಂಬರಿಯನ್ನು ಕಲಬುರಗಿಯ ಆಡುಮಾತಿನಲ್ಲಿ ಬರೆದರು. ಅದರ ಸೊಗಡನ್ನು ಓದುಗರು ಬಲ್ಲರು. ಮುಂದೆ ದೇವನೂರು ಮಹಾದೇವ ತಮ್ಮ ಕತೆ–ಕಾದಂಬರಿಗಳಿಗೆ ತಮ್ಮ ಪ್ರಾಂತ್ಯದ(ಮೈಸೂರು–ನಂಜನಗೂಡು) ಆಡುನುಡಿಯನ್ನು ಬಳಸಿದರು. ಬಳಸುವಾಗ ಸಾಹಿತ್ಯವಾಗಿ ರೂಪಿಸಿಕೊಂಡು ಬಳಸಿದರು. ಉದಾ:

**ಆಗಲೀಗ ಯಾಡನಿಗ ಯಾಕಕನಿ ದುಕ್ಕವು**
**ಅದೆಲ್ಲಿಂದಲೋ ಬಂದು ಅವನ**




**ಮಯ್ದುಂಬಿತು. ದುಕ್ಕಳಸನು. ಆ ದುಕ್ಕಳಸೊ ದುಕ್ಕವು**
**ಅವನ ಮಯ್ಯಿಡೀ ಎದ್ದು ಗೋಳೋ**

**ಎಂದು ಹೊರಬಂದು ಆ ಗುಳ್ಳು ಆವರಿಸಿ ಆ**
**ಗಿಳ್ಳಿಂದಾಲೂ ಎದ್ದು ಆ ಊರ**

**ಆವರಿಸಿಕೊಂಡು ಆ ಊರಿಂದಲೂ ಎದ್ದು**
**ಬಾನುದುಂಬಿತು. (ಕುಸುಮಬಾಲೆ)**

ಇದನ್ನು ಆಡುನುಡಿ ಎಂದು ಗುರುತಿಸುವುದು ಸರಳವಾದೀತು. ಇದು ಮಹಾದೇವರ ಭಾಷಾ ಶೈಲಿ ಅಥವಾ ಭಾಷಾ ಸೊಗಡು. ಕನ್ನಡ ಸಾಹಿತ್ಯಾಸಕ್ತರು ಈ ಬಗೆಯ ಕನ್ನಡದ ಸೊಗಡನ್ನು ಉಮೇದಿಯಿಂದಲೇ ಸ್ವೀಕರಿಸಿದರು. ಆಡುಮಾತಿನಲ್ಲಿ ಸಾಹಿತ್ಯ ರಚನೆ ಹೆಚ್ಚಾಯಿತು. ಕುಂದಾಪುರದ ಆಡುನುಡಿಯ ಸೊಗಡನ್ನು ವೈದೇಹಿ ತಮ್ಮ ಕತೆಗಳಲ್ಲಿ ತಂದರು.

ಹಾಗೆ ನೋಡಿದರೆ ಕನ್ನಡ ನುಡಿ ಒಂದಿಲ್ಲ, ಹಲವಿದೆ ಎಂಬುದು ಮೊದಲಿನಿಂದಲೂ ವಿದ್ವಾಂಸರು ಬಲ್ಲರು. ಜನಪದರೂ ಬಲ್ಲರು. ಕೆಲವರು 'ಉತ್ತರ ಕರ್ನಾಟಕದ ಭಾಷೆ' ಎಂದು ಗುರುತಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಬರುವ ಬೀದರ್, ಕಲಬುರಗಿ, ಯಾದಗಿರಿ, ಬಳ್ಳಾರಿ, ರಾಯಚೂರು, ಕೊಪ್ಪಳ (ಹೈದರಾಬಾದ್–ಕರ್ನಾಟಕ), ವಿಜಾಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳು ಮತ್ತು ಧಾರವಾಡ–ಹುಬ್ಬಳ್ಳಿ, ಗದಗ ಇಷ್ಟು ಜಿಲ್ಲೆಗಳಿದ್ದು ಇಲ್ಲಿಯ ಜನರು ಒಂದೇ ಬಗೆಯ ಆಡುಮಾತನ್ನು ಆಡುವುದಿಲ್ಲ. ಬೀದರ್ ಜಿಲ್ಲೆಯ ಕನ್ನಡ ಭಾಷೆ ಬೇರೆ. ಮರಾಠಿ–ಉರ್ದು–ಕನ್ನಡ ಮಿಶ್ರಿತ ನುಡಿಯಿದೆ. ಕಲಬುರಗಿ ಜಿಲ್ಲೆಯ ಕನ್ನಡ ಭಾಷೆ ಉರ್ದು–ಕನ್ನಡ ಮಿಶ್ರಿತ ಭಾಷೆಯನ್ನಾಡುತ್ತಾರೆ. ರಾಯಚೂರು ಜಿಲ್ಲೆಯ ಜನರು ಉರ್ದು–ತೆಲುಗು–ಕನ್ನಡ ಮಿಶ್ರಿತ ಭಾಷೆಯನ್ನಾಡುತ್ತಾರೆ. ಧಾರವಾಡದ ಆಡುನುಡಿಯೂ ಭಿನ್ನ. ಹೀಗೆ ಉತ್ತರ ಕರ್ನಾಟಕ ಎಂದು ಗುರುತಿಸಿಕೊಳ್ಳುವ ಭಾಗದಲ್ಲಿ ಒಂದು ಆಡುನುಡಿಯಿಲ್ಲ. ಹಲವು

ಆಡುನುಡಿಗಳಿವೆ. ಬೀದರಿನ ಶಿವಕುಮಾರ ನಾಗವಾರ ಬಳಸುವ ಕನ್ನಡ, ರಾಯಚೂರಿನ ಶಾಂತರಸರು ಬಳಸುವ ಕನ್ನಡ, ಬೆಳಗಾವಿಯ ರಾಘವೇಂದ್ರ ಪಾಟೀಲ ಬಳಸುವ ಕನ್ನಡ, ಚಂಪಾ ಬಳಸುವ (ಹಾವೇರಿ) ಕನ್ನಡ ಎಲ್ಲವೂ ಭಿನ್ನ ಭಿನ್ನ. ಇವರೆಲ್ಲರು ಬಳಸಿರುವ ಕನ್ನಡ ನೆಲದ, ಜನರಾಡುವ ಆಡುನುಡಿಯ ಸೊಗಡನ್ನು ಕೇಳಬೇಕು; ಓದಬೇಕು.

ಹಾಗೆಯೇ ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಯ ಭಾಷಾ ರಚನೆಗಳು ಭಿನ್ನವಾಗಿದ್ದು ಆಯಾ ಭಾಗದ ಬರಹಗಾರರು ತಮ್ಮ ಸಾಹಿತ್ಯ ರಚನೆಯಲ್ಲಿ ಆಡುನುಡಿಯನ್ನು, ತಮ್ಮ ಸಾಹಿತ್ಯ ಪ್ರಕಾರಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಆದರೆ ಯಥಾವತ್ ಆಡುನುಡಿಯಲ್ಲ. ಆಡುನುಡಿಯನ್ನು ಸಾಹಿತ್ಯಕವಾಗಿ ಪರಿವರ್ತಿಸಿಕೊಂಡು ರಚಿಸಿದ್ದಾರೆ.

ರಾಯಚೂರು ಭಾಷೆಯ ಸೊಗಡನ್ನು ಶಾಂತರಸರ 'ಹಾವಮ್ಮ' ಕತೆಯಲ್ಲಿ ನೋಡಬಹುದು;

**ಕಸಮುಸ್ರೆ ಮಾಡೋ ತಿಮ್ಮಿ ಗಂಡನ ಮನೆಗೆ ಹೋದಾಗ ನನಗ್ ತೊಂದ್ರೆಗಿಟ್ಗಂತು. ನಾಕೆಂಟ್ ದಿನ ಕಪ್‌ಬಸಿ ನಾನೇ ತೊಳ್‌ಕಂಡೆ. ಬಟ್ಟೆ ನಾನೇ ಒಕ್ಕಂಡೆ. ಮನೆ ಕಸ ಬಳಕಂಡೆ. ಬ್ಯಾಸ್ರ ಬಂತು. ನಾಕು ಕಡೆ ವಿಚಾರಿಸ್ದೆ, ಯಾರೂ ಸಿಗ್ಲಿಲ್ಲ. ಕಡೆಗೆ ತಿಮ್ಮಿಯು ತಾಯಿ ಹಾವಮ್ಮನ್ನ ಕರಕಂಬಂದ್ಲು. "ತಿಮ್ಮಿ ಹಂಗ ಇವ್ಳೂ ಒಳ್ಳೆ ಮನುಸ್ಯಳು, ನೀವ್ ಹೇಳದ್ ಕೆಲ್ಸನೆಲ್ಲ ಮಾಡ್ತಳ. ತಿಮ್ಮಿಗೆ ಕೊಡಷ್ಟೇ ಸಂಬಳ ಕೊಂಡ್ರಿ" ಅಂತ ಹೇಳದ್ಲು. ನಾಳ್ಳಂದ ಕೆಲ್ಸಕ್ಕ ಬರ್ಲಿ ಅಂದೆ.**

ಬೀದರ ಜಿಲ್ಲೆಯ ಭಾಷೆಯ ಸೊಗಡನ್ನು ಶಿವಕುಮಾರ ನಾಗವಾರರ ಕತೆಯಲ್ಲಿ ಹೀಗಿದೆ;




**ಬಾಳವ್ವಗೂ ತನಗೂ ಜನ್ಮದ ಜನ್ಮದ ದುಸ್ಮಾನ. ಯಾವಾಗಬಿ ಕಬ್ಬಿನ ಸೆದಿ ಗುತ್ಯಾಗ ತಮಗಿರಿಗು ಜಗಳ ಬರೋದೆ. ಐದು ರೂಪಾಯಿಗಿ ಒಂದು ಮುಂಬು ಹೇಳಬೇಕು ನೋಡು, ಅಂತ ಹೇಳಿ ಒಳಗಿಂದೊಳಗೆ ನಾಕು ರೂಪಾಯಿಗಿ ಒಪ್ಪಿ ತಾನೆ ಗುತ್ತಿ ಹಿಡಿಯೋಳು. ಹಿಂಗಾಗಿ ಆಕೀನ ಕಾಲಾಗ ಲುಕ್ಸಾನ ಆಗೋದು ಅಲ್ದೆ ತನ್ನ ಜತ್ತಿನೋರು ಸಂಗಡೆ ಜಗಳಾ ಆಡಯ ಆಗ್ತಿತ್ತು. ಮೊನ್ನಿನ ದಿನ 'ನಮ್ಮಂತಹ ಕೂಲಿಕಾರರಿಗೆ ಎಲೆಕ್ಷನ್ ಪಿಲೆಕ್ಷೆನ್ ಯಾಕ? ದುಡದ ಉಂಬತನ ಹೊಟ್ಟಿ ತುಂಬುಲ್ದು, ಅದೆಲ್ಲಾ ರೊಕ್ಕಿದ್ದು ದುಡೇಲ್ದೋರ ಕೆಲಸ' ಅಂತ ಶಾಜೋಗ ಹೇಳದ್ದಳು. ಆದ್ರ ಮುನಿಮನ ಮಾತು ನೋಡಿದ್ರ ಬಾಳವ್ವ ಎಲ್ಲಿ ಎಲೆಕ್ಷನ್‌ದಾಗ ಹೋಯ್ತಾಳೋ ಅಂಬುದು ಗುಮಾನಿ ಸುರು ಆಯ್ತು.**

ಬೆಳಗಾವಿ ಜಿಲ್ಲೆಯ ಭಾಷೆಯ ಸೊಗಡನ್ನು ರಾಘವೇಂದ್ರ ಪಾಟೀಲ ಕತೆಯಲ್ಲಿ ಹೀಗಿದೆ;

**ಧರಮನಟ್ಟೀ ನಾಡಿನ್ಯಾಗ ಹಿಂಗೆಲ್ಲಾ ನಡದಾಗ ಅತ್ತ ಮ್ಯಾಗಡೇ ದೇಶದಾಗ ಏನ ನಡದಿತ್ತು..! ಪೇಶವೇಗೋಳ ರಾಜ್ಯದಾಗ ದಿಲ್ಲೀ ಸಿಂಹಾಸನದ ಕನಸಗೋಳು ಬೀಳಲಿಕತ್ತಿದ್ದೂ.. ಮೊಗಲ ಚಕ್ರವರ್ತಿಗೋಳ ಇಬ್ಬರದು ತಲೀ ಕತ್ತರಿಸಿದ ಮಂತ್ರೀ, ದಿಲ್ಲೀ ಗಾದೀ ಮ್ಯಾಲ ಕುಂತು.. ಆಳಲಿಕ್ಕೆಂತ ಮರಾಠರನ್ನ ಕರದ ಮೆತ್ತನೆಯ ಗಾದೀ ಮ್ಯಾಲ ಕುಂತ ಪೇಶವೇ ಭಟ್ಟರಿಗೆ ಆಳುವ ರಿಚೀ ಹತ್ತಿತ್ತು. ಬಾ ಅಂತ ಕರದಾಗ – ಯಾಕ ಆಗಬಾರದೂ... ಯಾಕ ಆಗಬಾರದೂ... ಅಂತ ಅವರು ದಿಲ್ಲಿಯ ಗಾದಿಯ ಕಡೆ ತೇಲುಗಣ್ಣು ಮೇಲುಗಣ್ಣು ಬಿಡಲಿಕತ್ತಿದ್ದರು, ಆದರ ಖೀರಿನೊಳಗ ನೋಣಾ ಬಿದ್ದಂಗ ಅಪಘಾನದ ಮಹಮದನೊಬ್ಬ ನಡಕ ಬಂದು ಸೇರಿಕೊಂಡು ಬಿಟ್ಟ!.. ಹೆಂಗಲೇ ಮಾಡಿ ದಿಲ್ಲಿಯ ಪಟ್ಟಾ ಹೊಡದ ತೀರಬೇಕು ಅಂತ ಮನಸು ಮಾಡಿದ ಪೇಶವೇಗೋಳ ರಾಜ್ಯ ಪಾಣಿಪತ್ತಿನ ಕಡೇ ಪ್ರಯಾಣ ಹೊಂಡಿತ್ತು..**

ಕುಂದಾಪುರದ ಭಾಷಾ ಸೊಗಡನ್ನು ವೈದೇಹಿ ಕತೆಯಲ್ಲಿ ನೋಡಿ;

**ರಮಾಟೀಚರು ಈ ಸಲ ರವಕೆಯನ್ನು ವೆಂಕಪ್ಪಯ್ಯನ ಹತ್ತಿರ ಮನೆಗೇ ಕಳಿಸಿಕೊಟ್ಟರು! ಅಮ್ಮಚ್ಚಿ ಪೆಕೇಟು ತೆಗೆದುಕೊಂಡು ಹೇಗಾಗುತ್ತದೆ ನೋಡುವ ಅಂತ ಒಳಗೆ ಹೋಗುವಾಗ ನೀರಿನಲ್ಲಿ ನೆನೆಸಿದ ಒಣ ಬಾಳಿಸಿಪ್ಪೆಯಿಂದ ಹಗ್ಗ ಸಿಗಿಯುತ್ತ ಪಿಂಡೆ ಕಟ್ಟುತ್ತಾ ಇದ್ದ ಸೀತತ್ತೆಯನ್ನು ನೋಡಿ ವೆಂಕಪ್ಪಯ್ಯ ಮೆಲು ನಕ್ಕ. ಅವ ನಕ್ಕದ್ದು ನನ್ನ ಕಣ್ಣಿಗೆ ಬಿತ್ತೆಂದು ನನ್ನನ್ನೊಮ್ಮೆ ಅಪರಾಧಿಯನ್ನು ನೋಡುವಂತೆ ನೋಡಿ "ಮಾಲಕ್ಷ್ಮಿ ಮಾಯಿಗೆ ಹೇಳಗು. ಅಮ್ಮಚ್ಚಿಯ ಸಂಗಡ ನಿಮ್ಮ ಮಗಳನ್ನು ಹೆಚ್ಚು ಬಿಡಳೆ. ಅವಳೂ ಹಾಳಾತ್ಲ್ ಅಂದ್," ಎಂದು ನನಗೆ ಕೇಳುವಂತೆ ನುಡಿದು ಸೀತತ್ತೆಗೆ ಕಾಣದಂತೆ ಕಣ್ಣಲ್ಲೆ ಹೆಸರಿಸಿದ.**

**ನಾನು ಅಲ್ಲಿಂದ ಮೆಲ್ಲ ಎದ್ದು ಅಮ್ಮಚ್ಚಿ ಇದ್ದಲ್ಲಿಗೆ ಹೋಗುವ ತವಕದ ಹೆಜ್ಜೆ ಇಟ್ಟಿದ್ದೇನಷ್ಟೇ–ಚೀತ್ಕರಿಸಿದಳು ಅಮ್ಮಚ್ಚಿ ಒಳಕೋಣೆಯಿಂದ. ದಂಗಾಗಿ ನೋಡಿದರೆ ಸೀತತ್ತೆ ಮತ್ತು ವೆಂಕಪ್ಪಯ್ಯ ಸದ್ದಿಲ್ಲದೆ ನಗುತ್ತಿದ್ದರು,..**

ಕನ್ನಡದ ಆಡುನುಡಿಗಳು ಹೀಗೆ ಕತೆ–ಕಾದಂಬರಿಗಳಲ್ಲಿ ಸೇರಿಕೊಂಡವು. ಆರಂಭ ಕಾಲದಲ್ಲಿ ಆಡುನುಡಿಯನ್ನು ಕೇವಲ ಸಂಭಾಷಣೆಗೆ ಬಳಸುತ್ತಿದ್ದರು.

70ರ ದಶಕದಿಂದೀಚೆಗೆ ಕೆಲವರು ಕತೆಯ ವಿವರಗಳನ್ನು ಮತ್ತು ಸಂಭಾಷಣೆಗಳನ್ನು ಬರೆಯುವಾಗ ಶಿಷ್ಟ ಮತ್ತು ಆಡುನುಡಿಯ ಅಂತರವನ್ನು ಅಳಿಸಿದರು. ಕರ್ನಾಟಕದಲ್ಲಿ ಬಳಕೆಯಾಗುವ ಆಡುನುಡಿಯ ಸ್ವರೂಪವನ್ನು ಮತ್ತು ಅದರ ಸೊಬಗನ್ನು ಸಾಹಿತ್ಯಕವಾಗಿ, ಭಾಷಿಕವಾಗಿ ಅಧ್ಯಯನ ಮಾಡುವ ಅಗತ್ಯವಿದೆ. ❑

# ಯೋಜನಾ ಓದುಗರಿಗೆ



# ಕನ್ನಡ ರಾಜ್ಯೋತ್ಸವದ



# ಶುಭಾಶಯಗಳು

# ಭಾರತದ ಸಣ್ಣ ಕೈಗಾರಿಕೆಗಳ ಸಶಕ್ತೀಕರಣ

* ಡಾ. ಅರುಣ್ ಕುಮಾರ್ ಪಾಂಡಾ



'ಎಂಎಸ್ಎಂಇ' ವಲಯವು ಏಕ ಸ್ವರೂಪವಾಗಿಲ್ಲ ಹಾಗಾಗಿ ಬೇರೆ ಬೇರೆ ಉದ್ಯಮಗಳಿಗೆ ವಿಭಿನ್ನ ಆದ್ಯತೆಗಳಿವೆ ಎಂಬುದನ್ನು ಗಮನದಲ್ಲಿರಿಸಿಕೊಳ್ಳುವುದು ಅಗತ್ಯವಾಗಿದೆ. ಈ ಕ್ಷೇತ್ರದ ಸವಾಲುಗಳೂ ವಿಭಿನ್ನವಾಗಿವೆ.

ಅತಿ ಸಣ್ಣ (ಕಿರು), ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಕ್ಷೇತ್ರವನ್ನು, ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಹಾಗೂ ಆರ್ಥಿಕ ಪ್ರಗತಿಯ ಉತ್ತೇಜನಕ್ಕೆ ಅತಿದೊಡ್ಡ ಕೊಡುಗೆದಾರ ಎಂದು ಜಾಗತಿಕವಾಗಿ ಗುರುತಿಸಲಾಗಿದೆ. ಜನಸಾಮಾನ್ಯರಿಗೆ ಉದ್ಯೋಗಾವಕಾಶ ಒದಗಿಸುವಲ್ಲಿ ಮತ್ತು ಸಂಶೋಧನೆ ಚಾಲಿತ ವಾಣಿಜ್ಯೋದ್ಯಮ ಪ್ರಗತಿಯಲ್ಲಿ ಈ ಕ್ಷೇತ್ರವು ಮಹತ್ವದ ಪಾತ್ರ ವಹಿಸುತ್ತದೆ. ಪೂರಕ ಸಾಮಗ್ರಿ ಘಟಕಗಳು ದೊಡ್ಡ ಕೈಗಾರಿಕೆಗಳ ಅಗತ್ಯಗಳನ್ನು ಪೂರೈಸುವ ಹಿನ್ನೆಲೆಯಲ್ಲಿ ದೊಡ್ಡ ಕೈಗಾರಿಕೆಗಳ ಪಾಲಿಗೂ ಈ ಕ್ಷೇತ್ರದ ಕೊಡುಗೆ ಅಮೂಲ್ಯವೆನಿಸಿದೆ. ಜೊತೆಗೆ, ದೇಶದ ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಮತ್ತು ಸರ್ವರನ್ನೂ ಒಳಗೊಂಡ ಪ್ರಗತಿಗೆ ಈ ಕ್ಷೇತ್ರ ತನ್ನದೇ ಕೊಡುಗೆ ನೀಡುತ್ತದೆ.

### ಭಾರತದ ದೃಷ್ಟಿಕೋನ

ಭಾರತದ ಆರ್ಥಿಕತೆಯ ದೃಷ್ಟಿಯಲ್ಲಿ ಈ ಕ್ಷೇತ್ರವು ಅದರ ಆಯಕಟ್ಟಿನ ಸ್ಥಾನದಿಂದಾಗಿ ಮಹತ್ವ ಪಡೆದಿದೆ. ಸುಮಾರು ಶೇ.90 ರಷ್ಟು ಕೈಗಾರಿಕಾ ಘಟಕಗಳು ಈ ಕ್ಷೇತ್ರದ ವ್ಯಾಪ್ತಿಗೆ ಸೇರಿದ್ದು, ದೇಶದ ಕಾರ್ಮಿಕ ವರ್ಗದ ಶೇ. 40ರಷ್ಟು ಮಂದಿಗೆ ಈ ಕ್ಷೇತ್ರ ಉದ್ಯೋಗಾವಕಾಶ ಒದಗಿಸಿದೆ. ಈ ವಲಯವು ಸಾಂಪ್ರದಾಯಿಕ ವಸ್ತುಗಳಿಂದ ಹಿಡಿದು ಅತ್ಯಾಧುನಿಕ ಉತ್ಪನ್ನಗಳವರೆಗೆ 8000ಕ್ಕೂ ಅಧಿಕ ಉತ್ಪನ್ನಗಳನ್ನು ತಯಾರಿಸುತ್ತದೆ. ಭಾರತದ ಆರ್ಥಿಕತೆಯು ಸತತ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿರುವ ಮತ್ತು 2025ರ ವೇಳೆಗೆ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿ ರೂಪುಗೊಳ್ಳುವ ಸಾಧ್ಯತೆಯ ಹಿನ್ನೆಲೆಯಲ್ಲಿ, ಈ ವಲಯದ ಅಭಿವೃದ್ಧಿಯು ಅತ್ಯಂತ ಮಹತ್ವದ್ದೆನಿಸಿದೆ. ಹಾಗಾಗಿ, ಇಡೀ 'ಎಂಎಸ್ಎಂಇ' ಕ್ಷೇತ್ರದ ಪರಿಸರ ವ್ಯವಸ್ಥೆಯನ್ನು ಬಲಗೊಳಿಸುವ ವಿನೂತನ ನೀತಿಗಳು, ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಸಚಿವಾಲಯಕ್ಕೆ ಆಯವ್ಯಯದಲ್ಲಿ ಅನುದಾನವನ್ನು 6482 ಕೋಟಿ ರೂ.ಗಳಿಗೆ ಹೆಚ್ಚಿಸಿರುವುದನ್ನು ನೋಡಿದರೆ ಸರ್ಕಾರದ ಆದ್ಯತೆ ವಿಚಾರವು ವೇದ್ಯವಾಗುತ್ತದೆ. ಇದು ಕಳೆದ ವರ್ಷದ 3465 ಕೋಟಿ ರೂ.ಗೆ ಹೋಲಿಸಿದರೆ ಈ ಕ್ಷೇತ್ರಕ್ಕೆ ಇದುವರೆಗಿನ ಗರಿಷ್ಠ ಅನುದಾನವೆನಿಸಿದೆ.

### 'ಎಂಎಸ್ಎಂಇ'ಗಳ ಬಲವರ್ಧನೆ

ಈ ಕ್ಷೇತ್ರದಲ್ಲಿ ಅಂತರ್ಗತವಾಗಿರುವ ಪ್ರಗತಿ ಸಾಮರ್ಥ್ಯದ ಹೊರತಾಗಿಯೂ ಹಲವು ಸವಾಲುಗಳು ಇದರ ಮುಂದಿವೆ. ಉದಾಹರಣೆಗೆ, ಸಕಾಲಕ್ಕೆ ಸಾಲ ಒದಗಣೆ, ಮೂಲಸೌಕರ್ಯ ಕೊರತೆ, ತಾಂತ್ರಿಕ ಲುಪ್ತತೆ, ಅಪರಿಪೂರ್ಣ ಮಾರುಕಟ್ಟೆ ಸಂಪರ್ಕ ಮತ್ತು ಕುಶಲ ಕಾರ್ಮಿಕರ ಅಲಭ್ಯತೆಯು ಈ ಕ್ಷೇತ್ರ ಎದುರಿಸುತ್ತಿರುವ ಸವಾಲುಗಳಲ್ಲಿ ಕೆಲವು. ಅಷ್ಟೇ ಅಲ್ಲದೆ, ಚೀನಾ, ಇಂಡೋನೇಶಿಯಾ,

* ಕಾರ್ಯದರ್ಶಿಗಳು, ಅತಿಸಣ್ಣ, ಸಣ್ಣ ಮತ್ತು ಮಧ್ಯಮಗಾತ್ರದ ಕೈಗಾರಿಕೆಗಳ ಸಚಿವಾಲಯ, ಭಾರತ ಸರ್ಕಾರ. E-mail : sec.msme@gmail.com

ಫಿಲಿಪ್ಪೈನ್ಸ್ ಮತ್ತು ಥಾಯ್ಲೆಂಡ್‌ನಂತಹ ನೆರೆ ರಾಷ್ಟ್ರಗಳಿಂದ ಹೆಚ್ಚುತ್ತಿರುವ ಸ್ಪರ್ಧೆಯ ಪರಿಣಾಮವಾಗಿ ಜಾಗತಿಕ ಸ್ಪರ್ಧಾತ್ಮಕತೆ ಹೆಚ್ಚಿಸಿಕೊಳ್ಳಲು ಸದೃಢ ಕಾರ್ಯತಂತ್ರಗಳ ಅಳವಡಿಕೆ ಈ ಕ್ಷೇತ್ರಕ್ಕೆ ಅನಿವಾರ್ಯವಾಗಿದೆ. ಸರ್ಕಾರವು ಈ ಮಿತಿಗಳನ್ನು ಅರಿತುಕೊಂಡಿದ್ದು, ಸುಧಾರಿತ ಆರ್ಥಿಕ ಚಟುವಟಿಕೆಗಾಗಿ ಈ ಕ್ಷೇತ್ರವನ್ನು ತುರ್ತಾಗಿ ಪುನಶ್ಚೇತನಗೊಳಿಸಬೇಕಾದ ಅಗತ್ಯವನ್ನು ಮನಗಂಡಿದೆ. ಜೊತೆಗೆ, ಈ ವಲಯದ ಸಮಗ್ರ ಅಭಿವೃದ್ಧಿಗಾಗಿ 'ಮೇಕ್ ಇನ್ ಇಂಡಿಯಾ', 'ಸ್ಟಾರ್ಟ್ ಅಪ್ ಇಂಡಿಯಾ' ಮತ್ತು 'ಸ್ಕಿಲ್ ಇಂಡಿಯಾ'ದಂತಹ ಹಲವು ಅಭಿಯಾನಗಳನ್ನು ಕೈಗೊಳ್ಳಲಾಗಿದೆ. ಭಾರತದ ಸಮಗ್ರರಾಷ್ಟ್ರೀಯ ಉತ್ಪನ್ನಕ್ಕೆ (ಜಿಡಿಪಿ) ಉತ್ಪಾದನಾ ವಲಯದ ಕೊಡುಗೆಯನ್ನು ಹಾಲಿ ಇರುವ ಶೇ.16%–17% ರಷ್ಟರಿಂದ ಶೇ.25ಕ್ಕೆ ಏರಿಸಲು ಮತ್ತು 2022ರ ವೇಳೆಗೆ 100 ದಶಲಕ್ಷ ಹೆಚ್ಚುವರಿ ಉದ್ಯೋಗಗಳನ್ನು ಸೃಷ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

### 'ಎಸ್‌ಎಂಇ'ಗಳಿಗೆ ಹಣಕಾಸು

'ಎಂಎಸ್‌ಎಂಇ' ವಲಯವು ಏಕ ಸ್ವರೂಪವಾಗಿಲ್ಲ ಹಾಗಾಗಿ ಬೇರೆ ಬೇರೆ ಉದ್ಯಮಗಳಿಗೆ ವಿಭಿನ್ನ ಆದ್ಯತೆಗಳಿವೆ ಎಂಬುದನ್ನು ಗಮನದಲ್ಲಿರಿಸಿಕೊಳ್ಳುವುದು ಅಗತ್ಯವಾಗಿದೆ. ಈ ಕ್ಷೇತ್ರದ ಸವಾಲುಗಳೂ ವಿಭಿನ್ನವಾಗಿವೆ. ಉದಾಹರಣೆಗೆ, ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಸಕಾಲಕ್ಕೆ ಅಗತ್ಯ ಹಣಕಾಸು ನೆರವು ಮೊದಲ ಆದ್ಯತೆಯಾಗಿದ್ದು, ಈ ವಿಷಯ ಇನ್ನೂ ಸವಾಲಾಗಿಯೇ ಉಳಿದಿದೆ. ವಿಶೇಷವೆಂದರೆ, ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳಿಗೆ ಇದು ದೊಡ್ಡ ಸಮಸ್ಯೆಯಾಗಿ ಉಳಿದಿಲ್ಲ. ಈ ಸವಾಲನ್ನು ಎದುರಿಸಲು ಸರ್ಕಾರ ಸಾಲ ಖಾತರಿ ಯೋಜನೆಯ ವ್ಯಾಪ್ತಿಯನ್ನು ವಿಸ್ತಾರಗೊಳಿಸಿದೆ. ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆ ವ್ಯಾಪ್ತಿಯಲ್ಲಿ ಬರುವ ಘಟಕಗಳು ಈಗ ಯಾವುದೇ ಅಡಮಾನವಿಲ್ಲದೆ ಆಯ್ದ ಹಣಕಾಸು ಸಂಸ್ಥೆಗಳಿಂದ 2 ಕೋಟಿ ರೂ. ವರೆಗೂ ಸಾಲ ಸೌಲಭ್ಯ ಪಡೆಯಬಹುದು. ಈ ಮುನ್ನ ಇಂತಹ ಸಾಲದ ಗರಿಷ್ಠ ಮಿತಿ 1 ಕೋಟಿ ರೂ. ಮಾತ್ರ ಇತ್ತು. ಇದರ ಜೊತೆಗೆ, ಈ ವಲಯದಲ್ಲಿ ಹೆಚ್ಚುತ್ತಿರುವ ಹಣಕಾಸು ಸಂಬಂಧಿತ ಸಂಕೀರ್ಣತೆಗಳು ಮತ್ತು ಸಾಲ ಸಂಬಂಧಿ ಅಂತರಗಳ ಪರಿಹಾರಕ್ಕಾಗಿ ಮಾರುಕಟ್ಟೆಯಲ್ಲಿ ವಿನೂತನ ಮಾದರಿಗಳು ಮುಂಚೂಣಿಗೆ ಬರುತ್ತಿವೆ.

### ಪ್ರಧಾನ ಮಂತ್ರಿ ಉದ್ಯೋಗ ಸೃಷ್ಟಿ ಯೋಜನೆ (ಪಿಎಂಇಜಿಪಿ)

ಪ್ರಧಾನ ಮಂತ್ರಿ ಉದ್ಯೋಗ ಸೃಷ್ಟಿ ಯೋಜನೆಯು (ಪಿಎಂಇಜಿಪಿ) ಸಚಿವಾಲಯದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದ್ದು, ಇದರ ಅಡಿಯಲ್ಲಿ ದೇಶಾದ್ಯಂತ ಪ್ರತಿ ವರ್ಷ ಅತಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ, ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗುತ್ತದೆ. ಹೊಸ ಸ್ವಯಂ ಉದ್ಯೋಗ / ಯೋಜನೆ / ಸಣ್ಣ ಕೈಗಾರಿಕೆಗಳ ಸ್ಥಾಪನೆ ಮೂಲಕ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳ ಸೃಷ್ಟಿಯುಇದರ ಪ್ರಮುಖ ಉದ್ದೇಶವಾಗಿದೆ. ಈ ಯೋಜನೆ ಅತ್ಯುತ್ತಮ ಉದ್ಯೋಗ ಸೃಷ್ಟಿ ಸಾಮರ್ಥ್ಯವನ್ನು ಹೊಂದಿದೆ.

### ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳು

ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳು ಭಾರತದ ಎರಡು ಪ್ರಮುಖ ರಾಷ್ಟ್ರೀಯ ಪಾರಂಪರಿಕ ವಲಯಗಳೆನಿಸಿವೆ. ಗ್ರಾಮೀಣ ಪ್ರದೇಶಗಳಲ್ಲಿ ಕಡಿಮೆ ಬಂಡವಾಳದೊಂದಿಗೆ ಉದ್ಯೋಗಾವಕಾಶ ಕಲ್ಪಿಸುವಲ್ಲಿ, ಅದರಲ್ಲೂ ಸಮಾಜದ ದುರ್ಬಲ ವರ್ಗದವರಿಗೆ ಉದ್ಯೋಗಾವಕಾಶ ಕಲ್ಪಿಸುವಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳ ವಲಯ ಪ್ರಧಾನ ಪಾತ್ರ ವಹಿಸುತ್ತಿದೆ.

### ತಂತ್ರಜ್ಞಾನದತ್ತ ದೃಷ್ಟಿ

ಇಂದು ಜಾಗತಿಕ ಉತ್ಪನ್ನ ಮೌಲ್ಯವರ್ಧನೆ ಚಟುವಟಿಕೆಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಎದುರಿಸುತ್ತಿವೆ. ಒಂದು ಕೈಗಾರಿಕೆ ಆದ್ಯತಾ ಪೂರೈಕೆದಾರನಾಗಬೇಕಾದರೆ, ಅದು ಅತ್ಯುತ್ತಮ ಕಾರ್ಯವಿಧಾನಗಳನ್ನು ಅನುಸರಿಸಬೇಕು ಅಲ್ಲದೆ, ಅಂತಾರಾಷ್ಟ್ರೀಯ ಗುಣಮಟ್ಟಗಳನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಕೇವಲ ವಿನೂತನ ಪರಿಹಾರಗಳನ್ನು ಒದಗಿಸುವುದರಲ್ಲಿ ಮಾತ್ರವಲ್ಲದೆ, ಪಾಲುದಾರರಿಗೆ ಅತ್ಯುತ್ತಮ ಮೌಲ್ಯಒದಗಿಸುವಲ್ಲೂ ಅಂತಾರಾಷ್ಟ್ರೀಯ ಗುಣಮಟ್ಟ ಮತ್ತು ಮಾನದಂಡಗಳು



ಅನ್ವಯವಾಗಬೇಕು. ಈ ನಿಟ್ಟಿನಲ್ಲಿ ತಾಂತ್ರಿಕ ಉತ್ಕೃಷ್ಟತೆಯು ಅತ್ಯಂತ ಮಹತ್ವದ್ದಾಗಿದೆ. 18 ಟೂಲ್‌ರೂಮ್ಸ್ ಮತ್ತುತಂತ್ರಜ್ಞಾನ ಅಭಿವೃದ್ಧಿ ಕೇಂದ್ರಗಳ ಮೂಲಕ ಸಚಿವಾಲಯವು ಅತ್ಯುನ್ನತ ಕೌಶಲ್ಯ ಮತ್ತು ತಾಂತ್ರಿಕ ನೆರವು ಒದಗಿಸುತ್ತಿದೆ. ಇದಲ್ಲದೆ, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳ ಸಚಿವಾಲಯವು 'ತಂತ್ರಜ್ಞಾನ ಕೇಂದ್ರ ವ್ಯವಸ್ಥೆ ಯೋಜನೆ (ಟಿಸಿಎಸ್‌ಪಿ) ಅಡಿಯಲ್ಲಿ ಹಾಲಿ ತಾಂತ್ರಿಕ ಕೇಂದ್ರಗಳ (ಟಿಸಿ) ಉನ್ನತೀಕರಣ ಮತ್ತು 15 ಹೊಸ ಕೇಂದ್ರಗಳ ಸ್ಥಾಪನೆಗಾಗಿ ವಿಶ್ವಬ್ಯಾಂಕ್ ನೆರವಿನೊಂದಿಗೆ 2200 ಕೋಟಿ ರೂ. ಅನುದಾನ ಒದಗಿಸಿದೆ. ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳ ಒಟ್ಟಾರೆ ಉತ್ಪಾದಕತೆ ಹೆಚ್ಚಿಸುವುದು ಇದರ ಉದ್ದೇಶವಾಗಿದೆ. ತಂತ್ರಜ್ಞಾನ ಕೇಂದ್ರವು ಉದ್ಯಮಿಗಳಿಗೆ ಸಮಕಾಲೀನ ಅತ್ಯಾಧುನಿಕ ಉತ್ಪಾದನಾ ತಂತ್ರಜ್ಞಾನ, ನುರಿತ ಕಾರ್ಮಿಕರು ಮತ್ತು ವ್ಯವಹಾರ ಸಲಹೆ ಒದಗಿಸುವ ಮೂಲಕ 'ಎಂಎಸ್‌ಎಂಇ' ವಲಯಕ್ಕೆ ನೆರವಾಗುತ್ತದೆ. ಅಲ್ಲದೆ, ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳ ತಾಂತ್ರಿಕ ಉನ್ನತೀಕರಣಕ್ಕಾಗಿ 'ಸಾಲ ಆಧರಿತ ಬಂಡವಾಳ ಸಬ್ಸಿಡಿಯೋಜನೆ'ಯೂ (ಸಿಎಲ್‌ಸಿಎಸ್‌ಎಸ್) ಚಾಲ್ತಿಯಲ್ಲಿದೆ. ಈ ಯೋಜನೆಯಡಿ, ಘಟಕ ಮತ್ತು ಯಂತ್ರೋಪಕರಣಗಳ ಆಧುನೀಕರಣಕ್ಕೆ ಶೇ 15ರಷ್ಟು ಮತ್ತು ಗರಿಷ್ಠ 15.00 ಲಕ್ಷ ರೂ.ವರೆಗೆ ಸಬ್ಸಿಡಿ ಸೌಲಭ್ಯವಿದೆ. 2017ರ ಜೂನ್‌ವರೆಗೆ, ಒಟ್ಟು 78.68 ಕೋಟಿ ರೂ. ಗಳನ್ನು ಬಿಡುಗಡೆ ಮಾಡಲಾಗಿದ್ದು, 1293 ಅತಿಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳು ಇದರ ಅನುಕೂಲ ಪಡೆದುಕೊಂಡಿವೆ. ಸನ್ಮಾನ್ಯ ಪ್ರಧಾನ ಮಂತ್ರಿಗಳು ಇತ್ತೀಚೆಗೆ 'ಎಂಎಸ್‌ಎಂಇ'ಗಳ ಆರ್ಥಿಕ ನೆರವಿಗಾಗಿ 'ಶೂನ್ಯ ದೋಷ, ಶೂನ್ಯ ಪರಿಣಾಮ (ಝೀರೊ ಡಿಫೆಕ್ಟ್ ಝೀರೊ ಎಫೆಕ್ಟ್–ಝೆಡ್‌ಇಡಿ) ಪ್ರಮಾಣೀಕರಣ ಯೋಜನೆಗೆ ಚಾಲನೆ ನೀಡಿದ್ದಾರೆ. ಈ ಯೋಜನೆಯು

'ಎಂಎಸ್‌ಎಂಇ' ಗಳಲ್ಲಿ 'ಝೆಡ್‌ಇಡಿ' ಉತ್ಪಾದನೆ ಬಗ್ಗೆ ಅರಿವು ಮೂಡಿಸಿ, ಅವರ ಘಟಕಗಳನ್ನು 'ಝೆಡ್‌ಇಡಿ' ಮೌಲ್ಯಮಾಪನಕ್ಕೆ ಉತ್ತೇಜಿಸುವ ಮತ್ತು ಅಗತ್ಯ ನೆರವು ಒದಗಿಸುವ ವಿಸ್ತೃತ ಕ್ರಮದ ಭಾಗವಾಗಿದೆ.

### ಮೂಲಸೌಕರ್ಯ ಬಲವರ್ಧನೆ

ಯಾವುದೇ ಕಾರ್ಖಾನೆ, ಮಾರುಕಟ್ಟೆಯಲ್ಲಿ ಯಶಸ್ವಿಯಾಗಿ ತನ್ನ ವ್ಯವಹಾರಗಳನ್ನು ನಡೆಸಬೇಕಾದರೆ ನುರಿತ ಕಾರ್ಮಿಕರು, ಆಧುನಿಕ ತಂತ್ರಜ್ಞಾನ ಮುಂತಾದ ಮೂಲ ಸೌಕರ್ಯಗಳ ಲಭ್ಯತೆ ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ 'ಎಂಎಸ್‌ಎಂಇ'ಗಳ ಅಭಿವೃದ್ಧಿಗಾಗಿ ಸರ್ಕಾರ ಕ್ಲಸ್ಟರ್ ಆಧರಿತ ಅಭಿವೃದ್ಧಿ ತಂತ್ರವನ್ನು ಅಳವಡಿಸಿಕೊಂಡಿದೆ. ಬಂಡವಾಳ ಕೊರತೆ ಹಿನ್ನೆಲೆಯಲ್ಲಿ ಸಾಮಾನ್ಯವಾಗಿ ಅತಿಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಅತ್ಯಾಧುನಿಕ ಸಲಕರಣೆಗಳು ಮತ್ತು ತಂತ್ರಜ್ಞಾನವನ್ನು ಪಡೆಯಲು ಸಾಧ್ಯವಾಗದೆ ಉತ್ಪನ್ನದ ಗುಣಮಟ್ಟದ ವಿಚಾರದಲ್ಲಿ ರಾಜಿಯಾಗುತ್ತವೆ. ಆದ್ದರಿಂದ ಕ್ಲಸ್ಟರ್ ಅಭಿವೃದ್ಧಿ ಯೋಜನೆಯು 'ಸಾಮಾನ್ಯ ಸೌಲಭ್ಯ ಕೇಂದ್ರ' ಗಳಂತಹ (ಸಿಎಫ್‌ಸಿ) ವಾಸ್ತವಿಕ ಆಸ್ತಿಗಳನ್ನು ಸೃಷ್ಟಿಸುವ ಮೂಲಕ ಅಂತಹ ಉದ್ಯಮಗಳಿಗೆ ಅತ್ಯಾಧುನಿಕ ಸಲಕರಣೆಗಳು, ತಂತ್ರಜ್ಞಾನ, ವಿನ್ಯಾಸ, ಪರೀಕ್ಷಾ ಕೇಂದ್ರಗಳಂತಹ ಸೌಲಭ್ಯಗಳನ್ನು ಒದಗಿಸುತ್ತದೆ. ಸರ್ಕಾರ ಕೈಗೊಂಡ ಈ ಯೋಜನೆ ಮತ್ತು ಇತರ ಕ್ಲಸ್ಟರ್ ಅಭಿವೃದ್ಧಿ ಉಪಕ್ರಮಗಳಿಂದ ದೇಶಾದ್ಯಂತ ಹಲವು ಕ್ಲಸ್ಟರ್‌ಗಳು ಪ್ರಯೋಜನ ಪಡೆದಿವೆ. ಕ್ಲಸ್ಟರ್‌ಗಳ ಅಭಿವೃದ್ಧಿಯನ್ನು ಮತ್ತಷ್ಟುಎತ್ತರಕ್ಕೆ ಕೊಂಡೊಯ್ಯಲು ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳ ಸಚಿವಾಲಯವು 'ಅತಿಸಣ್ಣ, ಸಣ್ಣ ಉದ್ಯಮಗಳ ಕ್ಲಸ್ಟರ್ ಅಭಿವೃದ್ಧಿ ಯೋಜನೆ' (ಎಂಎಸ್‌ಇ–ಸಿಡಿಪಿ), 'ಗ್ರಾಮೀಣ ಮತ್ತು ಸಾಂಪ್ರದಾಯಿಕ ಕ್ಲಸ್ಟರ್‌ಗಳ ಉನ್ನತೀಕರಣ ಯೋಜನೆ' (ಎಸ್‌ಎಫ್‌ಯುಆರ್‌ಟಿಐ) ಮುಂತಾದ ಕಾರ್ಯಕ್ರಮಗಳಿಗೆ ಸಮಗ್ರ ಮಾರ್ಗದರ್ಶಕ ಸೂತ್ರಗಳನ್ನು ಸಿದ್ಧಪಡಿಸಿದೆ.

### ಮಾರುಕಟ್ಟೆ ಸಂಪರ್ಕ

'ಎಂಎಸ್‌ಎಂಇ'ಗಳ ಹಾಲಿ ಮಾರುಕಟ್ಟೆ ಗಾತ್ರವನ್ನು ಹಿಗ್ಗಿಸಲು ಮತ್ತು ಶಾಶ್ವತ ಮತ್ತು ಸ್ವತಂತ್ರ ಸಂಬಂಧಗಳನ್ನು ಬೆಳೆಸಲು ಸರ್ಕಾರ ವಿಸ್ತೃತ ಗುರಿಯನ್ನು ಹೊಂದಿದೆ. 2012ರಲ್ಲಿ 'ಸಾರ್ವಜನಿಕ ಖರೀದಿ ನೀತಿ' ಅಡಿಯಲ್ಲಿ ಕೇಂದ್ರ ಸರ್ಕಾರದ ಸಚಿವಾಲಯಗಳು ಮತ್ತು ಇಲಾಖೆಗಳು, ಸಾರ್ವಜನಿಕ ವಲಯದ ಉದ್ಯಮಗಳು ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳಿಂದ (ಎಂಎಸ್‌ಇ) ಶೇ.20ರಷ್ಟು ಉತ್ಪನ್ನಗಳನ್ನು ಖರೀದಿಸಬೇಕೆಂಬ ಪ್ರಸ್ತಾಪ ಇಡಲಾಗಿತ್ತು. ಈ ನೀತಿಯು ಕೇವಲ 'ಎಂಎಸ್‌ಇ'ಗಳನ್ನು ಮಾತ್ರ ಗುರಿಯಾಗಿಸದೆ, ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿದ ಉದ್ಯಮಿಗಳ ಒಡೆತನದ ಅತಿಸಣ್ಣ ಮತ್ತು ಸಣ್ಣ ಕೈಗಾರಿಕೆಗಳೂ ಸಾರ್ವಜನಿಕ ಖರೀದಿ ಮಾರುಕಟ್ಟೆಯಲ್ಲಿ ಭಾಗವಹಿಸಲು ಉತ್ತೇಜನ ನೀಡಿತು. ಆದ್ದರಿಂದ ಎಸ್‌ಸಿ–ಎಸ್‌ಟಿಗಳ ಒಡೆತನದ 'ಎಂಎಸ್‌ಎಂಇ'ಗಳಿಂದ ಶೇ.4 ಉತ್ಪನ್ನಗಳನ್ನು ಖರೀದಿಸಬೇಕೆಂದು ಗುರಿ ನಿಗದಿಪಡಿಸಲಾಗಿದೆ. ಅಷ್ಟೆ ಅಲ್ಲದೆ, ಎಸ್‌ಸಿ–ಎಸ್‌ಟಿಗಳ ಒಡೆತನದ ಉದ್ಯಮಗಳು ತಮ್ಮದೇ ಆದ ಮಿತಿಗಳನ್ನು ಹೊಂದಿರುವುದು 'ಎಂಎಸ್‌ಎಂಇ' ವಲಯದ ವಿಶ್ಲೇಷಣೆಯಿಂದ ತಿಳಿದುಬಂದಿದೆ. ಈ ಗುರಿಯ ಸಾಧನೆಗಾಗಿ ಉದ್ಯಮಶೀಲತೆ ಸಂಸ್ಕೃತಿಯನ್ನು ಉತ್ತೇಜಿಸಲು 490 ಕೋಟಿ ರೂ. ಅನುದಾನದೊಂದಿಗೆ (2016–2020) 'ರಾಷ್ಟ್ರೀಯ ಎಸ್‌ಸಿ–ಎಸ್‌ಟಿ ಹಬ್'ಗೆ (ಎನ್‌ಎಸ್‌ಎಸ್‌ಹೆಚ್) ಸನ್ಮಾನ್ಯ ಪ್ರಧಾನ ಮಂತ್ರಿಯವರು 2016ರ ಅಕ್ಟೋಬರ್ 18ರಂದು ಚಾಲನೆ ನೀಡಿದರು. ಎಸ್‌ಸಿ–ಎಸ್‌ಟಿ ಉದ್ಯಮಿಗಳಿಗೆ ವೃತ್ತಿಪರ ನೆರವು ಒದಗಿಸುವುದು 'ಎನ್‌ಎಸ್‌ಎಸ್‌ಹೆಚ್'ನ ಉದ್ದೇಶವಾಗಿದೆ. ಭಾರತ ಸರ್ಕಾರದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಸಚಿವಾಲದ ಅಧೀನದಲ್ಲಿರುವ ಸಾರ್ವಜನಿಕ ವಲಯದ ಉದ್ಯಮವಾದ 'ರಾಷ್ಟ್ರೀಯ ಸಣ್ಣಕೈಗಾರಿಕಾ ಸಂಸ್ಥೆ' (ಎನ್‌ಎಸ್‌ಐಸಿ) ವತಿಯಿಂದ ಪ್ರಸ್ತುತ ಈ 'ಹಬ್' ಕಾರ್ಯಾಚರಣೆಗೊಳ್ಳುತ್ತಿದೆ. ಹಾಲಿ ಮತ್ತು ನೂತನ ಎಸ್‌ಸಿ–ಎಸ್‌ಟಿ ಕೈಗಾರಿಕೆಗಳು ಘಟಕಗಳು ಮತ್ತು ಯಂತ್ರೋಪಕರಣಗಳನ್ನು ಖರೀದಿಸಲು ನೆರವು ನೀಡುವ ದೃಷ್ಟಿಯಿಂದ 'ವಿಶೇಷ ಸಾಲ ಆಧರಿತ ಬಂಡವಾಳ ಸಬ್ಸಿಡಿ ಯೋಜನೆ' ಯನ್ನೂ (ಎಸ್‌ಸಿಎಲ್‌ಸಿಎಸ್‌ಎಸ್) ಈ 'ಹಬ್' ಅಡಿಯಲ್ಲಿ ರೂಪಿಸಲಾಗಿದೆ. ಈ ಯೋಜನೆ ಅಡಿ ಗರಿಷ್ಠ 25% ಬಂಡವಾಳ ಸಬ್ಸಿಡಿ ದೊರೆಯುತ್ತದೆ.



### ಮಾನವ ಬಂಡವಾಳ

ಹೊಸ ಪ್ರತಿಭೆಗಳನ್ನು ಆಕರ್ಷಿಸುವುದು ಮತ್ತು ಇರುವ ಪ್ರತಿಭೆಗಳನ್ನು ಉಳಿಸಿಕೊಳ್ಳುವುದು 'ಎಂಎಸ್‌ಎಂಇ'ಗಳ ಪ್ರಗತಿಯಲ್ಲಿ ಬಹುಮುಖ್ಯ ಅಂಶವಾಗಿ ಪರಿಣಮಿಸಿದೆ. ದೇಶದಲ್ಲಿ 125 ಕೋಟಿಜನ ಸಂಖ್ಯೆಯಿದ್ದರೂ, ನುರಿತ ಕೆಲಸಗಾರರ ಸಂಖ್ಯೆ ಕೊರತೆಯಿದೆ. 'ಎಂಎಸ್‌ಎಂಇ' ವಲಯ ನಮ್ಮ ಕಾರ್ಮಿಕ ವರ್ಗದ ಕೌಶಲ್ಯ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದರಲ್ಲೂ ಒಟ್ಟು ಜನಸಂಖ್ಯೆಯಲ್ಲಿ ಶೇ.65ರಷ್ಟು 35ಕ್ಕಿಂತಲೂ ಕಡಿಮೆ ವಯೋಮಾನದವರನ್ನು ಹೊಂದಿರುವ ಸಮಯದಲ್ಲಿ ಈ ವಿಚಾರ ಮತ್ತಷ್ಟು ಮಹತ್ವ ಪಡೆದುಕೊಂಡಿದೆ. ಪ್ರತಿವರ್ಷ ಉದ್ಯೋಗ ಮಾರುಕಟ್ಟೆಗೆ ಸೇರ್ಪಡೆಯಾಗುತ್ತಿರುವ ವ್ಯಕ್ತಿಗಳ ಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು, ಕೌಶಲ ಆಧರಿತ ತರಬೇತಿ ನೀಡುವುದು ಮತ್ತು ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು (ಇಡಿಪಿ) ಹಮ್ಮಿಕೊಳ್ಳುವುದು ಅಗತ್ಯವಾಗಿದೆ. ಇದರಿಂದ ತಕ್ಷಣ ಉದ್ಯೋಗಕ್ಕೆ ಸಿದ್ಧವಿರುವ ನುರಿತ ಕಾರ್ಮಿಕ ವರ್ಗವನ್ನು ಹೊಂದಲು ಸಾಧ್ಯವಾಗಲಿದೆ. ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳ ಸಚಿವಾಲಯವು ಅಭಿವೃದ್ಧಿ ಆಯುಕ್ತರ ಕಚೇರಿ ಮೂಲಕ ವಿವಿಧ ವಲಯಗಳಲ್ಲಿ ಹಲವು ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳು (ಇಡಿಪಿ) ಮತ್ತು ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

### ಉಪಸಂಹಾರ

ಆರ್ಥಿಕ ಪ್ರಗತಿಯನ್ನು ಉತ್ತೇಜಿಸುವ ವಿಸ್ತೃತ ಗುರಿಯ ಜತೆಜತೆಯಲ್ಲೇ, ಸರ್ಕಾರ ಈ ಕ್ಷೇತ್ರದ ಮಹತ್ವವನ್ನು ಗುರುತಿಸಿ, ಹಾಲಿ ಯೋಜನೆಗಳನ್ನು ಮತ್ತಷ್ಟು

**(19ನೇ ಪುಟಕ್ಕೆ)**

# ಕೈಗಾರಿಕೆಗಳ ಬಲವರ್ಧನೆಗೆ ಮಾರ್ಗ

* ಎಂ. ಚಂದ್ರಶೇಖರ ರೆಡ್ಡಿ
** ದಿಬ್ಯೆಂದು ಚೌಧುರಿ



ಮುದ್ರಾ, ಸ್ಟ್ಯಾಂಡ್ ಅಪ್ ಇಂಡಿಯಾ, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಸಾಲಖಾತ್ರಿ ನಿಧಿ ವ್ಯಾಪ್ತಿ ಹೆಚ್ಚಳ ಮತ್ತು ಬ್ಯಾಂಕುಗಳಿಂದ ಎಂಎಸ್‌ಎಂಇಗಳಿಗೆ ಹೆಚ್ಚಿನ ಸಾಲಮಿತಿ ಮತ್ತಿತರ ಕ್ರಮಗಳಿಂದಾಗಿ ಸಣ್ಣ ಉದ್ದಿಮೆಗಳಿಗೆ ಸಾಲದ ನೆರವು ನೀಡಿಕೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ.

ಅತಿ ಸಣ್ಣ (ಕಿರು), ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯದ ಉತ್ತೇಜನ ಮತ್ತು ಅಭಿವೃದ್ಧಿ ರಾಜ್ಯ ಸರ್ಕಾರಗಳ ಪ್ರಾಥಮಿಕ ಹೊಣೆಗಾರಿಕೆಯಾಗಿದೆ. ಭಾರತ ಸರ್ಕಾರ ಕೂಡ ದೇಶದ ಆರ್ಥಿಕತೆ ಮತ್ತು ಉದ್ಯೋಗ ಸೃಷ್ಟಿ ದೃಷ್ಟಿಯಿಂದ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯದ ಪ್ರಗತಿ ಮತ್ತು ಅಭಿವೃದ್ಧಿಗೆ ಪ್ರಾಮುಖ್ಯತೆಯನ್ನು ನೀಡುತ್ತಿದೆ. ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯದ ಉತ್ತೇಜನ ಮತ್ತು ಅಭಿವೃದ್ಧಿಗಾಗಿ ಅಖಿಲ ಭಾರತ ಸಮಗ್ರ ನೀತಿಯನ್ನು ರೂಪಿಸುವುದು ಹಾಗೂ ಮತ್ತಿತರ ಕ್ರಮಗಳನ್ನು ಕೈಗೊಳ್ಳುತ್ತಿದೆ. ಅಷ್ಟೇ ಅಲ್ಲದೆ, ರಾಜ್ಯ ಸರ್ಕಾರಗಳು ಕೈಗೊಂಡಿರುವ ಪೂರಕ ಹಿತಾಸಕ್ತಿಗಳನ್ನು ನಾನಾ ರೀತಿಯಲ್ಲಿ ಉತ್ತೇಜಿಸುತ್ತಿವೆ. ಅದರ ಪರಿಣಾಮವೆ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿ (ಎಂಎಸ್‌ಎಂಇಡಿ)ಕಾಯ್ದೆ–2006 ಜಾರಿ. ಈ ಕಾಯ್ದೆ ಜಾರಿಯ ನಂತರ 2007ರ ಮೇ 9ರಂದು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವಾಲಯ ಸ್ಥಾಪಿಸಲಾಯಿತು. ಅದರಲ್ಲಿ ಹಿಂದಿನ ಸಣ್ಣ ಪ್ರಮಾಣದ ಕೈಗಾರಿಕೆ (ಎಸ್‌ಎಸ್‌ಐ) ಮತ್ತು ಕೃಷಿ ಗ್ರಾಮೀಣ ಕೈಗಾರಿಕೆ(ಎಆರ್‌ಐ)ಗಳನ್ನು ವಿಲೀನಗೊಳಿಸಲಾಯಿತು. ಈ ವಲಯದಲ್ಲಿ 45.3 ದಶಲಕ್ಷ ಘಟಕಗಳಿವೆ(6ನೇ ಆರ್ಥಿಕ ಗಣತಿ – 2013 ಪ್ರಕಾರ) ಮತ್ತು 117 ದಶಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸುತ್ತಿದೆ. ಇದು ಒಟ್ಟಾರೆ ಉತ್ಪಾದನಾ ಹುಟ್ಟುವಳಿಯಲ್ಲಿ ಶೇಕಡ 45ರಷ್ಟು ಹೊಂದಿದ್ದು ಮತ್ತು ದೇಶದಿಂದ ರಫ್ತಾಗುವ ಪ್ರಮಾಣದಲ್ಲಿ ಶೇಕಡ 40ರಷ್ಟು ಹೊಂದಿದೆ.

ಭಾರತ ಸರ್ಕಾರ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯದ ಉತ್ತೇಜನ ಮತ್ತು ಅಭಿವೃದ್ಧಿಗೆ ಹಲವು ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ಸಾಲ ಸೌಲಭ್ಯ, ತಾಂತ್ರಿಕ ಉನ್ನತೀಕರಣ ಯೋಜನೆಗಳು, ಗುಣಮಟ್ಟ ಅಭಿವೃದ್ಧಿ, ಮಾರುಕಟ್ಟೆ ಬೆಂಬಲ ಮತ್ತಿತರ ಕ್ರಮಗಳೂ ಸೇರಿವೆ. ಮುದ್ರಾ, ಸ್ಟ್ಯಾಂಡ್ ಅಪ್ ಇಂಡಿಯಾ, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಸಾಲಖಾತ್ರಿ ನಿಧಿ ವ್ಯಾಪ್ತಿ ಹೆಚ್ಚಳ ಮತ್ತು ಬ್ಯಾಂಕುಗಳಿಂದ ಎಂಎಸ್‌ಎಂಇಗಳಿಗೆ ಹೆಚ್ಚಿನ ಸಾಲಮಿತಿ ಮತ್ತಿತರ ಕ್ರಮಗಳಿಂದಾಗಿ ಅವುಗಳಿಗೆ ಸಾಲದ ನೆರವು ನೀಡಿಕೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ.

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವಾಲಯ ಖಾದಿ, ತೆಂಗಿನ ನಾರು ಮತ್ತು ಗ್ರಾಮೀಣ ಕೈಗಾರಿಕೆಗಳನ್ನೂ ಸಹ ಉತ್ತೇಜಿಸುವ ಕೆಲಸ ಮಾಡುತ್ತಿದೆ. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (ಕೆವಿಐಸಿ) ದೇಶದ ವಿಸ್ತೃತ ಗ್ರಾಮೀಣ ವಲಯದ ಸಂಸ್ಕರಿಸಿದ ಉತ್ಪನ್ನಗಳ ತಯಾರಿಕೆಗೆ ಮೂಲ ಅಗತ್ಯತೆಗಳನ್ನು ಒದಗಿಸುವ ಜತೆಗೆ ಗ್ರಾಮೀಣ ಪ್ರದೇಶದ ಸುಮಾರು 150 ಲಕ್ಷ ಜನರಿಗೆ ಸುಸ್ಥಿರ ಉದ್ಯೋಗಾವಕಾಶವನ್ನೂ ಸಹ ಒದಗಿಸುತ್ತಿದೆ. ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ವಲಯ ಪಾರಂಪರಿಕ ಉತ್ಪನ್ನಗಳನ್ನು ಪ್ರತಿನಿಧಿಸುತ್ತದೆ. ಅದರಲ್ಲಿ ಸಾಂಪ್ರದಾಯಿಕ ಮತ್ತು ಅಸಂಪ್ರದಾಯಿಕ ಎರಡೂ ಬಗೆಯ ಉತ್ಪನ್ನಗಳು ಸೇರಿವೆ. ಈ ವಲಯ ಸಮಾಜದ ಮಧ್ಯಮ ಹಾಗೂ

* ಮಹಾನಿರ್ದೇಶಕರು, ** ಪ್ರಾಧ್ಯಾಪಕರು ಕಿರು, ಸಣ್ಣ ಮತ್ತು ಮಧ್ಯಮ ಉದ್ದಿಮೆ, ರಾಷ್ಟ್ರೀಯ ಸಂಸ್ಥೆ, ಹೈದರಾಬಾದ್.
E-mail : * dg@nimsme.org **dibchoudhury@gmail.com



ಮೇಲ್ವರ್ಗದ ಗ್ರಾಹಕರನ್ನು ಹೆಚ್ಚಾಗಿ ಸೆಳೆಯುವ ಶಕ್ತಿ ಹೊಂದಿದೆ.

ಈ ಸಚಿವಾಲಯ ತೆಂಗಿನ ನಾರಿನ ಉದ್ಯಮವನ್ನು ಉತ್ತೇಜಿಸುವ ಕೆಲಸವನ್ನೂ ಸಹ ಮಾಡುತ್ತಿದೆ. ಅದು ತನ್ನ ವ್ಯಾಪ್ತಿಯನ್ನು ಕೇರಳ ಮಾತ್ರವಲ್ಲದೆ, ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ, ಗೋವಾ, ಒಡಿಶಾ, ಮಹಾರಾಷ್ಟ್ರ ಮತ್ತು ಗುಜರಾತ್ ಹಾಗೂ ಇತರ ರಾಜ್ಯಗಳಿಗೂ ವಿಸ್ತರಿಸಿದೆ. ಈ ಉದ್ಯಮ ಸುಮಾರು 7 ಲಕ್ಷಕ್ಕೂ ಅಧಿಕ ಮಂದಿಗೆ ಉದ್ಯೋಗ ನೀಡುವ ಜತೆಗೆ ಹಲವು ವರ್ಷಗಳಿಂದ ರಫ್ತು ಪ್ರಮಾಣದಲ್ಲಿ ಗಮನಾರ್ಹ ಹೆಚ್ಚಳ ಸಾಧಿಸುವ ಮೂಲಕ ಉತ್ತಮ ಕೊಡುಗೆ ನೀಡುತ್ತಿದೆ. ನಾರಿನ ಪರಿಸರ–ಸ್ನೇಹಿ ಗುಣದಿಂದಾಗಿ ಅದರ ಬಳಕೆ ದಿನೇ ದಿನೇ ಹೆಚ್ಚುತ್ತಿದೆ. ನಾರಿನ ಉತ್ಪನ್ನಗಳಿಗೆ ತಾಂತ್ರಿಕ ಅಂಶಗಳನ್ನು ಬಳಸಿ ಮೌಲ್ಯವರ್ಧನೆ ಮಾಡಿದರೆ ಇನ್ನು ಹೆಚ್ಚಿನ ರೀತಿಯಲ್ಲಿ ಪ್ರಗತಿ ಸಾಧಿಸುವ ಜತೆಗೆ ನಾರಿನ ಜವಳಿ ಸೇರಿದಂತೆ ಹಲವು ಬಗೆಯ ವೈವಿಧ್ಯಮಯ ಉತ್ಪನ್ನಗಳನ್ನು ತಯಾರಿಸಬಹುದಾಗಿದೆ.

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವಾಲಯಕ್ಕೆ ಮೊದಲ ಬಾರಿಗೆ ಐಎಸ್‌ಓ 9001–2008 ಪ್ರಮಾಣೀಕರಣ ಲಭಿಸಿರುವುದು ಹೆಮ್ಮೆಯ ಸಂಗತಿ ಮತ್ತು ಇದು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯದ ಉದ್ದಿಮೆಗಳ ಅಭಿವೃದ್ಧಿಗೆ ತೋರುತ್ತಿರುವ ದೃಢತೆ ಮತ್ತು ಬದ್ಧತೆಯನ್ನು ಪ್ರತಿಪಾದಿಸುತ್ತದೆ. ಸಚಿವಾಲಯ ಎಲ್ಲೆಲ್ಲಿ ಸಾಧ್ಯವಿದೆಯೊ ಅಂತಹ ವಲಯವನ್ನು ಗುರುತಿಸಿ ಸುಧಾರಣೆಗಳನ್ನು ತರುವ ಮೂಲಕ ಅಲ್ಲಿ ಐಎಸ್‌ಓ ಗುಣಮಟ್ಟವನ್ನು ಕಾಪಾಡುವ ಜತೆಗೆ ಅದು ತನ್ನ ಕಾರ್ಯವೈಖರಿಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಪಾಲಿಸುತ್ತಿದೆ. ಕೆವಿಐಸಿ, ತೆಂಗಿನ ನಾರು ಮಂಡಳಿ, ಎನ್‌ಎಸ್‌ಐಸಿ ಮತ್ತು ಎನ್‌ಐಎಂಎಸ್‌ಎಂಇ ಇವೆಲ್ಲ ಸಚಿವಾಲಯದ ವಿಭಾಗಗಳೇ ಆಗಿದ್ದು, ಅವು ಐಎಸ್‌ಓ ಗುಣಮಟ್ಟ ಅಳವಡಿಸಿಕೊಂಡಿರುವ ಜತೆಗೆ ಪ್ರಮಾಣೀಕರಣವನ್ನು ಪಡೆದುಕೊಂಡಿವೆ.

ಪ್ರಧಾನಮಂತ್ರಿ ಅವರು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವಾಲಯದ, ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ತಾಣ ಮತ್ತು ಶೂನ್ಯ ದೋಷ ಮತ್ತು ಶೂನ್ಯ ಪರಿಣಾಮ – ಈ ಎರಡು ಯೋಜನೆಗಳಿಗೆ 2016ರ ಅಕ್ಟೋಬರ್ 18ರಂದು ಚಾಲನೆ ನೀಡಿದರು. ಅವರು ಎಂಎಸ್‌ಎಂಇಗಳಿಗೆ ಸಾಲ ಸೌಲಭ್ಯಗಳ ಹೆಚ್ಚಳ ಮತ್ತು ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳಿಗೆ ಸಾಲ ಖಾತ್ರಿ ನಿಧಿ ಟ್ರಸ್ಟ್ (ಸಿಜಿಟಿಎಂಎಸ್‌ಇ)ಗೆ ಮೂಲ ಬಂಡವಾಳ ಹೆಚ್ಚಿಸುವುದಾಗಿ ಪ್ರಕಟಿಸಿದರು. ಅಲ್ಲದೆ 2017ರ ಫೆಬ್ರವರಿ 1 ರಂದು ಮಂಡಿಸಿದ ಕೇಂದ್ರ ಬಜೆಟ್‌ನಲ್ಲಿ ಮೊದಲ ಬಾರಿಗೆ ಎಂಎಸ್‌ಎಂಇ ವಲಯವನ್ನು ಪ್ರತ್ಯೇಕವಾಗಿ ಗುರುತಿಸಿ ಅದಕ್ಕೆ ವಿಶೇಷ ಗಮನಹರಿಸಲಾಗಿತ್ತು. ಅದರಲ್ಲಿ 50 ಕೋಟಿ ರೂಪಾಯಿಗೂ ಕಡಿಮೆ ವಹಿವಾಟು ನಡೆಸುವ ಎಂಎಸ್‌ಎಂಇಗಳಿಗೆ ವಿಧಿಸುತ್ತಿದ್ದ ಕಾರ್ಪೊರೇಟ್ ತೆರಿಗೆಯನ್ನು ಶೇಕಡ 30ರಿಂದ 25ಕ್ಕೆ ಇಳಿಕೆ ಮಾಡಲಾಯಿತು.

### ಎಂಎಸ್‌ಎಂಇ ಸಚಿವಾಲಯದ ಪಾತ್ರ

ಬದಲಾಗುತ್ತಿರುವ ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯದಲ್ಲಿ ಸ್ಪರ್ಧಾತ್ಮಕತೆ ಹೆಚ್ಚಿಸಲು ಉದ್ಯಮಶೀಲತೆ ಉತ್ತೇಜಿಸಲು, ಉದ್ಯೋಗ ಮತ್ತು ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸುವ ರಾಜ್ಯ ಸರ್ಕಾರಗಳ ಪ್ರಯತ್ನಗಳಿಗೆ ನೆರವು ನೀಡುವಲ್ಲಿ ಎಂಎಸ್‌ಎಂಇ ಮತ್ತು ಅದರ ಸಂಸ್ಥೆಗಳು ಮಹತ್ವದ ಪಾತ್ರ ವಹಿಸುತ್ತವೆ. ಸಚಿವಾಲಯ ಮತ್ತು ಅದರ ಸಂಸ್ಥೆಗಳು ಹಲವು ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಅವುಗಳಿಂದ ಸೌಲಭ್ಯಗಳು ದೊರಕಲಿವೆ. 1) ಹಣಕಾಸು ಸಂಸ್ಥೆಗಳು/ಬ್ಯಾಂಕುಗಳಿಂದ ಅಗತ್ಯವಿರುವಷ್ಟು ಸಾಲ ಹಂಚಿಕೆ. 2) ಆಧುನೀಕರಣ ಮತ್ತು ತಂತ್ರಜ್ಞಾನ ಉನ್ನತೀಕರಣಕ್ಕೆ ಬೆಂಬಲ. 3) ಸಮಗ್ರ ಮೂಲಸೌಕರ್ಯ ಅಭಿವೃದ್ಧಿ ಪ್ರಯೋಜನಗಳು. 4) ಆಧುನಿಕ ಪರೀಕ್ಷಾ ಸೌಕರ್ಯಗಳು ಮತ್ತು ಗುಣಮಟ್ಟ ಪ್ರಮಾಣೀಕರಣ. 5) ಆಧುನಿಕ ನಿರ್ವಹಣಾ ಪದ್ಧತಿಗಳ ಪರಿಚಯ. 6) ಸೂಕ್ತ ತರಬೇತಿ ಸೌಲಭ್ಯಗಳ ಮೂಲಕ ಉದ್ಯಮಶೀಲತೆ ಅಭಿವೃದ್ಧಿ ಮತ್ತು ಕೌಶಲ್ಯಾಭಿವೃದ್ಧಿ. 7) ಉತ್ಪನ್ನ ಅಭಿವೃದ್ಧಿ, ವಿನ್ಯಾಸ ಮತ್ತು ಪ್ಯಾಕಿಂಗ್‌ಗೆ ನೆರವು. 8) ಕುಶಲಕರ್ಮಿಗಳು ಮತ್ತು ಕಾರ್ಮಿಕರ ಕಲ್ಯಾಣ. 9) ದೇಶೀಯ ಮತ್ತು ರಫ್ತು ಮಾರುಕಟ್ಟೆಗಳನ್ನು ಸುಲಭವಾಗಿ ತಲುಪಲು ಸಹಾಯ. 10) ಘಟಕಗಳ ಸಬಲೀಕರಣ ಮತ್ತು ಸಾಮರ್ಥ್ಯವೃದ್ಧಿಗೆ ಹಾಗೂ ಸಮಗ್ರ ಅಭಿವೃದ್ಧಿಯ ಉತ್ತೇಜನಕ್ಕೆ ಕ್ಲಸ್ಟರ್ ಮಟ್ಟದಲ್ಲಿ ಅಗತ್ಯ ಕ್ರಮಗಳು.

ಎಂಎಸ್‌ಎಂಇ ವಲಯದ ಉತ್ತೇಜನಕ್ಕೆ ಸಚಿವಾಲಯದ ನಾನಾ ಇಲಾಖೆಗಳು ಕೈಗೊಂಡಿರುವ ಹಲವು ಯೋಜನೆಗಳು ಈ ಮುಂದಿನಂತಿವೆ.

### ಎಸ್‌ಎಂಇ ವಿಭಾಗದ ಯೋಜನೆಗಳು

1. ಅಂತಾರಾಷ್ಟ್ರೀಯ ಸಹಕಾರ. 2. ತರಬೇತಿ ಸಂಸ್ಥೆಗಳಿಗೆ ನೆರವು(ಎಟಿಐ). 3. ಮಾರುಕಟ್ಟೆ ಸಹಾಯ

### ಅಭಿವೃದ್ಧಿ ಆಯುಕ್ತರ (ಡಿಸಿ–ಎಂಎಸ್‌ಎಂಇ) ಯೋಜನೆಗಳು

1. ಸಾಲ ಖಾತ್ರಿ. 2. ತಾಂತ್ರಿಕ ಉನ್ನತೀಕರಣಕ್ಕೆ ಸಾಲ ಆಧಾರಿತ ಮೂಲ ಸಬ್ಸಿಡಿ. 3. ಐಎಸ್‌ಓ 9000/ಐಎಸ್‌ಓ 14001 ಪ್ರಮಾಣೀಕರಣ ಮರು ಪಾವತಿಗಳು. 4. ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮ. 5. ಸಣ್ಣ ಕೈಗಾರಿಕೆಗಳ ಹಣಕಾಸು ಕಾರ್ಯಕ್ರಮ. 6. ಎಂಎಸ್‌ಎಂಇ ಮಾರುಕಟ್ಟೆ ಅಭಿವೃದ್ಧಿ ಸಹಾಯ (ಎಂಡಿಎ). 7. ರಾಷ್ಟ್ರೀಯ ಪ್ರಶಸ್ತಿಗಳು (ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ವೈಯಕ್ತಿಕವಾಗಿ ನೀಡುವುದು). 8. ರಾಷ್ಟ್ರೀಯ ಉತ್ಪಾದನಾ ಸ್ಪರ್ಧಾತ್ಮಕ ಕಾರ್ಯಕ್ರಮ (ಎನ್‌ಎಂಸಿಪಿ). * ಮಾರುಕಟ್ಟೆ ಬೆಂಬಲ/ಎಂಎಸ್‌ಎಂಇಗಳಿಗೆ ಸಹಾಯ (ಬಾರ್‌ಕೋಡ್). * ಸಂಪೋಷಣಾ ಕೇಂದ್ರಗಳ ಮೂಲಕ ಎಸ್‌ಎಂಇಗಳ ಉದ್ಯಮಶೀಲತೆ ಮತ್ತು ನಿರ್ವಹಣಾ ಅಭಿವೃದ್ಧಿ. * ಕ್ಯುಎಂಎಸ್ ಮತ್ತು ಕ್ಯುಟಿಟಿ ಮೂಲಕ ಉತ್ಪಾದನಾ ವಲಯದ ಸ್ಪರ್ಧಾತ್ಮಕತೆ ಹೆಚ್ಚಿಸುವುದು.

* ಬೌದ್ಧಿಕ ಹಕ್ಕು ಸಾಮ್ಯ (ಐಪಿಆರ್) ಬಗ್ಗೆ ಜಾಗೃತಿ ಹೆಚ್ಚಿಸುವುದು. * ಎಂಎಸ್‌ಎಂಇಗಳ ಉತ್ಪಾದನೆಯಲ್ಲಿ ಸ್ಪರ್ಧಾತ್ಮಕತೆ ಹೆಚ್ಚಿಸುವುದು. * ಎಂಎಸ್‌ಎಂಇ ಉತ್ಪಾದನಾ ವಲಯದ ವಿನ್ಯಾಸ ತರಬೇತಿ ಮತ್ತು ವಿನ್ಯಾಸ ಪರಿಣಿತಿ (ಡಿಸೈನ್). * ಮಾರುಕಟ್ಟೆ ಸಹಕಾರ ಮತ್ತು ತಾಂತ್ರಿಕ ಉನ್ನತೀಕರಣ. * ಎಂಎಸ್‌ಎಂಇಗಳಿಗೆ ತಂತ್ರಜ್ಞಾನ ಮತ್ತು ಗುಣಮಟ್ಟ ಉನ್ನತೀಕರಣ ಬೆಂಬಲ

**ಎನ್‌ಎಸ್‌ಐಸಿ ಯೋಜನೆಗಳು**

1. ಸಾಧನೆ ಮತ್ತು ಸಾಲ ರೇಟಿಂಗ್. 2. ಬ್ಯಾಂಕ್ ಸಾಲ ನೆರವು. 3. ಕಚ್ಚಾ ಸಾಮಗ್ರಿ ಸಹಾಯ. 4. ಒಂದೇ ಕಡೆ ನೋಂದಣಿ. 5. ಮಾಹಿತಿ ಒದಗಿಸುವ ಸೇವೆಗಳು. 6. ಮಾರುಕಟ್ಟೆ ಬೌದ್ಧಿಕ ಸೇವೆಗಳ ಗುತ್ತಿಗೆ. 7. ಬಿಲ್ ವಿನಾಯಿತಿ. 8. ಎನ್‌ಎಸ್‌ಐಸಿ ಮೂಲಸೌಕರ್ಯ. * ವಸ್ತುಪ್ರದರ್ಶನ ಕೇಂದ್ರ, ಹೈದರಾಬಾದ್. * ಮಾಹಿತಿ ತಂತ್ರಜ್ಞಾನ ಸಂಪೋಷಣಾ ಕೇಂದ್ರ. * ವಸ್ತುಪ್ರದರ್ಶನ ಮತ್ತು ಬ್ಯುಸಿನೆಸ್ ಪಾರ್ಕ್ ಮಾರುಕಟ್ಟೆ ಅಭಿವೃದ್ಧಿ. * ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ಬ್ಯುಸಿನೆಸ್ ಪಾರ್ಕ್. * ವಸ್ತು ಪ್ರದರ್ಶನ ಮೈದಾನ, ನವದೆಹಲಿ

**ಎಆರ್‌ಐ ವಿಭಾಗದ ಯೋಜನೆಗಳು**

1. ಪ್ರಧಾನಮಂತ್ರಿ ಉದ್ಯೋಗ ಸೃಜನ ಯೋಜನೆ (ಪಿಎಂಇಜಿಪಿ). 2. ಖಾದಿ ಉದ್ಯೋಗಿಗಳಿಗೆ ಜನಶ್ರೀ ಬಿಮಾ ಯೋಜನೆ. 3. ಮಾರುಕಟ್ಟೆ ಅಭಿವೃದ್ಧಿ ಸಹಾಯ (ಎಂಡಿಎ). 4. ವಿಜ್ಞಾನ ತಂತ್ರಜ್ಞಾನ ಯೋಜನೆ. 5. ನಾರು ಉದ್ಯಮಿ ಯೋಜನೆ. 6. ತೆಂಗಿನ ನಾರು ವಿಕಾಸ ಯೋಜನೆ. * ರಫ್ತು ಮಾರುಕಟ್ಟೆ ಉತ್ತೇಜನ. * ಕೌಶಲ್ಯಾಭಿವೃದ್ಧಿ ಮತ್ತು ಮಹಿಳಾ ನಾರು ಯೋಜನೆ. * ಉತ್ಪಾದನಾ ಮೂಲಸೌಕರ್ಯ ಅಭಿವೃದ್ಧಿ (ಡಿಪಿಐ). * ನಾರು ಕೂಲಿಕಾರರಿಗೆ ವೈಯಕ್ತಿಕ ಅಪಘಾತ ವಿಮಾ ಯೋಜನೆ. * ವ್ಯಾಪಾರ ಮತ್ತು ಕೈಗಾರಿಕಾ ಸಂಬಂಧಿ ಕಾರ್ಯೋನ್ಮುಖ ಬೆಂಬಲ ಸೇವೆಗಳು (ಟಿಐಆರ್‌ಎಫ್‌ಎಸ್‌ಎಸ್). * ದೇಶೀಯ ಮಾರುಕಟ್ಟೆ ಉತ್ತೇಜನ ಯೋಜನೆ. * ಆಸ್ಪೈರ್ (ಉದ್ಯಮಶೀಲತೆ ಮತ್ತು ಕೃಷಿ ಕೈಗಾರಿಕೆ ಅನ್ವೇಷಣಾ ಮತ್ತು ಉತೇಜನಾ ಯೋಜನೆ). * ಸಾಂಪ್ರದಾಯಿಕ ಕೈಗಾರಿಕೆಗಳ ಪುನರುಜ್ಜೀವನಕ್ಕಾಗಿ ಪರಿಷ್ಕೃತ ಯೋಜನಾ.

**ನಿಧಿ (ಎಸ್‌ಎಫ್‌ಯುಆರ್‌ಟಿಐ)**

ಉತ್ಪಾದನಾ ವಲಯ ಮಾತ್ರವಲ್ಲದೆ, ಸೇವಾ ವಲಯದಲ್ಲಿ ಹೊಸದಾಗಿ ಸಣ್ಣ ಕೈಗಾರಿಕೆಗಳನ್ನು ಆರಂಭಿಸುವ ಯುವ ಉದ್ಯಮಿಗಳಿಗೆ ಸಚಿವಾಲಯ, ಸಾಲ ಆಧಾರಿತ ಸಬ್ಸಿಡಿ ಯೋಜನೆಯಾದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಕಾರ್ಯಕ್ರಮ (ಪಿಎಂಇಜಿಪಿ) ಸೌಲಭ್ಯವನ್ನು ಜಾರಿಗೊಳಿಸುತ್ತಿದೆ. 2014–16ರವರೆಗೆ (2016ರ ಮಾರ್ಚ್ 8ರವರೆಗೆ) 1,12,883 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಅವುಗಳಿಂದ ಒಟ್ಟಾರೆ 8,71,000 ಉದ್ಯೋಗಗಳು ಸೃಷ್ಟಿಯಾಗಿವೆ. ಸಚಿವಾಲಯ 2015ರಲ್ಲಿ ಗ್ರಾಮೀಣ ಉದ್ಯಮಿಗಳು ಹಾಗೂ ಅನ್ವೇಷಣೆಯನ್ನು ಉತ್ತೇಜಿಸಲು – ಆಸ್ಪೈರ್ ಯೋಜನೆ ಜಾರಿಗೊಳಿಸಿತು. ಕೃಷಿ ಕೈಗಾರಿಕೆಯನ್ನು ಉದ್ಯಮಶೀಲತೆ ಉತ್ತೇಜಿಸಲು, ಆವಿಷ್ಕಾರಗಳಿಗಾಗಿ ನವೋದ್ಯಮಗಳನ್ನು ಆರಂಭಿಸುವುದು ಮತ್ತು ತಂತ್ರಜ್ಞಾನ ಕೇಂದ್ರಗಳ ಸಂಪರ್ಕ ಜಾಲ ಸ್ಥಾಪನೆ ಮಾಡುವುದು ಮತ್ತು ಸಂಪೋಷಣಾ ಕೇಂದ್ರಗಳನ್ನು ಸ್ಥಾಪಿಸುವುದು ಈ



ಯೋಜನೆಯಲ್ಲಿ ಸೇರಿದೆ. ಆಸ್ಪೈರ್ ಅಡಿ ತಂತ್ರಜ್ಞಾನ ವ್ಯವಹಾರಿಕ ಸಂಪೋಷಣಾ ಕೇಂದ್ರ, ಜೀವನೋಪಾಯ ವ್ಯವಹಾರಿಕ ಸಂಪೋಷಣಾ ಕೇಂದ್ರಗಳ ಸ್ಥಾಪನೆ ಮತ್ತು ಎಸ್‌ಐಡಿಬಿಐ ಅಡಿ ಆ ಕಾರ್ಯಕ್ರಮಗಳಿಗೆ ನಿಧಿ ಸ್ಥಾಪನೆ ಅಂಶ ಒಳಗೊಂಡಿದೆ.

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವಾಲಯ ಮತ್ತು ಎಸ್‌ಐಡಿಬಿಐ, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗಾಗಿ ಯಾವುದೇ ಅಡೆ ತಡೆ ಇಲ್ಲದೆ, ಖಾತ್ರಿ ಇಲ್ಲದೆ/ ಮೂರನೇ ವ್ಯಕ್ತಿಯ ಶ್ಯೂರಿಟಿ ಇಲ್ಲದೆ ಹೊಸದಾಗಿ ತನ್ನದೇ ಆದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸುವ ಕನಸು ಹೊಂದಿರುವ ಯುವ ಉದ್ಯಮಿಗಳಿಗೆ ಸುಲಭವಾಗಿ ಸಾಲ ಸೌಲಭ್ಯ ದೊರಕುವಂತೆ ಮಾಡಲು ಸಾಲ ಖಾತ್ರಿ ನಿಧಿ ಟ್ರಸ್ಟ್ (ಸಿಜಿಟಿಎಂಎಸ್‌ಇ) ಆರಂಭಿಸಿದೆ.

ಸಚಿವಾಲಯ 2015ರ ಸೆಪ್ಟಂಬರ್‌ನಲ್ಲಿ ಉದ್ಯೋಗ ಆಧಾರ್ ಒಡಂಬಡಿಕೆಯ ಅಧಿಸೂಚನೆ ಹೊರಡಿಸಿದೆ. ಈ ಉದ್ಯೋಗ ಆಧಾರ್ ಒಡಂಬಡಿಕೆಯಲ್ಲಿ ಮೂಲತಃ ಉದ್ಯಮಿಗಳ ನೊಂದಣಿ ಕಾರ್ಯ ಸುಲಭವಾಗುತ್ತದೆ. ಎಂಎಸ್‌ಎಂಇ ರಚಿಸಿರುವ http://udyogaadhaar.gov.in ವೆಬ್‌ಸೈಟ್ ಮೂಲಕ ಉದ್ಯೋಗ ಆಧಾರ್ ಒಡಂಬಡಿಕೆಯನ್ನು ಆನ್‌ಲೈನ್ ಮೂಲಕವೇ ನಿರ್ವಹಿಸಬಹುದು. ಉದ್ಯೋಗ ಆಧಾರ್ ಒಡಂಬಡಿಕೆ ಸಲ್ಲಿಕೆಗೆ ಯಾವುದೇ ಶುಲ್ಕವಿಲ್ಲ ಮತ್ತು ಮತ್ತು ಅದರ ಒಂದಕ್ಕಿಂತ ಹೆಚ್ಚು ಸಲ ಬಳಕೆಗೆ ಯಾವುದೇ ನಿರ್ಬಂಧವೂ ಇಲ್ಲ. ಈ ಒಪ್ಪಂದವನ್ನು ವೈಯಕ್ತಿಕವಾಗಿ ಅಥವಾ ಪ್ರಮಾಣಪತ್ರ ಆಧರಿಸಿ ಸಲ್ಲಿಕೆ ಮಾಡಬಹುದು. ಇಲ್ಲಿಯವರೆಗೆ 4.17ಲಕ್ಷಕ್ಕೂ ಅಧಿಕ ಎಂಎಸ್‌ಎಂಇಗಳು ನೊಂದಣಿ ಮಾಡಿದ್ದಾರೆ.

ಎಂಎಸ್‌ಎಂಇಗಳು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಲ್ಲಿ ಮಾರುಕಟ್ಟೆ ಸಹ ಒಂದಾಗಿದೆ. ಎಂಎಸ್‌ಎಂಗಳಿಗೆ ವಿಶ್ವವ್ಯಾಪಿ ಸಾರ್ವಜನಿಕ ಖರೀದಿ ಅತಿ ದೊಡ್ಡ ಮಾರುಕಟ್ಟೆಯಾಗಿದೆ. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಉತ್ತೇಜನಕ್ಕೆ ಸರ್ಕಾರಿ ಖರೀದಿಯಲ್ಲಿ ಆದ್ಯತೆ ನೀಡಲು 2012ರ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಎಂಎಸ್‌ಎಂಇಗಳಿಗೆ ಸಾರ್ವಜನಿಕ ಖರೀದಿ ನೀತಿಯನ್ನು ಸರ್ಕಾರ ಪ್ರಕಟಿಸಿದೆ. ಇದರಡಿ ಕಡ್ಡಾಯವಾಗಿ ಮೂರು ವರ್ಷಗಳ ಕಾಲ ಎಲ್ಲ ಸರ್ಕಾರಿ ಸಚಿವಾಲಯಗಳು/ ಇಲಾಖೆ/ಸಾರ್ವಜನಿಕ ವಲಯದ ಉದ್ದಿಮೆಗಳು ಒಟ್ಟಾರೆ ಖರೀದಿಯ ಶೇ.20ರಷ್ಟನ್ನು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಂದಲೇ ಖರೀದಿ ಮಾಡಬೇಕು. ಅಲ್ಲದೆ ಸಮಗ್ರ ಬೆಳವಣಿಗೆ ದೃಷ್ಟಿಯಿಂದ ಸ್ವಂತ ಉದ್ದಿಮೆ ನಡೆಸುವ ಎಸ್‌ಸಿ/ಎಸ್‌ಟಿ ವರ್ಗದವರಿಂದ ಶೇ.4ರಷ್ಟು ಖರೀದಿಯ ಪ್ರತ್ಯೇಕ ಗುರಿಯನ್ನು ನೀತಿಯಲ್ಲಿ ಒಡ್ಡಲಾಗಿದೆ.

ಭಾರತೀಯ ಮಾರುಕಟ್ಟೆ ಉದ್ಯೋಗದಲ್ಲಿ ಸ್ಪರ್ಧಾತ್ಮಕತೆ ಹೆಚ್ಚಿಸಲು,

ರಾಷ್ಟ್ರೀಯ ಉತ್ಪಾದನಾ ಸ್ಪರ್ಧಾತ್ಮಕ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯಡಿ ಇಡೀ ವಲಯದ ಸರಣಿ ಮೌಲ್ಯವನ್ನು ಹೆಚ್ಚಿಸುವ ಜತೆಗೆ ಹೆಚ್ಚಿನ ಪೈಪೋಟಿ ನಡೆಸುವಂತೆ ಮಾಡಲು ಉದ್ದೇಶಿಸಲಾಗಿದೆ. 2015–16ನೇ ಸಾಲಿನಲ್ಲಿ (2016 ಜನವರಿ 31ರ ವರೆಗೆ) ಕ್ಯುಎಂಎಸ್/ಕ್ಯುಟಿಟಿ ಅಂಶದಡಿ ಒಟ್ಟಾರೆ 52 ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಒಟ್ಟಾರೆ 43.15 ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವಾಲಯ ದೇಶದಲ್ಲಿ ಕೈಗಾರಿಕೆಗಳ ಪ್ರಗತಿ ಮತ್ತು ಅವುಗಳಿಗೆ ಸರಿಯಾದ ದಿಕ್ಕು ತೋರಿಸಲು ಅದರಲ್ಲೂ ವಿಶೇಷವಾಗಿ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳಿಗೆ ಸಹಾಯ ಮಾಡಲು 18 ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ತಂತ್ರಜ್ಞಾನ ಕೇಂದ್ರಗಳು ಉಪಕರಣ ಮತ್ತು ಡೈ ಉತ್ಪಾದನಾ ವಲಯದಲ್ಲಿ ಉತ್ತಮ ಕುಶಲಕರ್ಮಿಗಳನ್ನು ತರಬೇತು ಮಾಡುವ ಮೂಲಕ ಭಾರತೀಯ ಉದ್ಯಮಕ್ಕೆ ಮೌಲ್ಯಯುತ ಸೇವೆಗಳನ್ನು ಒದಗಿಸುತ್ತಿವೆ. ಈ ತಂತ್ರಜ್ಞಾನ ಕೇಂದ್ರಗಳ ಮುಖ್ಯ ಧ್ಯೇಯವೆಂದರೆ ಉತ್ಪಾದನಾ ವಲಯದ ಹಲವು ವಿಭಾಗಗಳಲ್ಲಿ ತಂತ್ರಜ್ಞಾನ ವರ್ಗಾವಣೆ ಬದಲಾವಣೆಗೆ ಸಹಕರಿಸುವ ಜತೆಗೆ ಅಗತ್ಯ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದಾಗಿದೆ. ಉದ್ಯಮದ ಅಗತ್ಯಕ್ಕೆ ತಕ್ಕಂತೆ ಈ ಕೇಂದ್ರಗಳು ತರಬೇತಿ ಕೋರ್ಸ್‌ಗಳನ್ನು ನಡೆಸುತ್ತಿವೆ.

ಸರ್ಕಾರ ಎಂಎಸ್‌ಎಂಇ ವಲಯದ ಅಭಿವೃದ್ಧಿ ಮತ್ತು ಪುನರುಜ್ಜೀವನಕ್ಕೆ ಸತತವಾಗಿ ಶ್ರಮಿಸುತ್ತಿದೆ ಮತ್ತು ಅದು ಇತ್ತೀಚೆಗೆ ನಷ್ಟದಲ್ಲಿರುವ ಎಂಎಸ್‌ಎಂಇಗಳ ಪುನರ್‌ವಸತಿ ಮತ್ತು ಪುನರುಜ್ಜೀವನಕ್ಕಾಗಿ 2015ರ ಮೇ 29ರಂದು 'ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಪುನರುಜ್ಜೀವನ ಮತ್ತು ಪುನಃಶ್ಚೇತನ ನೀತಿ'ಯನ್ನು ಅಧಿಕೃತವಾಗಿ ಗೆಜೆಟ್‌ನಲ್ಲಿ ಘೋಷಿಸಿದೆ.

ಭಾರತದ ಪ್ರಧಾನಮಂತ್ರಿಗಳು 2015ರ ಆಗಸ್ಟ್ 15ರಂದು ಸ್ಟ್ಯಾಂಡ್‌ಅಪ್ ಇಂಡಿಯಾ ಕಾರ್ಯಕ್ರಮವನ್ನು ಪ್ರಕಟಿಸಿದ್ದಾರೆ. ಈ ಯೋಜನೆಯಡಿ ಎಸ್‌ಸಿ/ಎಸ್‌ಟಿ ಮತ್ತು ಮಹಿಳಾ ಉದ್ಯಮಿಗಳನ್ನು ಉತ್ತೇಜಿಸುವ ಗುರಿ ಇದೆ. ಈ ಯೋಜನೆಯಡಿ ಜನಸಂಖ್ಯೆಯ ಅತ್ಯಂತ ದುರ್ಬಲ ವರ್ಗದವರು ಎಸ್‌ಸಿ/ಎಸ್‌ಟಿ/ಮಹಿಳಾ ಉದ್ಯಮಿಗಳಿಗೆ ಸಾಂಸ್ಥಿಕ ಸಾಲ ವ್ಯವಸ್ಥೆ ಯೋಜನೆಯಡಿ 7 ವರ್ಷಗಳ ವರೆಗೆ ಮರುಪಾವತಿ ಮಾಡಬಹುದಾದ ಹತ್ತು ಲಕ್ಷದಿಂದ ನೂರು ಲಕ್ಷದ ವರೆಗೆ ಸಾಲ ಸೌಲಭ್ಯ ಒದಗಿಸುವ ಉದ್ದೇಶವಿದೆ. ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯಲ್ಲಿ ಉದ್ಯಮಶೀಲತೆ ಪೋಷಣೆ, ನವೋದ್ಯಮಗಳ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಾಣ, ಆವಿಷ್ಕಾರಗಳ ಉತ್ತೇಜನಕ್ಕೆ ಪೂರಕವಾದ ವ್ಯವಸ್ಥೆ ರಚನೆ ಮತ್ತಿತರ ಗುರಿಗಳನ್ನು ಹೊಂದಲಾಗಿದೆ. ಭಾರತದಲ್ಲಿ ನವೋದ್ಯಮವನ್ನು ಉತ್ತೇಜಿಸಲು ಉತ್ಪಾದನಾ ವಲಯದಲ್ಲಿನ ಹಲವು ವಿನಾಯಿತಿಗಳನ್ನು ನೀಡಲಾಗಿದೆ. ಅವುಗಳಿಗೆ ಪೂರ್ವಾನುಭವ/ಒಟ್ಟಾರೆ ವಹಿವಾಟು ವಿನಾಯಿತಿ ನೀಡಲಾಗಿದ್ದು, ಗುಣಮಟ್ಟ ನಿಯಂತ್ರಣ ಮತ್ತು ತಾಂತ್ರಿಕ ಮಾನದಂಡಗಳನ್ನು ಪರಿಗಣಿಸಲಾಗುವುದು. ನವೋದ್ಯಮಗಳು ತಮ್ಮ ಯೋಜನೆಗಳನ್ನು ಅಗತ್ಯತೆಗೆ ತಕ್ಕಂತೆ ಜಾರಿಗೊಳಿಸಿ, ಭಾರತದ ಉತ್ಪಾದನಾ ಸಾಮರ್ಥ್ಯಕ್ಕೆ ತಮ್ಮದೇ ಆದ ಸೌಕರ್ಯವನ್ನು ಸೃಷ್ಟಿಸುವುದಾಗಿದೆ.

STAND UP India
Endeavour and Prosper

ವಿಶ್ವದ ಬಹುತೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿನ ಜನಸಂಖ್ಯೆಗೆ ವಯಸ್ಸಾಗುತ್ತಿದೆ. ಆದರೆ ಭಾರತ 2020ರ ವೇಳೆಗೆ ವಿಶ್ವದ ಅತ್ಯಂತ ದೊಡ್ಡ ಯುವ ರಾಷ್ಟ್ರವಾಗಲಿದೆ. ಹಾಗಾಗಿ ಯುವಜನರ ಮೇಲೆ ಹೂಡಿಕೆ ಮಾಡಲು ಇದು ಸಕಾಲ. ಭಾರತದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇಕಡ 63ರಷ್ಟು ಯುವಜನರಿದ್ದಾರೆ ಮತ್ತು ಅವರನ್ನು ವೇತನ ಉದ್ಯೋಗದ ಜೀವನೋಪಾಯ ಕೆಲಸ ಕಾರ್ಯಗಳಲ್ಲಿ ತೊಡಗಿಸಬೇಕಿದೆ ಅಥವಾ ಅವರಿಗೆ ಸ್ವಯಂ ಉದ್ಯೋಗ ಕಲ್ಪಿಸಿ ಕೊಡಬೇಕು. ಅವರು ತಮ್ಮ ಜೀವನಚಕ್ರದಡಿ ಉದ್ಯೋಗ ಮಾಡುವುದನ್ನು ಕಲಿಯಬೇಕು. ಯುವಜನಾಂಗ ಅತ್ಯಂತ ಕ್ರಿಯಾಶೀಲ ಮತ್ತು ಚಲನಾತ್ಮಕ ಆಗಿದ್ದು, ಅವರು ದೇಶದ ಅತ್ಯಂತ ಮೌಲ್ಯಯುತ ಮಾನವಸಂಪನ್ಮೂಲ ಅಷ್ಟೇ ಅಲ್ಲದೆ ದೇಶದ ಆಸ್ತಿಯೂ ಆಗಿದ್ದಾರೆ. ಭವಿಷ್ಯದಲ್ಲಿ ಅವರು ರಾಷ್ಟ್ರ ನಿರ್ಮಾಣದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಲಿದ್ದಾರೆ. ಅವರಿಗೆ ಉದ್ಯೋಗಗಳನ್ನು ಒದಗಿಸಿಕೊಟ್ಟು ಮತ್ತು ಅವರನ್ನು ಉದ್ಯಮಕ್ಕೆ ಸಜ್ಜುಗೊಳಿಸಬೇಕಾಗಿದೆ.

**ಎನ್‌ಐ–ಎಂಎಸ್‌ಎಂಇ ಪಾತ್ರ**

ಭಾರತ ಸರ್ಕಾರದ ಕೈಗಾರಿಕಾ ಮತ್ತು ವಾಣಿಜ್ಯ ಸಚಿವಾಲಯದಡಿ ಒಂದು ಇಲಾಖೆಯಾಗಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ರಾಷ್ಟ್ರೀಯ ಸಂಸ್ಥೆ (ಎನ್‌ಐ–ಎಂಎಸ್‌ಎಂಇ) ಮೂಲತಃ 1960ರಲ್ಲಿ ನವದೆಹಲಿಯಲ್ಲಿ ಕೇಂದ್ರೀಯ ಕೈಗಾರಿಕಾ ವಿಸ್ತರಣೆ ತರಬೇತಿ ಕೇಂದ್ರ (ಸಿಐಇಟಿಐ) ಹೆಸರಿನಲ್ಲಿ ಸ್ಥಾಪನೆಯಾಯಿತು. ಅದು ಆಡಳಿತಾತ್ಮಕ ನಿಯಂತ್ರಣ ಮತ್ತು ಪ್ರಕ್ರಿಯೆಗಳಿಂದ ಮುಕ್ತವಾಗಿ ಸಣ್ಣ ಉದ್ಯಮಗಳ ಉತ್ತೇಜನದಲ್ಲಿ ಪ್ರಮುಖಪಾತ್ರ ವಹಿಸುತ್ತದೆ. 1962ರಲ್ಲಿ ಈ ಕೇಂದ್ರ ಹೈದರಾಬಾದ್‌ಗೆ ಸ್ಥಳಾಂತರಗೊಂಡಿತು ಮತ್ತು ಅದನ್ನು ಸಣ್ಣ ಕೈಗಾರಿಕಾ ವಿಸ್ತರಣಾ ತರಬೇತಿ ಕೇಂದ್ರ (ಎಸ್‌ಐಇಟಿ)ಆಗಿ ಮರು ನಾಮಕರಣಗೊಳಿಸಲಾಯಿತು. ಈ ಎಸ್‌ಐಇಟಿ ಎರಡು ದಶಕಗಳ ಕಾಲ ಅತ್ಯಂತ ಜನಪ್ರಿಯವಾಗಿತ್ತು ಮತ್ತು ಭಾರತ ಸರ್ಕಾರ ಅದರ ನಿರ್ವಹಣೆಯನ್ನು ಆಡಳಿತ ಮಂಡಳಿ (ಗೌರ್ನಿಂಗ್ ಕೌನ್ಸಿಲ್)ಗೆ ವಹಿಸಿಕೊಟ್ಟಿತ್ತು ಮತ್ತು ಅದು ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ ನಂತರ ಅದನ್ನು 2007ರ ಬಳಿಕ ಎನ್‌ಐ–ಎಂಎಸ್‌ಎಂಇ ಆಗಿ ಬದಲಾಯಿಸಿ ಅದನ್ನು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವಾಲಯದ ತರಬೇತಿ, ಸಂಶೋಧನೆ ಮತ್ತು ಸಲಹಾ ವಿಭಾಗದ ವ್ಯಾಪ್ತಿಗೆ ತರಲಾಯಿತು. ಅದೆಲ್ಲಾ ಏನೇ ಇದ್ದರೂ, ಎನ್‌ಐ–ಎಂಎಸ್‌ಎಂಇ ಈಗಲೂ ಸ್ವಾಯತ್ತ ಮತ್ತು ಸ್ವಯಂ ಹಣಕಾಸು ಹೊಂದಿ ಉತ್ತಮ ಕೆಲಸ ಮಾಡುತ್ತಿದೆ.

ಈ ಎನ್‌ಐ–ಎಂಎಸ್‌ಎಂಇ ಹಲವು ಅಂತಾರಾಷ್ಟ್ರೀಯ ಸಂಸ್ಥೆಗಳ ಜತೆ ಮುಖಾಮುಖಿಯಾಗಿ ಉತ್ತಮ ಲಾಭದಾಯಕ ಸಂಬಂಧಗಳನ್ನು ಹೊಂದಿದೆ. ಅವುಗಳೆಂದರೆ ಸಿಎಫ್‌ಟಿಸಿ (ತಾಂತ್ರಿಕ ಸಹಕಾರ

ಕುರಿತ ಕಾಮನ್‌ವೆಲ್ತ್ ನಿಧಿ), ಯುನೆಸ್ಕೊ (ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ), ಯುಎನ್‌ಡಿಪಿ (ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ), ಫೋರ್ಡ್ ಫೌಂಡೇಶನ್, ಜರ್ಮನಿಯ ಜಿಟಿಝೆಡ್, ಯುಎಸ್‌ಎಐಡಿ(ವಿಶ್ವ ಸಂಸ್ಥೆಯ ಅಂತಾರಾಷ್ಟ್ರೀಯ ಅಭಿವೃದ್ಧಿ ಕುರಿತಾದ ಏಜೆನ್ಸಿ) ಮತ್ತು ಐಎಲ್‌ಓ (ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ)ಮತ್ತಿತರ ಸೇರಿವೆ. ಇದಲ್ಲದೆ ಕೇಂದ್ರ ಸರ್ಕಾರದ ಹಲವು ಸಚಿವಾಲಯಗಳು ಮತ್ತು ರಾಜ್ಯ ಸರ್ಕಾರಗಳ ನಾನಾ ಇಲಾಖೆಗಳು ಸಂಸ್ಥೆಗಳ ಜತೆ ಸೇರಿ ಎಂಎಸ್‌ಎಂಇ ವಲಯದ ಉತ್ತೇಜನ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ಹಾಗೂ ಕೌಶಲ್ಯಾಭಿವೃದ್ಧಿ ಕಾರ್ಯದಲ್ಲಿ ತೊಡಗಿದೆ.

**ಕಾರ್ಯಕ್ಷೇತ್ರದ ನಾನಾ ಆಯಾಮಗಳು**

* ಉದ್ಯಮಶೀಲತೆ. * ಕ್ಲಸ್ಟರ್ ಅಭಿವೃದ್ಧಿ. * ಕೌಶಲ್ಯಾಭಿವೃದ್ಧಿ. * ಸಣ್ಣ ಪ್ರಮಾಣದ ಹಣಕಾಸು. * ವ್ಯವಹಾರ ಅಭಿವೃದ್ಧಿ ಸೇವೆಗಳು. * ಉಪ-ವಲಯ ಅಭಿವೃದ್ಧಿ

**ಸಾಮರ್ಥ್ಯ ಅಭಿವೃದ್ಧಿ:** ಎಂಎಸ್‌ಎಂಇ ವಲಯದ ಬಲವರ್ಧನೆಗೆ ರಾಷ್ಟ್ರೀಯ ಮಟ್ಟದಲ್ಲಿ ಸಂಪನ್ಮೂಲಗಳ ಅಭಿವೃದ್ಧಿ, (ಟಿಒಟಿ/ ಉದ್ಯಮಶೀಲತೆ ಅಭಿವೃದ್ಧಿಯಲ್ಲಿ ಮಾಸ್ಟರ್ ತರಬೇತುದಾರರು/ಮೈಕ್ರೋಲ್ಯಾಬ್, ಉದ್ದಿಮೆಗಳ ಅಭಿವೃದ್ಧಿ ಮತ್ತು ನಿರ್ವಹಣೆ) ಗೆ ಅವಕಾಶ ನೀಡಿ ರಾಜ್ಯಗಳ ಇಡಿಐಗಳ ಸಾಮರ್ಥ್ಯ ಬಲವರ್ಧನೆಗೆ ಸಹಕರಿಸುವುದು. ಸಿಎಫ್‌ಸಿಗಳು (ಎಂಎಸ್‌ಇಸಿಡಿಪಿ, ಎಸ್‌ಎಫ್‌ಯುಆರ್‌ಟಿಐ) ಗಳ ಸ್ಥಾಪನೆ ಮತ್ತು ನಿರ್ವಹಣೆಗೆ ಕ್ಲಸ್ಟರ್ ವಿಶೇಷ ಯೋಜನಾ ವಾಹಕಗಳನ್ನು ಸ್ಥಾಪಿಸಲು ವ್ಯವಸ್ಥಿತ ಕಾರ್ಯಕ್ರಮಗಳನ್ನು ಸಂಘಟಿಸುವುದು.

**ಮಾಹಿತಿ ಪ್ರಸರಣ ಮತ್ತು ಜ್ಞಾನ ನಿರ್ವಹಣೆ:** ಎಸ್‌ಇಡಿಎಂಇಗೆ ಸಂಬಂಧಿಸಿದ ನಿಯತಕಾಲಿಕ ಐಎಸ್‌ಬಿಎನ್ ನಿರ್ವಹಣೆ, ಆನ್‌ಲೈನ್ ಕೋರ್ಸ್‌ಗಳನ್ನು ನಡೆಸುವುದು, ನಿಯಮಿತ ಪ್ರಕಾಶನಗಳ ಮೂಲಕ ಎಂಎಸ್‌ಎಂಇ ಯೋಜನೆಗಳನ್ನು ಪ್ರಕಟಿಸಿ, ಪ್ರಸರಿಸುವುದು (ಹಿಂದಿ, ಇಂಗ್ಲಿಷ್ ಮತ್ತು ಇತರೆ ಭಾರತೀಯ ಭಾಷೆಗಳಲ್ಲಿ). ಎಂಎಸ್‌ಎಂಇ ಇನ್ಫೋ ಪೋರ್ಟಲ್‌ನಲ್ಲಿ ಎಂಎಸ್‌ಎಂಇಗೆ ಸಂಬಂಧಿಸಿದ



ಸುದ್ದಿಗಳನ್ನು ಅಪ್‌ಡೇಟ್ ಮಾಡುವುದು, ಕ್ಲಸ್ಟರ್ ಮಾಹಿತಿಗಳನ್ನು ಸಂಬಂಧಿಸಿದವರಿಗೆ ತಲುಪಿಸುವುದು, ಗೂಗಲ್ ಸ್ಟೋರ್‌ನಲ್ಲಿ ಎಂಎಸ್‌ಎಂಇ ಯೋಜನೆಗಳ ಆನ್‌ಲೈನ್ ಅಪ್ಲಿಕೇಷನ್, ಆ್ಯಪ್‌ಗಳನ್ನು ಲಭ್ಯವಾಗುವಂತೆ ನೋಡಿಕೊಳ್ಳುವುದು ಮತ್ತು ಉದ್ಯಮಿಗಳ ಅನುಕೂಲಕ್ಕೆ ಯೋಜನೆಗಳನ್ನು ಕೈಪಿಡಿಗಳನ್ನು ಸಿದ್ಧಪಡಿಸುವುದು.

**ಸಂಶೋಧನೆ ಮತ್ತು ನೀತಿ ಪ್ರತಿಪಾದನೆ:** ಎಂಎಸ್‌ಎಂಇ ವಲಯದ ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಅಧ್ಯಯನಗಳನ್ನು ನಡೆಸುವುದು. ಪಿಎಚ್.ಡಿ ಸ್ಕಾಲರ್‌ಗೆ ಎಂಎಸ್‌ಎಂಇ ಸಂಶೋಧನಾ ಫೆಲೋಶಿಪ್‌ಗಳನ್ನು ನೀಡುವುದು. ದೇಶದ ಉದ್ಯಮಶೀಲತೆಯನ್ನು ಉತ್ತೇಜಿಸಲು ರಾಜ್ಯಗಳ ಎಂಎಸ್‌ಎಂಇ ಇಲಾಖೆಗಳು (ಡಿಐ ಮತ್ತು ಡಿಐಸಿ)ಗಳ ಮರು ವಿನ್ಯಾಸಗೊಳಿಸಲು ಸಲಹೆಗಳನ್ನು ನೀಡುವುದು.

**ಎಂಎಸ್‌ಎಂಇಗಳಿಗೆ ಅಂತಾರಾಷ್ಟ್ರೀಯ ಸಹಕಾರ:** ಕೃಷಿಯೇತರ ಜೀವನೋಪಾಯಗಳ ಬಗ್ಗೆ ಅಂತಾರಾಷ್ಟ್ರೀಯ ಕೋರ್ಸ್‌ಗಳನ್ನು ನಡೆಸುವುದು. ಉದ್ಯಮಶೀಲತೆ ಅಭಿವೃದ್ಧಿ, ಎಂಎಸ್‌ಎಮ್‌ಇ ವಲಯ ಇತ್ಯಾದಿ.. ಎಂಎಸ್‌ಎಂಇ ನಾನಾ ಆಯಾಮಗಳಲ್ಲಿ 10ಸಾವಿರಕ್ಕೂ ಅಧಿಕ ವಿದೇಶಿಯರಿಗೆ ತರಬೇತಿ ನೀಡಲಾಗಿದೆ.

**ಸಂಪರ್ಕಜಾಲ :** ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಎಂಎಸ್‌ಎಂಇ ವಲಯಕ್ಕೆ ಸಂಬಂಧಿಸಿದ ಹಲವು ಸಮಿತಿಗಳನ್ನು ಪ್ರತಿನಿಧಿಸುವುದು. ಸಿಐಡಬ್ಲ್ಯೂಇ, ಎಎಲ್‌ಇಎಪಿ, ಡಿಐಸಿಸಿಐ ಸೇರಿದಂತೆ ಎಂಎಸ್‌ಎಂಇ ಸಂಘಟನೆಗಳನ್ನು ಉತ್ತೇಜಿಸುವುದು ಮತ್ತು ಬಲವರ್ಧನೆಗೊಳಿಸುವುದು. ಆರ್‌ಬಿಐನಿಂದ ಸ್ಥಳೀಯ ಎಸ್‌ಎಲ್‌ಬಿಸಿಗೆ ಸದಸ್ಯರನ್ನು ನಾಮಕರಣ ಮಾಡುವುದು. ವಿಶ್ವ ವ್ಯಾಪಾರ ಸಂಸ್ಥೆ, ಬಿಎಂಒಗಳು, ರಾಜ್ಯ ಸರ್ಕಾರಗಳು, ಉದ್ಯಮದ ಸಂಘಟನೆಗಳು ಮತ್ತು ಇತರೆ ಸಂಬಂಧಿಸಿದ ಸಂಸ್ಥೆಗಳ ಜೊತೆ ಸಂಪರ್ಕ ಹೊಂದುವುದು.

**ಕ್ಲಸ್ಟರ್‌ಗಳ ಗುರುತಿಸುವಿಕೆ :** ರಾಜ್ಯ ಸರ್ಕಾರಗಳು ಕೈಗೊಳ್ಳುವ ಕ್ಲಸ್ಟರ್ ಉಪಕ್ರಮಗಳು, ಅಭಿವೃದ್ಧಿ, ತಾಂತ್ರಿಕ ಉನ್ನತೀಕರಣ, ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಿಎಫ್‌ಸಿಗಳ ಸೃಷ್ಟಿ ಸೇರಿದಂತೆ ಇನ್ನಿತರ ಯೋಜನೆಗಳಿಗೆ ಸರಿಯಾದ ಮಾರ್ಗದರ್ಶನ, ನಾನಾ ಕಸ್ಟರ್‌ಗಳಲ್ಲಿ ವಿಶೇಷ ಉದ್ದೇಶದ ಏಜೆನ್ಸಿಗಳನ್ನು ರಚಿಸಲು ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು ಮತ್ತು ತಂತ್ರಜ್ಞಾನದ ಮೇಲೆ ನಿಗಾ ಇಡುವುದು ಹಾಗೂ ಇತರ ಪಾಲುದಾರ ಸಾಧನೆ ಗುರುತಿಸುವುದು ಮತ್ತು ನಿಗದಿತ ಫಲಿತಾಂಶದ ಬಗ್ಗೆ ಗಮನಹರಿಸುವುದು.

**ಜೀವನೋಪಾಯ ವ್ಯವಹಾರಿಕ ಸಂಪೋಷಣಾ ಕೇಂದ್ರ :** ಸುಸ್ಥಿರ ಜೀವನೋಪಾಯ ಒದಗಿಸುವ ನಿಟ್ಟಿನಲ್ಲಿ ಎಂಟು ವ್ಯಾಪಾರಗಳಲ್ಲಿ ಉದ್ಯಮಿಗಳನ್ನು ರೂಪಿಸಲು ಜೀವನೋಪಾಯ ವ್ಯವಹಾರಿಕ ಸಂಪೋಷಣಾ ಕೇಂದ್ರಗಳನ್ನು ನಿರ್ಮಿಸುವುದು ಮತ್ತು ಅವರಿಗೆ ಬ್ಯಾಂಕ್ ಸಂಪರ್ಕ ಹಾಗೂ ಆರ್ಥಿಕ ಸೇರ್ಪಡೆ ಮೂಲಕ ಅಗತ್ಯ ನೆರವು ನೀಡುವುದು.

2015-16ರವರೆಗೆ ಈ ಕೇಂದ್ರ 14,034 ಕಾರ್ಯಕ್ರಮಗಳ ಮೂಲಕ 4,62,393 ಪ್ರತಿನಿಧಿಗಳಿಗೆ ತರಬೇತಿ ನೀಡಿದೆ. ಅವರಲ್ಲಿ ಭಾರತ ಸರ್ಕಾರದ ನಾನಾ ಸಚಿವಾಲಯಗಳ ಮತ್ತು ರಾಜ್ಯ ಸರ್ಕಾರಗಳ ಅಧಿಕಾರಿಗಳು, ಭಾವಿ ಹಾಗೂ ಹಾಲಿ ಉದ್ಯಮಿಗಳು ಸೇರಿದ್ದಾರೆ.

1976ರಿಂದೀಚೆಗೆ ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಐಟಿಇಸಿ ಯೋಜನೆಯನ್ನು ಸಂಸ್ಥೆ ಅನುಷ್ಠಾನಗೊಳಿಸಿದೆ ಮತ್ತು 142 ಅಭಿವೃದ್ಧಿಶೀಲ ರಾಷ್ಟ್ರಗಳ 9450 ಅಂತಾರಾಷ್ಟ್ರೀಯ ಪ್ರತಿನಿಧಿಗಳಿಗೆ ತರಬೇತಿ ನೀಡಲಾಗಿದೆ. ಜೊತೆಗೆ ಸಂಸ್ಥೆ ಆರಂಭದಿಂದ ಇಲ್ಲಿಯವರೆಗೆ 909 ಸಂಶೋಧನಾ ಮತ್ತು ಸಲಹಾ ಯೋಜನೆಗಳನ್ನು ಕೈಗೊಂಡಿದ್ದು, ಅದನ್ನೇ ಮುಂದುವರಿಸಿಕೊಂಡು ಹೋಗಲು ಶ್ರಮಿಸುತ್ತಿದೆ. ❑

# ಗುಣಮಟ್ಟ ಪ್ರಮಾಣೀಕರಣ; ಸ್ಪರ್ಧಾತ್ಮಕತೆಯ ಬೆನ್ನೆಲುಬು




**ಭಾರತದ ಎಂಎಸ್‌ಎಂಇಗಳು ಜಾಗತಿಕ ಮಟ್ಟದ ಉದ್ದಿಮೆಗಳಾಗಿ ಬೆಳೆಯುವ ಎಲ್ಲ ಸಾಮರ್ಥ್ಯವನ್ನು ಹೊಂದಿದ್ದು, ಅದು ಸಾಕಾರಗೊಳ್ಳಬೇಕಾದರೆ, ಗುಣಮಟ್ಟದ ಪ್ರಮಾಣಪತ್ರ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಬಂಡವಾಳವನ್ನು ತೊಡಗಿಸಬೇಕಾಗಿದೆ.**

* ಡಾ. ಜತೀಂದರ್ ಸಿಂಗ್

ಯಾವುದೇ ಉದ್ಯಮಕ್ಕಾದರೂ ಜಾಗತಿಕ ಸ್ಪರ್ಧೆ ಪ್ರಚೋದನಾತ್ಮಕವಾದ ಒತ್ತಡವಿದ್ದ ಹಾಗೆ. ಎಂಎಸ್‌ಎಂಇ – ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ಬದಲಾದ ಮಾರುಕಟ್ಟೆಯ ಪರಿಸ್ಥಿತಿ ಮತ್ತು ಸ್ಪರ್ಧೆಗಳನ್ನು ಎದುರಿಸಲು ಎಲ್ಲ ರೀತಿಯಿಂದ ಅವಕಾಶಗಳನ್ನು ಹೊಂದಿವೆ. ಈ ಉದ್ದಿಮೆಗಳು ಭಾರತದ ಆರ್ಥಿಕ ಬೆಳವಣಿಗೆಯ ಎಂಜಿನ್ ಆಗಿದ್ದು, ದೇಶದ ಎಲ್ಲ ಭಾಗಗಳಲ್ಲಿ ಉದ್ಯೋಗಾತ್ಮಕ ಸಂಸ್ಕೃತಿಯನ್ನು ಬೆಳೆಸಿದೆ.

ಸ್ಪರ್ಧಾತ್ಮಕವಾದ ಮಾರುಕಟ್ಟೆಯಲ್ಲಿ ಗಣನೀಯವಾದ ಸಾಧನೆಯನ್ನು ಗಟ್ಟಿಯಾದ ತಳಹದಿಯ ಮೇಲೆ ಮಾಡಬೇಕಾದರೆ ಗುಣಮಟ್ಟದ ಖಾತರಿ ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ. ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಎಂಎಸ್‌ಎಂಇ ಮಹತ್ವವನ್ನು ಅರಿತು ಕೊಂಡಿರುವ ಕೇಂದ್ರ ಸರ್ಕಾರದ ಎಂಎಸ್‌ಎಂಇ ಸಚಿವಾಲಯ, ಈ ಘಟಕಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಾತ್ಮಕತೆಯನ್ನು ಸತತವಾಗಿ ಗಳಿಸಿಕೊಳ್ಳಲು ತಾಂತ್ರಿಕತೆಯನ್ನು ಉನ್ನತಿಕರಿಸಿಕೊಂಡು ಉತ್ಪಾದನೆಯನ್ನು ಗರಿಷ್ಠ ಮಟ್ಟದಲ್ಲಿ ಕಾಪಾಡಿಕೊಂಡು ಹೋಗಲು ಅನೇಕ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಪ್ರಮಾಣ ಪತ್ರದ ಪ್ರಯೋಜನಗಳೆಂದರೆ * ಗುರುತಿಸುವಿಕೆ ಮತ್ತು ಬ್ರಾಂಡ್‌ಗೆ ಖ್ಯಾತಿ. * ಸುಧಾರಣೆಯ ಮುಂದುವರಿಕೆ. * ಗಮನವನ್ನು ಕೇಂದ್ರೀಕರಿಸುವಿಕೆ. * ಆತ್ಮವಿಶ್ವಾಸ. * ಸಿಬ್ಬಂದಿಯ ತೃಪ್ತಿ ಮತ್ತು ಬಳಕೆ.

**ರಾಷ್ಟ್ರೀಯ ಉತ್ಪಾದನೆಯ ಸ್ಪರ್ಧಾತ್ಮಕತೆಯ ಕಾರ್ಯಕ್ರಮ** – ಈ ಕಾರ್ಯಕ್ರಮದಂತೆ 10 ಯೋಜನೆಗಳನ್ನು ರೂಪಿಸಲಾಗಿದ್ದು ಅವುಗಳಲ್ಲಿ ಐಸಿಟಿಯ ಮುಂದುವರಿಕೆ, ಮಿನಿ ಟೂಲ್‌ರೂಂ, ಎಸ್‌ಎಂಇಗಳಿಗೆ ವಿನ್ಯಾಸ ಕ್ಲಿನಿಕ್ ಮತ್ತು ಮಾರಾಟದ ಬೆಂಬಲ ಸೇರಿವೆ. ಈ ಕಾರ್ಯಕ್ರಮಗಳು ಉತ್ಪಾದನಾ ಗುಣಮಟ್ಟದ ಮ್ಯಾನೇಜ್‌ಮೆಂಟ್ ಮಾನದಂಡ ಮತ್ತು ಗುಣಮಟ್ಟದ ತಾಂತ್ರಿಕತೆ ಟೂಲ್ಸ್ ವಿಚಾರದಲ್ಲಿ ಉದ್ದಿಮೆದಾರರಿಗೆ ಬೆಂಬಲ ನೀಡುತ್ತವೆ.

**ತಾಂತ್ರಿಕತೆ ಮತ್ತು ಗುಣಮಟ್ಟ ಉನ್ನತೀಕರಣಗಳ ಬೆಂಬಲ** ಎಂಎಸ್‌ಎಂಇಗಳಿಗೆ – ಈ ಯೋಜನೆ ಇಂಧನವನ್ನು ದಕ್ಷತೆಯಿಂದ ಬಳಸುವ ತಾಂತ್ರಿಕತೆಗಳು ಮತ್ತು ಉತ್ಪಾದನಾ ಘಟಕಗಳ ಉತ್ಪಾದನಾ ವೆಚ್ಚಗಳನ್ನು ಕಡಿಮೆ ಮಾಡುವುದು ಮತ್ತು ಶುದ್ಧವಾದ ಅಭಿವೃದ್ಧಿಯ ಮಾರ್ಗಗಳನ್ನು ಅಳವಡಿಸಿಕೊಳ್ಳಲು ಒತ್ತು ನೀಡುತ್ತದೆ. ಎಂಎಸ್‌ಎಂಇಗಳಿಗೆ ಶೂನ್ಯ ದೋಷ, ಶೂನ್ಯ ಪರಿಣಾಮ ತಿಳಿವಳಿಕೆ, ಹಣಕಾಸಿನ ನೆರವು ನೀಡುವುದು ಮತ್ತು ಪ್ರಮಾಣ ಪತ್ರ ನೀಡುವ ವಿಚಾರದಲ್ಲಿ ಸಹಾಯ ಒದಗಿಸುತ್ತವೆ. ಎಂಎಸ್‌ಎಂಇಗಳು ಉತ್ಪಾದನೆಯಲ್ಲಿ ಸಂಪೂರ್ಣವಾಗಿ ದೋಷರಹಿತವಾದ ವ್ಯವಸ್ಥೆಯನ್ನು ಅಳವಡಿಸಿಕೊಂಡು ಉತ್ತಮ ಗುಣಮಟ್ಟದ ಉಪಕರಣಗಳನ್ನು ಉಪಯೋಗಿಸಿಕೊಂಡು ಇಂಧನವನ್ನು ಅತ್ಯಂತ ದಕ್ಷತೆಯಿಂದ ಬಳಸಿಕೊಳ್ಳಬೇಕಾಗುತ್ತದೆ. ಈ ಯೋಜನೆ 'ಭಾರತದಲ್ಲೇ ತಯಾರಿಸಿ' ಧ್ಯೇಯಕ್ಕೆ ಬೆಂಬಲವಾಗಿದೆ. ಈ ಯೋಜನೆಯಲ್ಲಿ ಗುತ್ತಿಗೆ ಪಡೆಯಬೇಕಾದರೆ ಅತಿ ಸಣ್ಣ, ಸಣ್ಣ,

* ಹಿರಿಯ ಕಾರ್ಯದರ್ಶಿ, ಪಿ.ಹೆಚ್.ಡಿ., ವಾಣಿಜ್ಯೋದ್ಯಮ ಸಂಘಟನೆ, ನವದೆಹಲಿ. E-mail : jatinder@phdcci.in

ಮಧ್ಯಮ ಗಾತ್ರದ ಉದ್ಯಮಗಳು ಚಿನ್ನ, ಬೆಳ್ಳಿ ಮತ್ತು ಕಂಚಿನ ಗುಣಮಟ್ಟದ ಪ್ರಮಾಣ ಪತ್ರ ಪಡೆದುಕೊಳ್ಳಲು ಸ್ಪರ್ಧಿಸಬೇಕಾಗುತ್ತದೆ. ಶುದ್ಧವಾದ ತಾಂತ್ರಿಕತೆಯನ್ನು ಬಳಸಿಕೊಂಡು ಉತ್ತಮವಾದ ಗುಣಮಟ್ಟವನ್ನು ಹೊಂದಿರುವ ವಸ್ತುಗಳನ್ನು ಉತ್ಪಾದನೆ ಮಾಡಲು ಹೆಚ್ಚಿನ ಅವಕಾಶ ಕಲ್ಪಿಸಿಕೊಡುತ್ತದೆ. ಈ ಯೋಜನೆಯು ಶೂನ್ಯ ದೋಷ ಶೂನ್ಯ ಪರಿಣಾಮ ಪ್ರಮಾಣ ಪತ್ರ ಕಾರ್ಯರೂಪಕ್ಕೆ ತರಲು ಅತಿ ಸಣ್ಣ, ಸಣ್ಣ, ಮಧ್ಯಮ ಗಾತ್ರದ ಉದ್ಯಮಗಳಿಗೆ ಹಣಕಾಸಿನ ನೆರವು ನೀಡುತ್ತದೆ. ಮೌಲ್ಯಮಾಪನ/ ರೇಟಿಂಗ್, ಗ್ಯಾಪ್ ವಿಶ್ಲೇಷಣೆ, ರೇಟಿಂಗ್‌ನ್ನು ಸುಧಾರಿಸಿಕೊಳ್ಳಲು ಸಲಹೆಗಾರರ ಜೊತೆ ಕೈಜೋಡಿಸಿ ಕೆಲಸ ಮಾಡುವುದನ್ನು ಇದು ಒಳಗೊಂಡಿರುತ್ತದೆ. ಜೆಡ್ ರೇಟಿಂಗ್‌ನ್ನು ಅಳೆಯಲು 50 ಅಂಶಗಳಿದ್ದು ಜೆಡ್ ಡಿಫೆನ್ಸ್‌ರೇಟಿಂಗ್ ಅಳೆಯಲು 25 ಅಂಶಗಳಿವೆ. ಜೆಡ್‌ನ್ನು ಅನುಷ್ಠಾನಕ್ಕೆ ತರಲುಕ್ವಾಲಿಟಿ ಕಂಟ್ರೋಲ್ ಆಫ್ ಇಂಡಿಯಾ ರಾಷ್ಟ್ರೀಯ ವಿಚಕ್ಷಣಾ ಮತ್ತು ಅನುಷ್ಠಾನ ಘಟಕನ್ನು ನೇಮಿಸಿಕೊಂಡಿದೆ. ಜೆಡ್ ಯೋಜನೆಯಲ್ಲಿ ಕನಿಷ್ಠ 22000 ಎಂಎಸ್‌ಎಂಇಗಳಿಗೆ ಕಂಚಿನ ಮಟ್ಟದಲ್ಲಿ ಸರ್ಟಿಫಿಕೇಟ್ ಕೊಡುವ ಗುರಿಯನ್ನು ಕ್ಯೂಸಿಐ ಹೊಂದಿದೆ. ಕ್ಯೂಸಿಐ ವನ್ನು ಭಾರತ ಸರ್ಕಾರ ಮತ್ತು ಕೈಗಾರಿಕೆಗಳು ಒಟ್ಟಿಗೆ ಸೇರಿ ಸ್ಥಾಪಿಸಿದ್ದು ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ರಾಷ್ಟ್ರೀಯ ಅಕ್ರೆಡಿಟೇಷನ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಗುಣಮಟ್ಟ ಸರ್ಟಿಫಿಕೇಟ್‌ಗಳು– ಐಎಸ್‌ಓ ಸರ್ಟಿಫಿಕೇಶನ್ ಸಹಾಯ– ಐಎಸ್‌ಓ 9001 ವಿಶ್ವದಲ್ಲಿ ವ್ಯಾಪಕವಾಗಿ ಪರಿಗಣಿಸಲ್ಪಟ್ಟಿರುವ ಗುಣಮಟ್ಟ ಮ್ಯಾನೇಜ್‌ಮೆಂಟ್ ವ್ಯವಸ್ಥೆಯಾಗಿದೆ (QMS). ಇದು ಗ್ರಾಹಕರು ಮತ್ತಿತರೆ ವ್ಯಕ್ತಿಗಳ ನಿರೀಕ್ಷೆಗಳನ್ನು ಈಡೇರಿಸುವಲ್ಲಿ ಸಂಸ್ಥೆಗಳಿಗೆ ಸಹಾಯ ಮಾಡುತ್ತದೆ. ಐಎಸ್‌ಓ 9001 ಗುಣಮಟ್ಟದ ಮ್ಯಾನೇಜ್‌ಮೆಂಟ್ ವ್ಯವಸ್ಥೆಯು ಎಲ್ಲ ಕಾರ್ಯಾಚರಣೆಗಳ ಗುಣಮಟ್ಟವನ್ನು ಸತತವಾಗಿ ಗಮನಿಸುತ್ತಾ ಯಾವಾಗಲೂ ಉತ್ತಮವಾದ ಸೇವೆಗಳನ್ನು ಒದಗಿಸುವಂತೆ ನೋಡಿಕೊಳ್ಳುತ್ತದೆ. ಇದು ಒಂದು ಮ್ಯಾನೇಜ್‌ಮೆಂಟ್‌ನ ಆಯುಧವಾಗಿದ್ದು ಉದ್ಯಮದ ಎಲ್ಲ ಚಟುವಟಿಕೆಗಳಲ್ಲಿ ಉನ್ನತ ಮಟ್ಟದ ಸಾಧನೆಯನ್ನು ಮಾಡಲು ನೆರವಾಗುತ್ತದೆ. ಈ ಮಾನದಂಡಗಳು ಗುಣಮಟ್ಟದ ಮ್ಯಾನೇಜ್‌ಮೆಂಟ್ ವ್ಯವಸ್ಥೆಗಳಾಗಿದ್ದು ಸಂಸ್ಥೆಗಳ ಎಲ್ಲ ರೀತಿಯ ಕೆಲಸ ಕಾರ್ಯಗಳ ಗುಣಮಟ್ಟವನ್ನು ಗರಿಷ್ಠ ಮಟ್ಟದಲ್ಲಿರುವಂತೆ ನೋಡಿಕೊಳ್ಳುತ್ತದೆ. ಐಎಸ್‌ಓದ ಅಂತಾರಾಷ್ಟ್ರೀಯ ಗುಣಮಟ್ಟಗಳು ಎಂಎಸ್‌ಎಮ್‌ಇಗಳು ಹೆಚ್ಚು ದಕ್ಷತೆಯಿಂದ ಕಾರ್ಯನಿರ್ವಹಿಸಲು ಸಹಾಯಕವಾಗಿದ್ದು ಎಲ್ಲ ಉತ್ಪಾದನಾ ಚಟುವಟಿಕೆಗಳ ಸಂಸ್ಥೆಗಳು ಗುಣಮಟ್ಟದ ಮಾನದಂಡವನ್ನು ಕಾಪಾಡಿಕೊಂಡು ಹೋಗಲು ಸಹಾಯಕವಾಗುತ್ತದೆ. ಐಎಸ್‌ಓ 9001 ಮಾನದಂಡಗಳನ್ನು ಕಾರ್ಯರೂಪಕ್ಕೆ ತರುವುದು ಸಂಸ್ಥೆಯ ಬಾಹ್ಯ ಮತ್ತು ಆಂತರಿಕ ಪಾಲುದಾರರ ಸಹಕಾರ ಮತ್ತು ಮಾಹಿತಿ ವಿನಿಮಯ ಬಹಳ ಅಗತ್ಯವಾಗಿರುತ್ತದೆ. ಗುಣಮಟ್ಟದ ಮ್ಯಾನೇಜ್‌ಮೆಂಟ್‌ನ ಸೂತ್ರಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮುಂಚೆ ಸಂಸ್ಥೆಯು ಅಮೂಲಾಗ್ರವಾಗಿ ಮೌಲ್ಯಮಾಪನಕ್ಕೆ ಒಳಪಡಬೇಕಾಗುತ್ತದೆ.

| ಗುಣಮಟ್ಟದ ಪ್ರಮಾಣಪತ್ರಕ್ಕಾಗಿ ಭಾರತ ಸರ್ಕಾರ ರೂಪಿಸಿರುವ ವಿವಿಧ ಯೋಜನೆಗಳು ಈ ರೀತಿ ಇವೆ | | | |
|---|---|---|---|
| ಕಾರ್ಯಕ್ರಮ | ಒಟ್ಟು ವೆಚ್ಚ | ಕೇಂದ್ರ ಸರ್ಕಾರದ ಬೆಂಬಲ | ಸಬ್ಸಿಡಿ ನಂತರ ಅರ್ಜಿದಾರನಿಗೆ ತಗಲುವ ವೆಚ್ಚ |
| ನೊಂದಣಿ | ಉಚಿತ | ಅನ್ವಯಿಸುವುದಿಲ್ಲ | ಉಚಿತ |
| ಆನ್‌ಲೈನ್‌ನಲ್ಲಿ ಸ್ವತಃ ಮೌಲ್ಯಮಾಪನ | ಉಚಿತ | ಅನ್ವಯಿಸುವುದಿಲ್ಲ | ಉಚಿತ |
| ಡೆಸ್ಕಟಾಪ್ ಮೌಲ್ಯಮಾಪನ | ರೂ. 10,000 | ಮೈಕ್ರೊ : 80%<br>ಸಣ್ಣ : 60%<br>ಮಧ್ಯಮ : 50% | ರೂ. 2000<br>ರೂ. 4000<br>ರೂ. 5000 |
| ಸೈಟ್ ಮೌಲ್ಯ ಮಾಪನ | ರೂ. 80,000 | ಮೈಕ್ರೊ : 80%<br>ಸಣ್ಣ : 60%<br>ಮಧ್ಯಮ : 50% | ರೂ. 16,000<br>ರೂ. 32,000<br>ರೂ. 40,000 |
| ಪುನಃ ಮೌಲ್ಯ ಮಾಪನ | ರೂ. 40,000 | ಮೈಕ್ರೊ : 80%<br>ಸಣ್ಣ : 60%<br>ಮಧ್ಯಮ : 50% | ರೂ. 8000<br>ರೂ. 16,000<br>ರೂ. 20,000 |
| ಡಿಫೆನ್ಸ್ ಮೌಲ್ಯಮಾಪನ | ರೂ. 40,000 | ಮೈಕ್ರೊ : 80%<br>ಸಣ್ಣ : 60%<br>ಮಧ್ಯ : 50% | ರೂ. 8000<br>ರೂ. 16,000<br>ರೂ. 20,000 |
| ಗ್ಯಾಪ್ ವಿಶ್ಲೇಷಣೆ ಮತ್ತು ಹ್ಯಾಂಡ್ ಹೋಲ್ಡಿಂಗ್ | ರೂ. 1,90,000 | ಮೈಕ್ರೊ : 80%<br>ಸಣ್ಣ : 60%<br>ಮಧ್ಯಮ : 50% | ರೂ. 38,000<br>ರೂ. 76,000<br>ರೂ. 95,000 |

### ಮುಂದಿನ ದಾರಿ

ಮುಂದಿನ ದಶಕಗಳಲ್ಲಿ ಭಾರತ ಶೇಕಡಾ 8–10 ರಷ್ಟು ಆರ್ಥಿಕಾಭಿವೃದ್ಧಿಯ ಬೆಳವಣಿಗೆಯನ್ನು ಸಾಧಿಸಬೇಕಾದರೆ, ಜಾಗತಿಕ ಸವಾಲುಗಳನ್ನು ಎದುರಿಸಿ ಭದ್ರವಾಗಿ ನಿಲ್ಲುವ ಶಕ್ತಿಶಾಲಿಯಾದ ಮತ್ತು ಉತ್ಸಾಹದಿಂದ ಕೂಡಿದ ಎಂಎಸ್‌ಎಂಇ ವಲಯ ಬೇಕಾಗುತ್ತದೆ. ಕಳೆದ ಐದು ವರ್ಷಗಳಲ್ಲಿ ಎಂಎಸ್‌ಎಂಇ ವಲಯ ಸರಾಸರಿ ಶೇಕಡಾ 18 ರಷ್ಟು ಬೆಳವಣಿಗೆಯನ್ನು ಸಾಧಿಸಿದೆ. ಮಾಲಿಕರು/ಉದ್ಯಮಿಗಳು ಗುಣಮಟ್ಟದ ಮಹತ್ವದ ಮನೋಭಾವನೆಯೊಂದಿಗೆ ಸಾಂಸ್ಥಿಕ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕಿದೆ.ಮಾನವ ಸಂಪನ್ಮೂಲದಲ್ಲಿ ಭಾರತ ವೈವಿಧ್ಯಮಯವಾದ ದೇಶ. ಎಂಎಸ್‌ಎಂಇ ಕ್ಲಸ್ಟರ್‌ಗಳು ದೇಶದಾದ್ಯಂತ ಹರಡಿಕೊಂಡಿದ್ದರೂ ದೇಶ ವ್ಯಾಪ್ತಿಯಾಗಿ ಸಮಾನವಾಗಿ ಹರಡಿಕೊಂಡಿಲ್ಲ. ಎಂಎಸ್‌ಎಂಇ ವಲಯದ ವಿವಿಧ ಹಂತಗಳಲ್ಲಿ ಸರ್ಟಿಫಿಕೇಟ್‌ಗಳನ್ನು ಪಡೆದುಕೊಳ್ಳುವುದು ಮತ್ತು ಅವುಗಳನ್ನು ಸತತವಾಗಿ ಉನ್ನತೀಕರಣಗೊಳಿಸುವ ಸೂಕ್ಷ್ಮತೆಯನ್ನು ಅಳವಡಿಸಿಕೊಳ್ಳಬೇಕಿದೆ. ಭಾರತದ ಎಂಎಸ್‌ಎಂಇಗಳು ಜಾಗತಿಕ ಮಟ್ಟದ ಉದ್ದಿಮೆಗಳಾಗಿ ಬೆಳೆಯುವ ಎಲ್ಲ ಸಾಮರ್ಥ್ಯವನ್ನು ಹೊಂದಿದ್ದು, ಸಾಕಾರಗೊಳ್ಳಬೇಕಾದರೆ, ಗುಣಮಟ್ಟದ ಸರ್ಟಿಫಿಕೇಷನ್ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಬಂಡವಾಳವನ್ನು ತೊಡಗಿಸಬೇಕಾಗಿದೆ. ಈ ಸವಾಲುಗಳನ್ನು ಎದುರಿಸಬೇಕಾದರೆ ಎಂಎಸ್‌ಎಂಇಗಳು ಜಾಗತಿಕವಾಗಿ ಸ್ಪರ್ಧಾತ್ಮಕವಾಗದೆ ಬೇರೆದಾರಿ ಇಲ್ಲ. ❑

ಆದ್ಯತೆ

# ಸಣ್ಣ ಉದ್ದಿಮೆಗಳ ಸವಾಲು

* ಪಿ.ಎಂ. ಮ್ಯಾಥ್ಯೂ



**ಸ್ಥಳೀಯ ಆರ್ಥಿಕತೆಯಲ್ಲಿ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿಯು ಮಹತ್ತರವಾದುದು ಹಾಗೂ ಅಗತ್ಯವಾದುದು. ಈ ನಿಟ್ಟಿನಲ್ಲಿ ನೀತಿಗಳ ಗ್ರಹಿಕೆ ಮತ್ತು ಕಾರ್ಯತಂತ್ರಗಳಲ್ಲಿ ಇನ್ನೂ ಹೆಚ್ಚಿನ ಸ್ಪಷ್ಟತೆ ಬೇಕಾಗುತ್ತದೆ.**

ಭಾರತ ಗಣರಾಜ್ಯದ ನಿರ್ಮಾತೃಗಳು ಸರ್ವತೋಮುಖ ರಾಷ್ಟ್ರ ನಿರ್ಮಾಣದಲ್ಲಿ ದೇಶದ ಸಣ್ಣ ಉದ್ಯಮಗಳ ಪಾತ್ರದ ಬಗ್ಗೆ ಗ್ರಹಿಸಿದ್ದರು. ದೇಶದ ಉತ್ಪಾದನಾ ವ್ಯವಸ್ಥೆಯಲ್ಲಿ ಈ ಕ್ಷೇತ್ರ ಕಾಲ ಗತಿಸಿದಂತೆ ಅತ್ಯಂತ ವಿಭಿನ್ನವಾದ ತಳಹದಿಯಲ್ಲಿ ಬೆಳವಣಿಗೆಯನ್ನು ಕಂಡಿದೆ. ಸ್ವಾತಂತ್ರ್ಯ ನಂತರ ಭಾರತದ ಕೈಗಾರಿಕೀಕರಣದ ದೃಷ್ಟಿಯಲ್ಲಿ ನೋಡಿದರೆ, ಎರಡು ಅಂಶಗಳಿಗೆ ಮೇಲೆ ಒತ್ತು ನೀಡಿರುವುದು ಕಾಣುತ್ತದೆ.

ಮಾರ್ಗ – 1 : ಉದ್ಯೋಗ ಅವಕಾಶ ಒದಗಿಸುವುದು. ಮಾರ್ಗ – 2: ಈ ಅವಕಾಶವನ್ನು ಪ್ರಾದೇಶಿಕ ಅಭಿವೃದ್ಧಿಯ ಸಾಧನವಾಗಿ ಗ್ರಾಮೀಣ ಪ್ರದೇಶಗಳಿಗೆ ತೆಗೆದುಕೊಂಡು ಹೋಗುವುದು. ಈ ಮಾರ್ಗಗಳು ಅರೆ ನಗರ ಕೇಂದ್ರಗಳನ್ನು ಬೃಹತ್ ಸಂಖ್ಯೆಯಲ್ಲಿ ಬೆಳವಣಿಗೆಯಾಗಲು ತನ್ನಕೊಡುಗೆಯನ್ನು ನೀಡುವಲ್ಲಿ ಮಹತ್ವದ ಪಾತ್ರವಹಿಸಿದೆ. ಇದು ಎಂ.ಎಸ್. ಎಂ.ಇ.ಗಳಿಗೂ ಸ್ಥಳಾವಕಾಶ ಕೊಟ್ಟಿದೆ. ನಗರ ಪ್ರದೇಶಗಳು ಬಡವರು ಮತ್ತು ಬಲ್ಲಿದರು ಇಬ್ಬರ ವಾಸಕ್ಕೂ ಅವಕಾಶಕೊಟ್ಟಿದೆ. ಈ ಎರಡೂ ವರ್ಗಗಳು ಆದಾಯ ಅವಕಾಶಗಳ ಬಗ್ಗೆ ನಿರ್ದಿಷ್ಟ ಮಾರ್ಗಗಳನ್ನು ಹೊಂದಿವೆ. ಸ್ವಯಂ ಉದ್ಯೋಗವು ಸ್ಥಳೀಯವಾಗಿ ಆರ್ಥಿಕ ಅಭಿವೃದ್ಧಿಗೆ ಮಹತ್ವದ ಕಾಣಿಕೆಯನ್ನು ನೀಡಿದೆ. ಸಾರ್ವಜನಿಕ ನೀತಿಯು ನಗರ ಮತ್ತು ಗ್ರಾಮೀಣ ಪ್ರದೇಶದ ನಡುವೆ ಸಂಪರ್ಕ ಏರ್ಪಡುವುದನ್ನು ಖಾತರಿಪಡಿಸಿಕೊಳ್ಳಬೇಕಾಗಿದೆ. ಮೇಕ್ ಇನ್ ಇಂಡಿಯಾ ಹೆಚ್ಚು ಗಮನ ಸೆಳೆಯುತ್ತಿರುವ ರಾಷ್ಟ್ರೀಯ ಪ್ರಚಾರಾಂದೋಲನವು ಎರಡು ಹಂತದಲ್ಲಿ ಅನುಷ್ಠಾನಗೊಳ್ಳಬೇಕಾಗಿದೆ. ಮೊದಲಿಗೆ, ಬೃಹತ್ ಪ್ರಮಾಣದಲ್ಲಿ ದೇಶೀಯ ಹಾಗೂ ವಿದೇಶಿ ಬಂಡವಾಳವನ್ನು ಆಕರ್ಷಿಸಬೇಕಾಗಿದೆ. ಎರಡನೆಯದಾಗಿ, ಈ ಬೃಹತ್ ಉದ್ಯಮಿಗಳಿಗೆ ಉಪ ಗುತ್ತಿಗೆಯ ಸಂಪರ್ಕ ಮತ್ತು ಸೇವೆಗಳಿಗಾಗಿ ಎಂ.ಎಸ್. ಎಂ.ಇ.ಯ ಅಗತ್ಯವಿದೆ. ಈ ಸಂಪರ್ಕ ಸಾಧನೆಯನ್ನು ತೀವ್ರಗೊಳಿಸಲು ಎಂ.ಎಸ್. ಎಂ.ಇ.ಗಳ ಸಾಮರ್ಥ್ಯ ಮತ್ತು ಅವುಗಳ ಬಗೆಗಿನ ಜ್ಞಾನವನ್ನು ಮುಂಚಿತವಾಗಿ ಅರಿಯುವುದು ಬಹಳ ಮುಖ್ಯವಾಗಿದೆ.

**ಸವಾಲುಗಳು ಮತ್ತು ಅವಕಾಶಗಳು :** ಸ್ವಾತಂತ್ರ್ಯ ಪಡೆದಂದಿನಿಂದ, ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಮೇಲೆ ಹೇಳಲಾದ ಹಲವಾರು ಕಾರ್ಯ ತಂತ್ರಗಳ ಅನುಷ್ಠಾನಕ್ಕೆ ಹಲವಾರು ಪ್ರಯೋಗಗಳನ್ನು ಮಾಡಲಾಗಿದೆ. ಆದಾಗ್ಯೂ, ಯೋಜನಾ ಅವಧಿಯಲ್ಲಿ ಕೇಂದ್ರೀಕೃತ ಸಾಂಸ್ಥಿತ ನಿರ್ಮಾಣಗಳನ್ನು ಮಾಡುವುದು ಮತ್ತು ನೀತಿಗಳ ಸಾಧನೆಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಇತ್ತು. ಕೆಲವು ನಿರ್ಧಾರಗಳು ಸ್ಥಳೀಯ ಆರ್ಥಿಕತೆಯ ಪರಿಣಾಮ ಬೀರುವಂತಹವಾಗಿದ್ದರೂ, ಇದರ ಅವಶ್ಯಕತೆ ಇತ್ತು. ಈ ತಾರ್ಕಿಕ ಅಂಶವು ಒಂದೆಡೆ ಆಧುನಿಕ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಶಕ್ತಿ ನೀಡಿದರೆ, ಮತ್ತೊಂದೆಡೆ ಗ್ರಾಮೀಣ ಉದ್ದಿಮೆಗಳ ಅಸ್ತಿತ್ವಕ್ಕೂ ಸಹಕಾರಿಯಾಗಿದೆ. ಸಂವಿಧಾನದ 56ನೇ ತಿದ್ದುಪಡಿಯಲ್ಲಿ ಗ್ರಾಮೀಣ ಹಾಗೂ ಸಣ್ಣ ಕೈಗಾರಿಕೆಗಳು ಸ್ಥಳೀಯ ಸರ್ಕಾರದ ವಿಷಯಗಳಾಗಿವೆ.

**ಸಾಮರ್ಥ್ಯಗಳು :** ತಳ ಹಂತದ ಸರ್ಕಾರಗಳು ಮತ್ತು ಅವುಗಳ ಆಡಳಿತ ಯಂತ್ರಗಳು ವಸ್ತುನಿಷ್ಠವಾಗಿ ತಮ್ಮ ಅಧಿಕಾರ ಚಲಾಯಿಸಲು ಸಮರ್ಥವೇ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಸಹ ಅತಿ ಮುಖ್ಯವಾಗುತ್ತದೆ. ಸ್ಥಳೀಯ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ

* ನಿರ್ದೇಶಕರು, ಸಣ್ಣ ಉದ್ದಿಮೆಗಳು ಮತ್ತು ಅಭಿವೃದ್ಧಿ ಸಂಸ್ಥೆ, ಕೊಚ್ಚಿ. E-mail : director@isedonline.org

ವಿಷಯದಲ್ಲಿ, ವಿಶೇಷ ಉದ್ಯಮ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಾಮರ್ಥ್ಯಗಳ ಪ್ರಸ್ತುತ ಸ್ಥಿತಿಗಳನ್ನು ಕೂಲಂಕಶವಾಗಿ ಪರೀಕ್ಷಿಸಬೇಕಾಗಿದೆ. ಉದ್ಯಮಶೀಲತೆ ಚಟುವಟಿಕೆಗಳ ಕಾರ್ಯಾಚರಣೆ ಮತ್ತು ಯೋಜನೆಯ ವಿವಿಧ ಹಂತಗಳಲ್ಲಿ ಸಲಹಾ ಸೇವೆಗಳ ಘಟಕವು ಕೆಲವೊಮ್ಮೆ ಬಿಟ್ಟುಹೋಗುತ್ತಿದೆ (ಸ್ಥಳೀಯ ಹಂತ ಹಾಗೂ ರಾಜ್ಯ ಹಂತ ಎರಡರಲ್ಲೂ ಸಲಹಾ ಸೇವೆಯ ಕೊರತೆ ಇದೆ.)

**ಸಂಪನ್ಮೂಲಗಳು**

ಜಿಲ್ಲಾ ಕೈಗಾರಿಕಾ ಕೇಂದ್ರಗಳ ನಿರ್ವಹಿಸುವ ಕೆಲವು ಉತ್ತೇಜನ ಚಟುವಟಿಕೆಗಳನ್ನು ಸ್ಥಳೀಯ ಸರ್ಕಾರಗಳಿಗೆ ಹಸ್ತಾಂತರಿಸಬಹುದು, ಹಾಗೆಯೇ ಅದಕ್ಕಾಗಿ ನಿಗದಿ ಮಾಡಿರುವ ಅನುದಾನವನ್ನು ಸಹ ಹಸ್ತಾಂತರಿಸಬಹುದು. ಇದು ಸ್ಥಳೀಯ ಸರ್ಕಾರಗಳಿಗೆ ಅಗತ್ಯ ಹಣಕಾಸು ಸಂಪನ್ಮೂಲವನ್ನು ಕೊಟ್ಟು ಬಲಪಡಿಸಿದಂತಾಗುತ್ತದೆ.

**ಕೈಗಾರಿಕಾ ಗುಂಪುಗಳ ಅಭಿವೃದ್ಧಿ:** ಉದ್ಯಮ ಅಭಿವೃದ್ಧಿ ಎಂಬುದು ಕೈಗಾರಿಕಾ ಗುಂಪುಗಳು ಮತ್ತು ಸಂಪರ್ಕಜಾಲ ಕಠಿಣವಾಗಿರುವಂತಹ ವಿಷಯದಲ್ಲಿ



ಸೇರಿದೆ. ಇಂದು ಕೈಗಾರಿಕಾ ಗುಂಪುಗಳು ಒಂದೆಡೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವೆ, ಮತ್ತೊಂದೆಡೆ ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತದ ನಡುವೆ ತಮ್ಮ ಸೇವೆಯನ್ನು ಖಾತರಿ ಪಡಿಸಿಕೊಳ್ಳಬೇಕಾಗುತ್ತವೆ. ವಾಸ್ತವಾಗಿ ಜಿಲ್ಲಾಧಿಕಾರಿಯ ಕಚೇರಿಯು ಈ ಸೇವೆಯ ಖಾತರಿಯನ್ನು ವಿವಿಧ ಸಮಿತಿಗಳಿಂದ ಮತ್ತು ಪ್ರಮುಖ ಇಲಾಖೆಗಳಿಂದ ನೀಡಬೇಕಾಗಿದೆ. ಇದು ನಿಜವಾದ ವೃತ್ತಿಪರತೆಯನ್ನು ತೋರುತ್ತದೆ. ಉದ್ಯಮಗಳ ಅಭಿವೃದ್ಧಿಗೆ ಗುಂಪುಗಳನ್ನು ಮಾಡುವುದು, ಮೇಲ್ಮುಖವಾಗಿ ಮತ್ತು ಅಡ್ಡಮುಖವಾಗಿ ಅಗತ್ಯವಿದ್ದು, 'ಉದ್ಯಮ' ಕ್ಷೇತ್ರವನ್ನು ಬಲಪಡಿಸಲು ನೆರವಾಗುತ್ತದೆ. ವಿವಿಧ ಇಲಾಖೆಗಳು ಉದ್ಯಮ ಎಂಬುದನ್ನು ವಿಶೇಷ ವಿಷಯವಾಗಿ ಅರ್ಥಮಾಡಿಕೊಳ್ಳಬೇಕಾದ ಅಗತ್ಯವಿದೆ. ಇದು ಉದ್ಯಮ ಸಂಪನ್ಮೂಲ ನೀತಿಯ ಅಗತ್ಯತೆಯನ್ನು ಬೇಡುತ್ತದೆ; ಕೇಂದ್ರ ಸರ್ಕಾರದಿಂದ ಹಿಡಿದು, ಸ್ಥಳೀಯ ಸರ್ಕಾರದವರೆಗೆ ಅವರವರ ಕಾರ್ಯಗಳು ಮತ್ತು ಪಾತ್ರಗಳ ಬಗ್ಗೆ ಎಚ್ಚರಿಸುತ್ತದೆ.

ಈ ರೀತಿಯ ದೃಷ್ಟಿಕೋನ ಇಲ್ಲದಿದ್ದರೆ, ಪ್ರತಿ ಹಂತದ ಸರ್ಕಾರಗಳು ತಮ್ಮ ಕಲ್ಪನೆಗೆ ಅನುಗುಣವಾಗಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತವೆ. ಕೆಳ ಹಂತದ ಆಡಳಿತದ ಮೇಲೆ ಇವುಗಳನ್ನು ಹೇರುತ್ತವೆ. ಇದರಿಂದ ಜನರ ಅಗತ್ಯ ಮತ್ತು ಆಕಾಂಕ್ಷೆಗಳು ಹಾಗು ಯೋಜನೆಗಳ ನಡುವೆ ದೊಡ್ಡ ಅಂತರ ಸೃಷ್ಟಿಯಾಗುತ್ತದೆ.

**ಸಮಾರೋಪ**

ಸ್ಥಳೀಯ ಆರ್ಥಿಕತೆಯಲ್ಲಿ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿಯು ಮಹತ್ವರವಾದುದು ಹಾಗೂ ಅಗತ್ಯವಾದುದು. ನೀತಿಗಳ ಗ್ರಹಿಕೆ ಮತ್ತು ಕಾರ್ಯತಂತ್ರಗಳಲ್ಲಿ ಇನ್ನೂ ಹೆಚ್ಚಿನ ಸ್ಪಷ್ಟತೆ ಬೇಕಾಗುತ್ತದೆ. ಆದಾಗ್ಯೂ, ಈ ಕ್ಷೇತ್ರದಲ್ಲಿ ಹೊಸ ಮಾರ್ಗವನ್ನು ರೂಪಿಸುವಾಗ, ನಿರ್ದಿಷ್ಟವಾದ ಹಾಗೂ ನಿಖರವಾದ ಮಾರ್ಗವನ್ನು ರೂಪಿಸಬೇಕು. ಸೂಕ್ಷ್ಮ ಆರ್ಥಿಕ ನೀತಿಯ ಮೇಲೆ ಗಮನ ಹರಿಸುವುದು ಬಹಳ ಮುಖ್ಯವಾದುದು. ❑

## ಭಾರತದ ಸಣ್ಣ ಕೈಗಾರಿಕೆಗಳ ಸಶಕ್ತೀಕರಣ

(10ನೇ ಪುಟದಿಂದ)

ಸಶಕ್ತಗೊಳಿಸುತ್ತಿರುವುದಲ್ಲದೆ, ಹಲವು ಹೊಸ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ. ಉದಾಹರಣೆಗೆ, 'ಸುಲಭ ವ್ಯವಹಾರ'ದ ಭಾಗವಾಗಿ ಮತ್ತು ಈ ಕ್ಷೇತ್ರವನ್ನು ನಿಯಮಬದ್ಧವಾಗಿಸಲು 2015ರಲ್ಲಿ 'ಉದ್ಯೋಗ್ ಆಧಾರ್ ಒಡಂಬಡಿಕೆ'ಗೆ (ಯುಎಎಂ) ಚಾಲನೆ ನೀಡಲಾಯಿತು.

ಈ ವ್ಯವಸ್ಥೆಯಲ್ಲಿ ಒಂದೇ ಪುಟದ, ಒಂದು ಅಂಶದ ನೊಂದಣಿಗೆ ಅವಕಾಶವಿದ್ದು, ಆ ಮೂಲಕ ವಿಳಂಬವನ್ನು ತಪ್ಪಿಸಬಹುದಾಗಿದೆ. ಅಲ್ಲದೆ, ಹಾಲಿ ವ್ಯವಸ್ಥೆ 'ಎಂಟರ್ ಪ್ರೇನರ್ ಶಿಪ್ ಮೆಮೊರಾಂಡಮ್' ಭಾಗ 1 ಮತ್ತು 2 ರಲ್ಲಿರುವ ವಿಸದೃಶತೆಯನ್ನು ತಪ್ಪಿಸಬಹುದು. ನೊಂದಣಿ ವಿಚಾರದಲ್ಲಿ ಭಾರತದ 'ಎಂಎಸ್ಎಂಇ'ಗಳ ಕೆಲಸವನ್ನು ಸುಲಭ ಮತ್ತು ಸರಳಗೊಳಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಾಂತಿಕಾರಿಕ್ರಮ ಇದಾಗಿದೆ. ಅಷ್ಟೇ ಅಲ್ಲದೆ, 'ಜಿಎಸ್‌ಟಿ' ರೂಪದಲ್ಲಿ ಜಾರಿಯಾಗಿರುವ 'ಒಂದು ದೇಶ, ಒಂದು ತೆರಿಗೆ' ವಿಧಾನದಿಂದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳ ನೈಜ ಸಾಮರ್ಥ್ಯ ಪ್ರದರ್ಶನವಾಗುವ ಸಾಧ್ಯತೆಯಿದೆ.

ಒಟ್ಟಾರೆಯಾಗಿ, ಸಂಶೋಧನೆ ಹಾಗೂ ಉದ್ಯಮಶೀಲತೆಯನ್ನು ಒಡಗೂಡಿದ ಕೆಲವೊಂದು ನೀತಿ ಪರಿಷ್ಕರಣೆಗಳೊಂದಿಗೆ ಭಾರತೀಯ 'ಎಂಎಸ್ಎಂಇ' ವಲಯದಲ್ಲಿ ಆಗುತ್ತಿರುವ ಪ್ರಗತಿಪರ ಬದಲಾವಣೆಗಳು, ವ್ಯವಹಾರ–ಸ್ನೇಹಿ ಪರಿಸರ ವ್ಯವಸ್ಥೆ ನಿರ್ಮಿಸುವಲ್ಲಿ ಮಹತ್ವದ ಪಾತ್ರ ವಹಿಸಲಿವೆ. 'ಎಂಎಸ್ಎಂಇ' ವ್ಯವಸ್ಥೆಯಲ್ಲಿ ಉದ್ಯೋಗ ಸೃಷ್ಟಿ ಮತ್ತು ಸಂಪತ್ತು ಸೃಷ್ಟಿ ಸಾಧ್ಯತೆ ಮತ್ತು ಸಾಮರ್ಥ್ಯ ಅಗಾಧವಾಗಿವೆ.

ರಾಜ್ಯ ಸರ್ಕಾರಗಳು, ಕೈಗಾರಿಕಾ ಸಂಘಗಳು, ಉದ್ಯಮ ಸಹಾಯಕ ಸಂಸ್ಥೆಗಳು, ತಂತ್ರಜ್ಞಾನ ಪೂರೈಕೆದಾರರು, ಹಣಕಾಸು ಸಂಸ್ಥೆಗಳು ಮತ್ತು ಭಾರತ ಸರ್ಕಾರದ ವಿವಿಧ ಸಚಿವಾಲಯಗಳು ಅತ್ಯುತ್ತಮ ಪ್ರಗತಿ ಮತ್ತು ಉದ್ಯೋಗ ಸೃಷ್ಟಿಯ ಒಂದು ಸಾಮಾನ್ಯ ಗುರಿ ಸಾಧನೆಗಾಗಿ ಕೈಜೋಡಿಸಬೇಕಿದೆ.

ವೈವಿಧ್ಯಮಯ ಉದ್ಯಮಗಳನ್ನು ಒಳಗೊಂಡ ವಿಶಾಲ 'ಎಂಎಸ್ಎಂಇ' ವಲಯವು ದೇಶದ ಪ್ರಗತಿ ಸಾಧನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂಬುದು ಸ್ಮರಣಾರ್ಹ. ❑

# ಹಣಕಾಸು ಮೌಲ್ಯಮಾಪನ; ಸವಾಲು

* ಅನಿಲ್ ಭಾರದ್ವಾಜ್



ಪ್ರತಿ ವರ್ಷ ಒಂದು ಕೋಟಿ ಜನರಿಗೆ ಉದ್ಯೋಗಾವಕಾಶ ಸೃಷ್ಟಿಸುವ ಸವಾಲನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಭಾರತದಲ್ಲಿ ಇನ್ನಷ್ಟು ಆಳ ಮತ್ತು ವಿಸ್ತೃತವಾಗಿ ಬ್ಯಾಂಕಿಂಗ್ ಮತ್ತು ಹಣಕಾಸು ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕು. ದೂರ ಸಂಪರ್ಕ ಕೇಂದ್ರದಲ್ಲಿ ಗ್ರಾಹಕರನ್ನು ಸೇವಾದಾರರೇ ಬೆಂಬತ್ತಿ ಕಂಡುಕೊಳ್ಳುವ ರೀತಿಯ ಕ್ರಾಂತಿಯನ್ನು ಬ್ಯಾಂಕಿಂಗ್ ವ್ಯವಸ್ಥೆಯಲ್ಲೂ ಕೈಗೊಳ್ಳಬೇಕು.

**ಕಿ**ರು, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಎಂಇ)ಗಳು ಬಹುತೇಕ ಜಾಗತಿಕ ಆರ್ಥಿಕತೆಗಳ ಬೆನ್ನೆಲುಬು ಎಂದೇ ಪರಿಗಣಿಸಲ್ಪಟ್ಟಿದೆ. ಸಾಮಾಜಿಕ–ಆರ್ಥಿಕ, ರಾಜಕೀಯ ಮತ್ತು ತಂತ್ರಜ್ಞಾನ ಹೀಗೆ ಎಲ್ಲಾ ಆಯಾಮಗಳಿಂದ ನೋಡಿದರೂ ಅದರ ಅಪಾರ ಕೊಡುಗೆಯನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳುತ್ತಾರೆ. ಎಂಎಸ್‌ಎಂಇಗಳು ಹಣಕಾಸು ಸೌಲಭ್ಯ ಪಡೆಯುವಲ್ಲಿ ಅತಿಯಾದ ಅಡೆತಡೆಯನ್ನು ಎದುರಿಸುತ್ತಿವೆ ಎಂಬುದರಲ್ಲಿ ಒಮ್ಮತಾಭಿಪ್ರಾಯವಿದೆ. ಈ ಸಮಸ್ಯೆಯ ಪ್ರಮಾಣ ಮುಂದುವರಿದ ರಾಷ್ಟ್ರಗಳಿಂದ ಹಿಡಿದು ಬಡ ಅಭಿವೃಶೀಲ ರಾಷ್ಟ್ರಗಳವರೆಗೆ ವಿಭಿನ್ನವಾಗಿದ್ದರೂ, ಪ್ರತಿಯೊಂದು ಎಂಎಸ್‌ಎಂಇಗಳು ಈಗಲೂ ಹಣಕಾಸು ಅಭಾವವನ್ನು ಎದುರಿಸುತ್ತಿವೆ. ಐಎಫ್‌ಸಿ ಅಂದಾಜಿನ ಪ್ರಕಾರ ಔಪಚಾರಿಕ ಮತ್ತು ಅನೌಪಚಾರಿಕ ಎಂಎಸ್‌ಎಂಇಗಳು ಜಾಗತಿಕ ಮಟ್ಟದಲ್ಲಿ ಸುಮಾರು 3.9 ಸಹಸ್ರಕೋಟಿ ಡಾಲರ್ ಸಾಲದ ಕೊರತೆಯನ್ನು ಎದುರಿಸುತ್ತಿದ್ದು, ಇದರಲ್ಲಿ 2.1ರಿಂದ 2.6 ಸಹಸ್ರಕೋಟಿ ಡಾಲರ್ ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳದ್ದಾಗಿವೆ.

### ಭಾರತದಲ್ಲಿ ಎಂಎಸ್‌ಎಂಇಗಳು – ಒಂದು ಸ್ಥೂಲ ನೋಟ

ಬಹುತೇಕ ದೇಶಗಳಲ್ಲಿ ಒಟ್ಟಾರೆ ವ್ಯವಹಾರ/ ಉದ್ಯೋಗಾವಕಾಶದ ಮಾನದಂಡವನ್ನು ಆಧರಿಸಿ ಎಂಎಸ್‌ಎಂಇಗಳನ್ನು ವ್ಯಾಖ್ಯಾನಿಸಿದರೆ, ಭಾರತದಲ್ಲಿ ಇದನ್ನು ಘಟಕ ಸ್ಥಾಪನೆ ಮತ್ತು ಯಂತ್ರೋಪಕರಣಗಳ ಮೇಲಿನ ಹೂಡಿಕೆ (ಭೂಮಿ ಮತ್ತು ಕಟ್ಟಡವನ್ನು ಹೊರತುಪಡಿಸಿ) ಯ ಆಧಾರದಲ್ಲಿ ವ್ಯಾಖ್ಯಾನಿಸಲಾಗುತ್ತದೆ.

4ನೇ ಎಂಎಸ್‌ಎಂಇ ಗಣತಿ (2006–07) ಮತ್ತು ಆರನೇ ಆರ್ಥಿಕ ಸಮೀಕ್ಷೆ (2013), ಕೇಂದ್ರ ಎಂಎಸ್‌ಎಂಇ ಸಚಿವಾಲಯದ ವಾರ್ಷಿಕ ವರದಿ (2016–17)ಯನ್ನು ಆಧರಿಸಿ ಹೇಳುವುದಾದರೆ ಭಾರತದಲ್ಲಿ 5.13 ಕೋಟಿ ಎಂಎಸ್‌ಎಂಇಗಳಿದ್ದು, 11.1 ಕೋಟಿ ಜನರಿಗೆ ಉದ್ಯೋಗಾವಕಾಶ ನೀಡಿದೆ.

**ಕೋಷ್ಟಕ : ಎಂಎಸ್‌ಎಂಇಗಳ ವ್ಯಾಖ್ಯಾನ**

| ವಿಭಾಗಗಳು | ಉತ್ಪಾದನೆ (ರೂ.ಗಳಲ್ಲಿ) (ಘಟಕ ಮತ್ತು ಯಂತ್ರಗಳ ಮೇಲಿನ ಹೂಡಿಕೆ) | ಸೇವೆಗಳು (ರೂ.ಗಳಲ್ಲಿ) (ಉಪಕರಣಗಳ ಮೇಲಿನ ಹೂಡಿಕೆ) |
|---|---|---|
| ಕಿರು | 25 ಲಕ್ಷಕ್ಕೆ ಮೀರದ | 10 ಲಕ್ಷಕ್ಕೆ ಮೀರದ |
| ಸಣ್ಣ | 25 ಲಕ್ಷಕ್ಕಿಂತ ಮೇಲ್ಪಟ್ಟು ಆದರೆ 5 ಕೋಟಿಗಿಂತ ಕಡಿಮೆ | 10 ಲಕ್ಷಕ್ಕಿಂತ ಮೇಲ್ಪಟ್ಟು ಆದರೆ 2 ಕೋಟಿ ಮೀರದ |
| ಮಧ್ಯಮ | 5 ಕೋಟಿಗಿಂತ ಮೇಲ್ಪಟ್ಟು ಆದರೆ 10 ಕೋಟಿ ಮೀರದ | 2 ಕೋಟಿಗಿಂತ ಮೇಲ್ಪಟ್ಟು ಆದರೆ 5 ಕೋಟಿ ಮೀರದ |

* ಮಹಾಕಾರ್ಯದರ್ಶಿ, ಎಫ್‌ಐಎಸ್‌ಎಂಇ, ನವದೆಹಲಿ. E-mail : sg@fisme.org.in

| ಭಾರತದ ಉತ್ಪಾದನಾ ಹುಟ್ಟುವಳಿಗೆ ಎಂಎಸ್‌ಎಂಇಗಳ ಕೊಡುಗೆ ಮತ್ತು ಎಂಎಸ್‌ಎಂಇ ನಿವ್ವಳ ಮೌಲ್ಯ ಕೊಡುಗೆ ಈ ಮುಂದಿನಂತಿದೆ | | | | | | | | |
|---|---|---|---|---|---|---|---|---|
| ಪ್ರಸಕ್ತ ಬೆಲೆಯಲ್ಲಿ ಉತ್ಪಾದನಾ ಹುಟ್ಟುವಳಿ | | | 2011–12(%) ವರ್ಷದ ಸ್ಥಿರ ಬೆಲೆಯ ಆಧಾರದಲ್ಲಿ ಜಿವಿಎ/ಜಿಡಿಪಿಯಲ್ಲಿ ಎಸ್‌ಎಂಇ ಜಿವಿಎ ಪಾಲು | | | | | |
| ವರ್ಷ | ಎಂಎಸ್‌ಎಂಇ ಉತ್ಪಾದನಾ ಹುಟ್ಟುವಳಿ ಕೋಟಿ ರೂ.ಗಳಲ್ಲಿ | ಒಟ್ಟು ತಯಾರಿಕಾ ಹುಟ್ಟುವಳಿಯಲ್ಲಿ ಉತ್ಪಾದನಾ ಹುಟ್ಟುವಳಿಯ ಪಾಲು (%) | ಎಂಎಸ್‌ಎಂಇ ಉತ್ಪಾದನಾ ವಲಯ | | ಎಸ್‌ಎಸ್‌ಎಂಇ ಸೇವಾ ವಲಯ | | ಒಟ್ಟು | |
| | | | ಜಿವಿಎನಲ್ಲಿ | ಜಿಡಿಪಿಯಲ್ಲಿ | ಜಿವಿಎನಲ್ಲಿ | ಜಿಡಿಪಿಯಲ್ಲಿ | ಜಿವಿಎನಲ್ಲಿ | ಜಿಡಿಪಿಯಲ್ಲಿ |
| 2011–12 | 2167110 | 33.12 | 6.64 | 6.16 | 25.66 | 23.81 | 32.29 | 29.97 |
| 2012–13 | 2385248 | 33.22 | 6.77 | 6.27 | 26.05 | 24.13 | 32.89 | 30.40 |
| 2013–14 | 2653329 | 33.27 | 6.79 | 6.27 | 26.40 | 24.37 | 33.19 | 30.64 |
| 2014–15 | 2783433 | 33.40 | 6.63 | 6.11 | 26.72 | 24.63 | 33.34 | 30.74 |

| ಎಂಎಸ್‌ಎಂಇಗಳಿಗೆ ಬ್ಯಾಂಕಿನ ಸರಾಸರಿ ಸಾಲದ ಹರಿವು (ಬಾಕಿ ಸಾಲ ಮೊತ್ತ ಕೋಟಿ ರೂ.ಗಳಲ್ಲಿ) | | | | |
|---|---|---|---|---|
| ವರ್ಷ (ಶುಕ್ರವಾರಕ್ಕೆ ಅಂತ್ಯಗೊಂಡ ವರದಿ) | ಸಾರ್ವಜನಿಕ ವಲಯದ ಬ್ಯಾಂಕುಗಳು | ಖಾಸಗಿ ವಲಯದ ಬ್ಯಾಂಕುಗಳು | ವಿದೇಶಿ ಬ್ಯಾಂಕುಗಳು | ಎಲ್ಲಾ ವರ್ಗೀಕೃತ ವಾಣಿಜ್ಯ ಬ್ಯಾಂಕುಗಳು |
| ಮಾರ್ಚ್ 2012 | 5,33,279.29 | 1,24,725.66 | 23,300.71 | 6,81,305.66 |
| ಮಾರ್ಚ್ 2013 | 6,43,525.02 (20.7%) | 1,82,247.82 (46.1%) | 43,251.30 (85.6%) | 8,69,024.14 (27.6%) |
| ಮಾರ್ಚ್ 2014 (ತಾತ್ಕಾಲಿಕ) | 7,54,391.07 (17.2%) | 2,46,025.76 (35.0%) | 34,359.17 (–20.6%) | 10,34,775.99 (19.1%) |
| ಮೂಲ : ಆರ್‌ಬಿಐ<br>ಸೂಚನೆ : ಆವರಣದಲ್ಲಿರುವ ಅಂಕಿಗಳು ವಾರ್ಷಿಕ ಶೇಕಡಾವಾರು ಏರಿಕೆ/ಇಳಿಕೆಯನ್ನು ತೋರಿಸುತ್ತದೆ | | | | |

| ಎಂಎಸ್‌ಎಇಗಳ ನಿವ್ವಳ ವಸೂಲಾಗದ ಸಾಲದ ಮೊತ್ತ (ಎನ್‌ಪಿಎಗಳು)<br>(ಬಾಕಿ ಉಳಿದಿರುವ ನಿವ್ವಳ ಎನ್‌ಪಿಎ ಮೊತ್ತವು ಕೋಟಿ ರೂ.ಗಳಲ್ಲಿ ಮತ್ತು ಎನ್‌ಪಿಎ %ದಲ್ಲಿ) | | | | |
|---|---|---|---|---|
| ವರ್ಷ (ಶುಕ್ರವಾರಕ್ಕೆ ಅಂತ್ಯಗೊಂಡ ವರದಿ) | ಸಾರ್ವಜನಿಕ ವಲಯದ ಬ್ಯಾಂಕುಗಳು | ಖಾಸಗಿ ವಲಯದ ಬ್ಯಾಂಕುಗಳು | ವಿದೇಶಿ ಬ್ಯಾಂಕುಗಳು | ಎಲ್ಲಾ ವರ್ಗೀಕೃತ ವಾಣಿಜ್ಯ ಬ್ಯಾಂಕುಗಳು |
| ಮಾರ್ಚ್ 2012 | 24,272.44 (6.1%) | 1,880.73 (1.7%) | 159.83 (0.7%) | 26,312.99 (5.0%) |
| ಮಾರ್ಚ್ 2013 | 28,575.29 (5.7%) | 2,506.44 (1.6%) | 396.23 (1.3%) | 31,477.96 (4.6%) |
| ಮಾರ್ಚ್ 2014 (ತಾತ್ಕಾಲಿಕ) | 38,949.80 (6.3%) | 3,021.63 (1.5%) | 457.36 (1.5%) | 42,428.79 (5.0%) |
| ಮೂಲ : ಆರ್‌ಬಿಐ<br>ಸೂಚನೆ : ಆವರಣದಲ್ಲಿರುವ ಅಂಕಿಗಳು ವಾರ್ಷಿಕ ಶೇಕಡಾವಾರು ಏರಿಕೆ/ಇಳಿಕೆಯನ್ನು ತೋರಿಸುತ್ತದೆ. | | | | |

ಇದಲ್ಲದೆ ಶೇ. 90ರಷ್ಟು ಎಂಎಸ್‌ಎಂಇಗಳು ಹಣಕಾಸು ಸಂಪನ್ಮೂಲಕ್ಕಾಗಿ ಔಪಚಾರಿಕ ಮೂಲಗಳ ಮೇಲೆ ಅವಲಂಬಿತವಾಗಿವೆ ಎಂದು 4ನೇ ಎಂಎಸ್‌ಎಂಇ ಗಣತಿ ತೋರಿಸಿಕೊಟ್ಟಿದೆ.

ಯಾವುದೇ ದತ್ತಾಂಶ ದಾಖಲೆಗಳನ್ನು ನಾವು ಆಯ್ಕೆ ಮಾಡಿಕೊಂಡರೂ, ಎಂಎಸ್‌ಎಂಇಗಳ ದೊಡ್ಡ ಮೊತ್ತದ ಸಾಲ ಸೌಲಭ್ಯದ ಬೇಡಿಕೆಯನ್ನು ಈಡೇರಿಸಲು ಸಾಧ್ಯವಾಗಿಲ್ಲ ಎಂಬುದು ಸತ್ಯ. ಎಂಎಸ್‌ಎಂಇ ವಲಯಕ್ಕೆ ಒಟ್ಟು 32.5 ಲಕ್ಷ ಕೋಟಿ ರೂ. (650 ಶತಕೋಟಿ ಡಾಲರ್) ಆರ್ಥಿಕ ಸೌಲಭ್ಯ ಅವಶ್ಯಕವಿದೆ. ಇದರಲ್ಲಿ 26 ಲಕ್ಷ ಕೋಟಿ ರೂ. (520 ಶತಕೋಟಿ ಡಾಲರ್) ಸಾಲದ ಬೇಡಿಕೆಯಾಗಿದ್ದರೆ 6.5 ಲಕ್ಷ ಕೋಟಿ ರೂ. (130 ಶತಕೋಟಿ ಡಾಲರ್) ಈಕ್ವಿಟಿ ಬೇಡಿಕೆಯಾಗಿದೆ.

ಎಂಎಸ್‌ಎಂಇಗಳು ಬ್ಯಾಂಕುಗಳಿಗೆ ಬಾಕಿ ಉಳಿಸಿಕೊಂಡಿರುವ ಸಾಲದ ಮೊತ್ತ ಸರಾಸರಿ 10.34 ಲಕ್ಷ ಕೋಟಿ ರೂ. ಎಂದು ಅಂದಾಜಿಸಲಾಗಿದ್ದು (ಕೋಷ್ಟಕ) ಇದು ಎರಡು ಕೋಟಿ ಸಾಲ ಖಾತೆಗಳಲ್ಲಿ 11 ಲಕ್ಷ ಕೋಟಿ (ಮಾರ್ಚ್ 2016) ರೂ.ಗೆ ಏರಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಇದಕ್ಕೆ ಪ್ರತಿಯಾಗಿ 26 ಲಕ್ಷ ಕೋಟಿ ರೂ.ಗಳು ಅವಶ್ಯಕತೆಯಿದೆ ಎಂದು ಅಂದಾಜಿಸಲಾಗಿದ್ದು, ಎಂಎಸ್‌ಎಂಇ ಸಂಖ್ಯೆ 5 ಕೋಟಿ ಆಗಲಿದೆ.

ದೊಡ್ಡ ಪ್ರಮಾಣ ಎಂಎಸ್‌ಎಂಇಗಳ ಕ್ಷೇತ್ರಕ್ಕೆ ಈಗಿನ ಹಣಕಾಸು ಸಂರಚನೆ ಇನ್ನೂ ತಲುಪಿಲ್ಲ ಎನ್ನುವುದು ಸಹಜ.

ಸಾಕಷ್ಟು ಸಂಖ್ಯೆಯ ಎಂಎಸ್‌ಎಂಇಗಳು ಸಾಂಸ್ಥಿಕ ಹಣಕಾಸು ವ್ಯವಸ್ಥೆಯಿಂದ ಹೊರಗಡೆ ಉಳಿಯಲು ಎದುರಾಗಿರುವ ಅಡೆತಡೆಗಳಾದರೂ ಯಾವುವು ? ನನ್ನ ಪ್ರಕಾರ ಪೂರೈಕೆ ಮತ್ತು ಬೇಡಿಕೆ ಎರಡೂ ಕಡೆಗಳೂ ಇದಕ್ಕೆ ಕಾರಣ.

**ಪೂರೈಕೆ ಕಡೆಯ ಅಡ್ಡಿಗಳು**



ಭಾರತದ ಬ್ಯಾಂಕಿಂಗ್ ವ್ಯವಸ್ಥೆಯು 27 ಸಾರ್ವಜನಿಕ ವಲಯದ ಬ್ಯಾಂಕುಗಳು, 26 ಖಾಸಗಿ ವಲಯದ ಬ್ಯಾಂಕುಗಳು, 46 ವಿದೇಶಿ ಬ್ಯಾಂಕುಗಳು, 56 ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, 1,574 ನಗರ ಸಹಕಾರಿ ಬ್ಯಾಂಕುಗಳು ಮತ್ತು 93,913 ಗ್ರಾಮೀಣ ಸಹಕಾರಿ ಬ್ಯಾಂಕುಗಳನ್ನು ಒಳಗೊಂಡಿದೆ. ಇದರ ಹೊರತಾಗಿ ಸಹಕಾರಿ ಸಾಲ ಸಂಸ್ಥೆಗಳು ಹೆಚ್ಚುವರಿಯಾಗಿ ಇವೆ. ಸರ್ಕಾರದ ನೇರ ನಿಯಂತ್ರಣದಲ್ಲಿರುವ ಸಾರ್ವಜನಿಕ ವಲಯದ ಬ್ಯಾಂಕುಗಳು ಶೇ. 70ಕ್ಕೂ ಹೆಚ್ಚು ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ನಿಯಂತ್ರಣ ಹೊಂದಿದೆ. ಭಾರತದಲ್ಲಿ ಆಯಾಯ ಸಂದರ್ಭಕ್ಕೆ ಸರ್ಕಾರಗಳು, ಬಜೆಟ್ ಕೊರತೆ ನೀಗಿಸಲು, ಮತ್ತು ತಮ್ಮ ಇಚ್ಛೆಯ ಯೋಜನೆಗಳಿಗೆ ಆರ್ಥಿಕ ಸೌಲಭ್ಯ ಒದಗಿಸಲು ಬ್ಯಾಂಕುಗಳ ಠೇವಣಿಯನ್ನು (ಸರ್ಕಾರಿ ಸೆಕ್ಯುರಿಟಿಗಳು ಮತ್ತು ಬಾಂಡ್‌ಗಳ ಮೂಲಕ) ಬಳಸಿಕೊಳ್ಳುತ್ತಿವೆ ಎಂದು ದೀರ್ಘ ಕಾಲದಿಂದಲೂ ಆರೋಪಿಸಲಾಗಿದೆ.

ಮೊದಲನೆಯದಾಗಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅತಿ ಪ್ರಬಲ ಪಾತ್ರ ವಹಿಸುವ ಪಿಎಸ್‌ಯು ಬ್ಯಾಂಕ್‌ಗಳ ಮೇಲೆ ಸರಕಾರ ಬಿಗಿ ನಿಯಂತ್ರಣದಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸ್ಪರ್ಧಾತ್ಮಕತೆ ಉಡುಗಿಹೋಗಿದೆ ಮತ್ತು ಬ್ಯಾಂಕುಗಳ ಮಾಲಿಕರು ಮತ್ತು ಗ್ರಾಹಕರಿಗೆ ತೃಪ್ತಿಕರವಾದ ಫಲಿತಾಂಶ ಸಿಗುತ್ತಿಲ್ಲ.

ಎರಡನೆಯದಾಗಿ, ಬ್ಯಾಂಕುಗಳು (20ಕ್ಕಿಂತ ಹೆಚ್ಚು ಶಾಖೆಗಳನ್ನು ಹೊಂದಿರುವ ದೇಶೀಯ ವಾಣಿಜ್ಯ ಬ್ಯಾಂಕುಗಳು ಮತ್ತು ವಿದೇಶಿ ಬ್ಯಾಂಕುಗಳು) ತಮ್ಮ ಒಟ್ಟು ಸಾಲದಲ್ಲಿ ಶೇ. 40ರಷ್ಟನ್ನು 'ಆದ್ಯತಾ ಕ್ಷೇತ್ರ'ಕ್ಕೆ ನೀಡಬೇಕಾಗುತ್ತದೆ. ಆದ್ಯತಾ ಕ್ಷೇತ್ರವು ಕೃಷಿ – ಶೇ. 18ರ ಗುರಿ ಮತ್ತು ಎಂಎಸ್‌ಎಂಇಗಳು, ಶಿಕ್ಷಣ, ವಸತಿ, ಸರ್ಕಾರಿ ಮತ್ತು ಅರೆ ಸರ್ಕಾರಿ ವಲಯಕ್ಕೆ ಸಾಲ ಸೇರಿದಂತೆ ಇತರ ಕ್ಷೇತ್ರಗಳಿಗೆ ಉಳಿದ ಭಾಗವನ್ನು ಒದಗಿಸಬೇಕಾಗುತ್ತದೆ. ಆದ್ಯತಾ ವಲಯದಲ್ಲಿ ಬರುವ ಎಂಎಸ್‌ಎಂಇಗಳಿಗೆ ಎಷ್ಟು ಸಾಲ ಸೌಲಭ್ಯ ಒದಗಿಸಬೇಕು ಎಂಬ ಬಗ್ಗೆ ಸ್ಪಷ್ಟತೆ ಇಲ್ಲ ಎನ್ನುವುದು ಇಲ್ಲಿ ಸರ್ವ ವೇದ್ಯ. ವಸತಿ ಮತ್ತು ಶಿಕ್ಷಣದಂತಹ ಸುಲಭ ಸಾಲ ಸಿಗುವ ವಲಯಕ್ಕೆ ಹೋಲಿಸಿದರೆ, ಎಂಎಸ್‌ಎಂಇಗಳು ಆವರಣದೊಳಗೆ ಇರುವಂತೆ ಕಾಣುತ್ತಿದ್ದು, ಇವುಗಳಿಗೆ ಬ್ಯಾಂಕ್ ಸಾಲ ಹೆಚ್ಚು ದುಬಾರಿಯಾಗಿ ಕಂಡು ಬರುತ್ತಿದೆ.

ಮೂರನೆಯದಾಗಿ, ಕೈಗಾರಿಕಾ ಆರ್ಥಿಕತೆಯು ಹಣಕಾಸು ಸಂಸ್ಥೆಗಳ ಎರಡು ನಿರ್ದಿಷ್ಟ ಅವಶ್ಯಕತೆಗಳನ್ನು ಪೂರೈಸಬೇಕಾಗಿದೆ – ಯೋಜನೆಯ ಪ್ರಕ್ರಿಯೆ ದೀರ್ಘಾವಧಿಯಾಗಿದ್ದರಿಂದ ದೀರ್ಘಾವಧಿ ಸಾಲ ಸೌಲಭ್ಯ ಒದಗಿಸುವ ಸಾಮರ್ಥ್ಯ ಮತ್ತು ಉದ್ಯಮದ ಆವರ್ತನ ಮತ್ತು ತಂತ್ರಜ್ಞಾನವನ್ನು ಅರ್ಥ ಮಾಡಿಕೊಳ್ಳುವ ಆಯಾ ವಲಯದ ತಾಂತ್ರಿಕ ಜ್ಞಾನ. ಉದ್ಯಮದ ಅವಶ್ಯಕತೆಯನ್ನು ಪೂರೈಸುವ ನಿಟ್ಟಿನಲ್ಲಿ1950 ಮತ್ತು 60 ದಶಕದಲ್ಲಿ ಐಡಿಬಿಐ, ಐಸಿಐಸಿಐ ಇತ್ಯಾದಿ ಹಲವಾರು ವಿಶೇಷ ಸಂಸ್ಥೆಗಳು ಹುಟ್ಟಿಕೊಂಡವು. 1991ನೇ ಇಸವಿಗೆ ಮೊದಲು ಕೈಗಾರಿಕೆಗಳಿಗೆ ಕೈಗಾರಿಕಾಕ ಅಭಿವೃದ್ಧಿ ಹಣಕಾಸು ಸಂಸ್ಥೆ (ದೀರ್ಘಾವಧಿಗೆ) ಹಣಕಾಸು ಒದಗಿಸಿದರೆ, ಬ್ಯಾಂಕುಗಳು ನಿರ್ವಹಣಾ ಬಂಡವಾಳ (ಅಲ್ಪಾವಧಿಗೆ) ಒದಗಿಸುತ್ತಿದ್ದವು. ಇದೇ ರೀತಿ ಎಂಎಸ್‌ಎಂಇಗಳ ಯೋಜನೆಗಳಿಗೆ ಹಣಕಾಸು ನೆರವು ಒದಗಿಸಲು ರಾಜ್ಯ ಹಣಕಾಸು ನಿಗಮ (ಎಸ್‌ಎಫ್‌ಸಿಗಳು) ದಂತಹ ಆರ್ಥಿಕ ಸಂಸ್ಥೆಗಳು ರಾಜ್ಯಗಳಲ್ಲೂ ಸ್ಥಾಪನೆಯಾದವು. ಆರ್ಥಿಕ ಉದಾರೀಕರಣದ ಬಳಿಕ ಅಭಿವೃದ್ಧಿ ಆರ್ಥಿಕ ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳ ಜೊತೆ ವಿಲೀನ ಅಥವಾ ರೂಪಾಂತರದ ಮೂಲಕ ವಾಣಿಜ್ಯ ಬ್ಯಾಂಕುಗಳಿಗೆ ದಾರಿ ಮಾಡಿಕೊಟ್ಟವು ಮತ್ತು ಬರುತೇಕ ಎಸ್‌ಎಫ್‌ಸಿಗಳು ಮುಚ್ಚಲ್ಪಟ್ಟವು.

ಆದರೆ ಬ್ಯಾಂಕುಗಳ ಸಮಸ್ಯೆಯೆಂದರೆ ಅವುಗಳು ಸಾಮಾನ್ಯವಾಗಿ ಅಲ್ಪಾವಧಿ ಠೇವಣಿಗಳನ್ನು ಸ್ವೀಕರಿಸುತ್ತವೆ ಮತ್ತು ಇದರಿಂದಾಗಿ ದೀರ್ಘಾವಧಿ ಸಾಲ ಸೌಲಭ್ಯ ಒದಗಿಸಲು ಹಿಂದೇಟು ಹಾಕುತ್ತವೆ. ಇದಲ್ಲದೆ ವಲಯವಾರು ಸಂಕೀರ್ಣತೆಯನ್ನು ಅರಿಯುವ ನಿಟ್ಟಿನಲ್ಲಿ ಅವಶ್ಯಕವಾದ ತಾಂತ್ರಿಕ ಪರಿಣತಿಯ ಕೊರತೆಯನ್ನೂ ಎದುರಿಸುತ್ತವೆ. ಆದ್ದರಿಂದ ಸಹಜವಾಗಿಯೇ ಬ್ಯಾಂಕರ್‌ಗಳು ಉದ್ಯಮ ಯೋಜನೆ ಆರಂಭಿಸುವವರು ಸಾಕಷ್ಟು ಹೆಸರು ಸಂಪಾದಿಸಿದವರಲ್ಲದಿದ್ದರೆ ಈ ಸಾಲ ಅಪಾಯಕಾರಿ ಎಂದು ಭಾವಿಸುತ್ತವೆ ಮತ್ತು ಯೋಜನೆಗಳ ಸಾಲಕ್ಕೆ ಅನುಮೋದನೆ ನೀಡುವ ನಿರ್ಧಾರವನ್ನು ನಿರ್ದಿಷ್ಟ ಬ್ಯಾಂಕ್ ಅಧಿಕಾರಿಯ ವೈಫಲ್ಯ

ಎನ್ನಲಾಗದಂತೆ ಸಮಿತಿಯ ಮೂಲಕ ಅಥವಾ ಒಕ್ಕೂಟ ಸಾಲ ಸೌಲಭ್ಯದ ಮೂಲಕ ಒದಗಿಸಲಾಗುತ್ತದೆ. ಸಹಜವಾಗಿಯೇ ಖ್ಯಾತ ಉದ್ಯಮ ಕುಟುಂಬ ಮತ್ತು ದೊಡ್ಡ ಕಾರ್ಪೊರೇಟ್ ಕಂಪನಿಗಳು ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಿಯೇ ಮುಂದೆ ಸಾಗಬೇಕಾಗುತ್ತದೆ. ಎಂಎಸ್ಎಂಇಗಳ ಮಟ್ಟಿಗೆ ಹೇಳುವುದಾದರೆ ಉದ್ಯಮಿಗಳ ಅಸ್ತಿತ್ವದ ಬಗ್ಗೆ ಹೆಚ್ಚು ಪ್ರಸಿದ್ಧಿ ಇರುವುದಿಲ್ಲ ಮತ್ತು ಮೊದಲ ಪೀಳಿಗೆ ಉದ್ಯಮಿಗಳು ಇವರಾಗಿದ್ದು, ಇದಕ್ಕಾಗಿ ಬ್ಯಾಂಕುಗಳು ತಮ್ಮ ಅಪಾಯದ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಲು ಆಸ್ತಿ ಆಧಾರಿತ ಕೊಲ್ಲಾಟರಲ್ ಭದ್ರತೆ ಒದಗಿಸುವಂತೆ ಕೇಳುತ್ತವೆ. ಸಶಕ್ತ ಎಂಎಸ್ಎಂಇ ಉದ್ಯಮಿಗಳನ್ನು ಆಸ್ತಿ ಆಧರಿತ ಕೊಲ್ಲಾಟರಲ್ ಭದ್ರತೆ ಒದಗಿಸುವುದರಿಂದ ಹೊರಗಿಡಲಾಗುತ್ತದೆ. ಕೆಲವರು ಕೊಲ್ಲಾಟರಲ್ ಭದ್ರತೆ ಒದಗಿಸಿದರೂ ಬಹುತೇಕ ಸಮಯದಲ್ಲಿ ಇದು ಸಾಲದ ಗಾತ್ರಕ್ಕೆ ಸರಿ ಹೊಂದುವುದಿಲ್ಲ. ಹೀಗಾಗಿ ಒಟ್ಟಾರೆ ಯೋಜನೆಯ ಗಾತ್ರವನ್ನು ಕಡಿಮೆ ಮಾಡಬೇಕಾಗುತ್ತದೆ.

ಇನ್ನು, ಅಂತಾರಾಷ್ಟ್ರೀಯ ಬ್ಯಾಂಕಿಂಗ್ ಗುಣಮಟ್ಟದ ಬಾಸೆಲ್–2 ನಿಯಮವನ್ನು ಭಾರತವು ಅಳವಡಿಸಿಕೊಂಡಿದ್ದು, ಇದರಿಂದ ಎಂಎಸ್ಎಂಇಗಳಿಗೆ ಸಾಲ ನೀಡುವುದು ಇನ್ನಷ್ಟು ಕಷ್ಟಕರವಾಗಿದೆ. ಬಾಸೆಲ್–2 ನಿಯಮದಡಿ ಅಪಾಯವನ್ನು ಎದುರಿಸುವ ನಿಟ್ಟಿನಲ್ಲಿ ಹಣಕಾಸು ಸಂಸ್ಥೆಗಳು 'ಸಾಕಷ್ಟು' ನಗದು ಮೊತ್ತವನ್ನು ನಿರ್ವಹಣೆ ಮಾಡುವಂತೆ ಮಾಡುವುದು ಆರ್‌ಬಿಐಗೆ ಅವಶ್ಯಕವಾಗಿದೆ. ದೊಡ್ಡ ಕಾರ್ಪೊರೇಟ್ ವಲಯಕ್ಕೆ ಸಾಲ ನೀಡುವುದು ಆಸ್ತಿ ಆಧಾರದಲ್ಲಿ ಅಲ್ಲ, ಇದರ ಫಲಿತಾಂಶವಾಗಿ ಎಂಎಸ್ಎಂಇಗಳಿಗೆ ಆಸ್ತಿ ಆಧಾರದಲ್ಲಿ ಒದಗಿಸುವ ಸಾಲ ಸೌಲಭ್ಯ ಮತ್ತಷ್ಟು ದುಬಾರಿಯಾಗುವಂತೆ ಮಾಡಿದೆ. ಐದು ಕೋಟಿ ರೂ.ಗಿಂತ ಹೆಚ್ಚಿನ ಸಾಲ ಸೌಲಭ್ಯವನ್ನು ನೀಡುವ ಮೊದಲು ಕ್ರೆಡಿಟ್ ರೇಟಿಂಗ್ ಸಂಸ್ಥೆಗಳ ಮೂಲಕ ದೃಢೀಕರಣ ಮಾಡಿಕೊಳ್ಳಲು ಅದು ಸೂಚಿಸಿದೆ. ಇಷ್ಟೇ ಅಲ್ಲ, ಪೂರ್ವ ಭಾವಿ ಎಚ್ಚರಿಕೆ ವ್ಯವಸ್ಥೆ – ವಿಶೇಷ ನಮೂದಿನ ಅಕೌಂಟ್ (ಎಸ್ಎಂಎ) ನಿಯಮವನ್ನು ಬ್ಯಾಂಕುಗಳಿಗೆ ಆರ್‌ಬಿಐ ಕಡ್ಡಾಯಗೊಳಿಸಿದೆ. ಇದರಡಿಯಲ್ಲಿ ಮೂಲ ಸಾಲ ಮೊತ್ತ ಅಥವಾ ಬಡ್ಡಿ ಮೊತ್ತ ಪಾವತಿಗೆ 30 ದಿನಗಳ ವ್ಯತ್ಯಯವಾದರೂ 90 ದಿನಗಳ ಒಳಗೆ ಅವರ ಒಟ್ಟು ಪಾವತಿಯ ಆವರ್ತನದ ಬಗ್ಗೆ ವರದಿ ಸಲ್ಲಿಸಬೇಕಾಗುತ್ತದೆ. ಈ ಎಲ್ಲಾ ಕ್ರಮಗಳಿಂದಾಗಿ ಎಂಎಸ್ಎಂಇಗಳು ದೊಡ್ಡ ಸಮಸ್ಯೆ ಎದುರಿಸುವಂತಾಗಿದೆ.

ಅಂತಿಮವಾಗಿ, ಇತ್ತೀಚಿನವರೆಗೆ ತಾವು ಸಾಲ ನೀಡಿದ ಉದ್ಯಮವೊಂದು ವಿಫಲವಾದರೆ ಹಲವಾರು ಶಾಸನಾತ್ಮಕ ನಿಯಮಗಳು ಪುಸ್ತಕದಲ್ಲಿದ್ದರೂ, ಬ್ಯಾಂಕರ್‌ಗಳು ಆ ಉದ್ಯಮದ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳುವುದು (ಕಾರು ಅಥವಾ ಮನೆಯಂತಲ್ಲ) ತೀರಾ ಕಷ್ಟಕರವಾಗಿತ್ತು. ಕಾನೂನು ಪ್ರಕ್ರಿಯೆ ತುಂಬಾ ದೀರ್ಘಾವಧಿಯದ್ದಾಗಿದ್ದು, ಪ್ರಯಾಸಕರ ಮಾತ್ರವಲ್ಲ ವೆಚ್ಚದಾಯಕವಾಗಿದ್ದು, ಕೆಲವೊಮ್ಮೆ ಬ್ಯಾಂಕರ್‌ಗಳು ಇನ್ನಷ್ಟು ಅಪಾಯವನ್ನು ಎದುರಿಸುವಂತೆ ಇತ್ತು.

## ಬೇಡಿಕೆ ಕಡೆಯ ಅಡ್ಡಿಗಳು

ಪ್ರತಿಯೊಂದು ತನ್ನದೇ ಆದ ಅವಶ್ಯಕತೆ ಮತ್ತು ಕ್ಲಿಷ್ಟಕರ ಸವಾಲುಗಳನ್ನು ಹೊಂದಿರುವ ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮ ವಲಯಗಳನ್ನು ಒಳಗೊಂಡ ಎಂಎಸ್ಎಂಇಗಳು ವೈವಿಧ್ಯಮಯ ಕ್ಷೇತ್ರವಾಗಿದೆ. ಕಿರು ಉದ್ಯಮ ಕ್ಷೇತ್ರವು ಬಹುತೇಕ 'ಅನೌಪಚಾರಿಕ' ಮತ್ತು 'ಅಸಂಘಟಿತ'ವಾಗಿದೆ. ಅವುಗಳಲ್ಲಿ ಬಹುತೇಕ ಸ್ವಂತ ಮಾಲಿಕತ್ವ/ ಪಾಲುಗಾರಿಕೆ ಸಂಸ್ಥೆಗಳಾಗಿದ್ದು, ಸೀಮಿತವಲ್ಲದ ಸಾಲವನ್ನು ಭರಿಸುವ ಕಂಪನಿಗಳಾಗಿರುವುದಿಲ್ಲ. ಇವುಗಳಲ್ಲಿ ಬಹು ಸಂಖ್ಯೆಯ ಸಂಸ್ಥೆಗಳು ಅನುಮೋದಿತ ವಾಣಿಜ್ಯ ಸ್ಥಳ ಸಿಗದ ಕಾರಣ ಅಥವಾ ಅದನ್ನು ಭರಿಸಲು ಸಾಧ್ಯವಿಲ್ಲದ ಹಿನ್ನೆಲೆಯಲ್ಲಿ ಅನಧಿಕೃತ/ ಅನುಮೋದನೆ ರಹಿತ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತವೆ. ತನ್ನ ಅನೌಪಚಾರಿಕ ಸ್ವರೂಪದಿಂದಾಗಿಯೇ ಬ್ಯಾಂಕುಗಳಿಗೆ ಅವಶ್ಯಕವಾದ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸಲು ವಿಫಲವಾಗಿ ಹಣಕಾಸು ವ್ಯವಸ್ಥೆಯಲ್ಲಿ ಸೇರಿಸಿಕೊಳ್ಳುವ ಸವಾಲುಗಳನ್ನು ಈ ವಲಯ ಎದುರಿಸುತ್ತಿವೆ.

ಕಿರು ವಲಯಕ್ಕೆ ಹೋಲಿಸಿದರೆ ಸಣ್ಣ ಎಂಎಸ್ಎಂಇ ಕ್ಷೇತ್ರವು ಅಲ್ಪ ಮಟ್ಟಿಗೆ ಹೆಚ್ಚು ಸಂಘಟಿತವಾಗಿದ್ದು, ಬಹುತೇಕ ಸಂಸ್ಥೆಗಳು ಬಿ2ಬಿ ವಲಯದಲ್ಲಿ ಕಾರ್ಯ ನಿರ್ವಹಿಸುತ್ತವೆ. ಇವುಗಳ ಪ್ರಮುಖ ಕಷ್ಟವೆಂದರೆ ಹೊಸ ಉದ್ಯಮ ಆರಂಭಿಸಲು



ಮೂಲ ಬಂಡವಾಳ ಕ್ರೋಢೀಕರಿಸುವುದು, ಅವಶ್ಯಕವಾದ ಕೊಲ್ಲಟರೆಲ್ ಭದ್ರತೆ ಒದಗಿಸಲು ಸಾಧ್ಯವಾಗದಿರುವುದು ಮತ್ತು ದೊಡ್ಡ ಖರೀದಿದಾರರಿಂದ ಪಾವತಿ ನಿರಂತರವಾಗಿ ವಿಳಂಬವಾಗುವುದರಿಂದ ದೊಡ್ಡ ಪ್ರಮಾಣದಲ್ಲಿ ಕಾರ್ಯ ನಿರ್ವಹಣೆ ಬಂಡವಾಳದಂತಹ ಸಮಸ್ಯೆಗಳನ್ನು ಎದುರಿಸುತ್ತಿವೆ.

ಉತ್ತಮ ರೀತಿಯ ಕಾರ್ಯ ನಿರ್ವಹಣೆ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆ ನೀಡುವ ಸಾಮರ್ಥ್ಯದ ಹಿನ್ನೆಲೆಯಲ್ಲಿ ಮಧ್ಯಮ ವಲಯವು ಎಂಎಸ್ಎಂಇ ಕ್ಷೇತ್ರದಲ್ಲಿ ಅತಿ ಹೆಚ್ಚು ಸ್ಥಿರವಾದ ಮತ್ತು ಆಶಾದಾಯಕ ಎಂದು ಜಾಗತಿಕವಾಗಿ ಗುರುತಿಸಲ್ಪಟ್ಟಿದೆ. ದುರಾದೃಷ್ಟವೆಂದರೆ ಈ ಮಟ್ಟಕ್ಕೆ ಬೆಳೆಯಲು ಬಹುತೇಕ ಸಣ್ಣ ಉದ್ಯಮಗಳು ವಿಫಲವಾದ ಹಿನ್ನೆಲೆಯಲ್ಲಿ ಭಾರತದಲ್ಲಿ ಇದು ಅತಿ ಚಿಕ್ಕ ಕ್ಷೇತ್ರವಾಗಿದೆ. 5 ಕೋಟಿ ಎಂಎಸ್ಎಂಇಗಳ ಜಗತ್ತಿನಲ್ಲಿ ಮಿಲ್ಲೆಟ್ ಸ್ಟ್ಯಾಂಡ್ ಕ್ಲಬ್ (ಆರ್ಥಿಕ ಘಟಕ) ಎಂದು ಅರ್ಹತೆ ಪಡೆಯುವ ಕಂಪನಿಗಳ ಸಂಖ್ಯೆ 25,000ವನ್ನೂ ಮೀರುವುದಿಲ್ಲ. ಇದರಿಂದಾಗಿ 'ಕಳೆದು ಹೋದ ಮಧ್ಯ ಭಾಗ' ಎಂದು ಸಾಮಾನ್ಯವಾಗಿ ಇದನ್ನು ಭಾರತದಲ್ಲಿ ಕರೆಯಲಾಗುತ್ತದೆ. ಬ್ಯಾಂಕ್‌ನಿಂದ ಗುಣಮಟ್ಟದ ನೆರವಿನ ಅಭಾವದ ಹೊರತಾಗಿ ಈ ವಲಯ ಎದುರಿಸುತ್ತಿರುವ ಕೆಲವು ಪ್ರಮುಖ ಅಡ್ಡಿಗಳೆಂದರೆ : ಬ್ಯಾಂಕುಗಳಿಗೆ ಅವಶ್ಯಕವಾದ ಹೆಚ್ಚುವರಿ ಕೊಲ್ಲಾಟರಲ್ ಭದ್ರತೆ, ಈಕ್ವಿಟಿ/ ಬಹುಸ್ತರ ಬಂಡವಾಳ, ಬಾಹ್ಯ ವಾಣಿಜ್ಯ ಸಾಲ (ಇಸಿಬಿಗಳು) ಸೇರಿದಂತೆ ವಿದೇಶಿ ಕರೆನ್ಸಿ ಸಾಲ ಮತ್ತು ನಿಧಿಯೇತರ ಆಧಾರಿತ ಸ್ಪರ್ಧಾತ್ಮಕ ದರದಲ್ಲಿ (ಬ್ಯಾಂಕ್ ಖಾತರಿ ಮತ್ತು ಸಾಧನಾ ಖಾತರಿ ಮೊದಲಾದವುಗಳು) ಬ್ಯಾಂಕು ಸೌಲಭ್ಯ.

## ನೀತಿಯ ಸ್ಪಂದನೆ

ನೀತಿ ನಿರೂಪಕರು ಈ ಬಹುತೇಕ ಸವಾಲುಗಳನ್ನು ಗುರುತಿಸಿದ್ದು, ಇವುಗಳ

ಪರಿಹಾರಕ್ಕೆ ಸೂಕ್ತವಾಗಿ ಸ್ಪಂದಿಸಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಪ್ರಧಾನ ಮಂತ್ರಿ ಜನ್–ಧನ್ ಯೋಜನಾ (ಪಿಎಂಜೆಡಿವೈ)ಯಂತಹ ಯೋಜನೆಗಳಿಂದ ಗಣನೀಯವಾಗಿ ಆರ್ಥಿಕ ಒಳಗೊಳ್ಳುವಿಕೆಯ ನಿಯಮಗಳನ್ನು ರೂಪಿಸಲಾಗಿದೆ. ಮೇಲಿನಿಂದ ಬಿದ್ದ ಒತ್ತಡಕ್ಕೆ ಬ್ಯಾಂಕಿಂಗ್ ವಲಯವು ಮಣಿದಿದ್ದು, ಈ ಮೊದಲಿಗೆ ಹೋಲಿಸಿದರೆ ಈಗ ಅನೌಪಚಾರಿಕ ಕ್ಷೇತ್ರವನ್ನು ಬ್ಯಾಂಕುಗಳು ತಲುಪಿವೆ. ಬ್ಯಾಂಕರ್‌ಗಳಿಗೆ ಹೆಚ್ಚುವರಿ ಸೌಕರ್ಯ ನೀಡುವ ನಿಟ್ಟಿನಲ್ಲಿ ಎಂಎಸ್‌ಇಗಳಿಗೆ ಸಾಲ ಖಾತರಿ ಸಂಸ್ಥೆ (ಸಿಜಿಟಿಎಂಎಸ್‌ಇ)ಯನ್ನು ಸ್ಥಾಪಿಸಲಾಗಿದ್ದು, ಇದು ಎಂಎಸ್‌ಇಗಲಿಗೆ ಕೊಲ್ಲಾಟರಲ್ ಭದ್ರತೆ ಇಲ್ಲದೆ ಸಾಲ ಸಿಗುವಂತೆ ಮಾಡಿದೆ. ಬಾಕಿ ಉಳಿದ ಸಾಲಕ್ಕೆ ಸಾಲದ ಮೊತ್ತದ ಶೇ. 75ರವರೆಗೆ ಬ್ಯಾಂಕುಗಳಿಗೆ ವಿಮೆ ಸೌಲಭ್ಯವನ್ನೂ ಇದು ಒದಗಿಸುತ್ತದೆ.

ಸಿಜಿಟಿಎಂಎಸ್‌ಇಯು 2015–16ರ ಆರ್ಥಿಕ ವರ್ಷದ ಅಂತ್ಯದೊಳಗೆ 23,23,773 ಸಾಲ ಖಾತರಿಯನ್ನು ನೀಡಿದ್ದು, ಇದರ ಮೊತ್ತ 1,08,991 ಕೋಟಿ ರೂ. ಆಗಿದೆ. ಸಿಬಿಲ್, ಈಕ್ವಿಫಕ್ಸ್, ಎಕ್ಸ್‌ಪೀರಿಯನ್ ಮತ್ತು ಹೈಮಾರ್ಕ್ ಎಂಬ ನಾಲ್ಕು ಕ್ರೆಡಿಟ್ ಮಾಹಿತಿ ಕೇಂದ್ರಗಳು ಭಾರತದ ಎಂಎಸ್‌ಎಇ ಕ್ಷೇತ್ರದಲ್ಲಿ 'ಹೆಚ್ಚು ಶ್ರದ್ಧೆ ತೋರಿಸಬೇಕಾದ' ಅತಿ ಮಾಹಿತಿ ಅಸಮಾನತೆಯ ಪರಿಹಾರವನ್ನು ಕಂಡು ಹಿಡಿದಿದೆ. ಎಂಎಸ್‌ಎಇಗಳು ಚರಾಸ್ತಿಯನ್ನು ನಗದು ಮಾಡಲು ಸೆಂಟ್ರಲ್ ರಿಜಿಸ್ಟ್ರೀ ಆಫ್ ಸೆಕ್ಯುರಿಟೈಸೇಶನ್ ಅಸೆಟ್ ರಿ ಕನ್‌ಸ್ಟ್ರಕ್ಷನ್ ಆಂಡ್ ಸೆಕ್ಯುರಿಟಿ ಇಂಟರೆಸ್ಟ್ (ಸಿಇಆರ್‌ಎಸ್‌ಎಐ)ಯು ಚರಾಸ್ತಿ ದಾಖಲೆಯನ್ನು ಸಿದ್ಧಪಡಿಸಿದ್ದು, ಇದು ಚರಾಸ್ತಿಯನ್ನು ಅಡಮಾನವಿಟ್ಟು ಬ್ಯಾಂಕ್‌ನಿಂದ ಹಣಕಾಸು ಸೌಲಭ್ಯ ಸಿಗುವಂತೆ ಮಾಡಿದೆ. ಎಂಎಸ್‌ಎಂಇಗಳಿಗೆ ಹೊಸದಾಗಿ ಸ್ಥಾಪನೆ ಅಥವಾ ಈಗಿರುವ ಸಂಸ್ಥೆಯನ್ನು ಇನ್ನಷ್ಟು ಉನ್ನತ ಮಟ್ಟಕ್ಕೆ ಏರಿಸಲು ಗುಣಮಟ್ಟದ ಭೂಮಿ (ಗ್ರೀನ್ ಫೀಲ್ಡ್) ಲಭ್ಯತೆ ಒದಗುವಂತೆ ಮಾಡಲು ಬಿಎಸ್‌ಸಿ ಮತ್ತು ಎನ್‌ಎಸ್‌ಸಿಗಳು ಪ್ರತ್ಯೇಕವಾದ ಎಸ್‌ಎಇ ವಿನಿಮಯ ರಚನೆಗೆ ಅವಕಾಶ ನೀಡಲಾಗಿದೆ.

ಇದರ ಜೊತೆಗೆ ಎಂಎಸ್‌ಎಂಇಗಳಿಗೆ ವಿಳಂಬ ಪಾವತಿ ಸಮಸ್ಯೆ ಪರಿಹಾರಕ್ಕಾಗಿ ಟ್ರೇಡ್ ರಿಸಿವೇಬಲ್ಸ್ ಡಿಸ್ಕೌಂಟ್



ಸಿಸ್ಟಂ (ಟಿಆರ್‌ಇಡಿಎಸ್)ನ ಕಾರ್ಯ ನಿರ್ವಹಣೆಗಾಗಿ ಮೂರು ಘಟಕಗಳನ್ನು ಆರ್‌ಬಿಐ ಪರವಾನಿಗೆ ನೀಡಿದೆ. ಈ ವೇದಿಕೆಗಳು ಎಂಎಸ್‌ಎಂಇಗಳು ವಿದ್ಯುನ್ಮಾನದ ತಂತ್ರಜ್ಞಾನದ ಮೂಲಕ ವ್ಯಾಪಾರ ನಡೆಸಲು ಸಾಧ್ಯವಾಗುವಂತೆ ಇನ್‌ವಾಯ್ಸ್/ ಪಾವತಿಗಳನ್ನು ಮಾಡಲು ಆಗುವ ರೀತಿಯಲ್ಲಿ ವಿದ್ಯುನ್ಮಾನ ಪಾವತಿ ಅಪವರ್ತನ ವಿನಿಮಯದ ರೀತಿಯಲ್ಲಿ ಕೆಲಸ ಮಾಡುತ್ತದೆ.

ಅಂತಿಮವಾಗಿ ಭಾರತೀಯ ದಿವಾಳಿ ಕಾಯ್ದೆ 2016 ಜಾರಿಯೊಂದಿಗೆ ಅತಿ ಮಹತ್ವದ ಸಾಂಸ್ಥಿಕ ಸುಧಾರಣೆಯನ್ನು ಅನುಷ್ಠಾನಕ್ಕೆ ತರಲಾಯಿತು. ಇದರಡಿಯಲ್ಲಿ ಮಂಡಳಿ ಈಗಾಗಲೇ ಕಾರ್ಯಾರಂಭ ಮಾಡುತ್ತಿದೆ. ಕಾರ್ಪೊರೆಟ್ ಕಂಪನಿಗಳಿಗೆ ನೀತಿ ಮತ್ತು ನಿಯಂತ್ರಣ ನಿಯಮಗಳನ್ನು (ಕಂಪನಿ ಕಾಯ್ದೆಯಡಿ ಬರುವ) ಜಾರಿಗೊಳಿಸಲಾಗಿದ್ದು, ಪ್ರತ್ಯೇಕವಾಗಿ ವ್ಯವಹಾರ ನಡೆಸುವವರ (ಮುಖ್ಯವಾಗಿ ಎಂಎಸ್‌ಎಂಇಗಳು) ಕುರಿತ ನಿಯಮಗಳ ರಚನೆ ಅಂತಿಮ ಹಂತದಲ್ಲಿದೆ. ಎಂಎಸ್‌ಎಂಇಗಳಿಗೆ ತಗುಲಿದ ಈ ರೋಗವನ್ನು ಪರಿಹರಿಸುವ ನಿಟ್ಟಿನಲ್ಲಿ ಐಬಿಐಸಿ ಕ್ರಾಂತಿಯನ್ನೇ ಮಾಡಿದೆ. ನಷ್ಟದ ಹಾದಿಯಲ್ಲಿರುವ ಆಸ್ತಿಯನ್ನು ತ್ವರಿತವಾಗಿ ಪುನರ್‌ಸ್ವಾಧೀನ ಮಾಡಿಕೊಳ್ಳಲು ಸಾಧ್ಯವಾಗಿದೆ ಮತ್ತು ಹಣಕಾಸು ನೆರವು ನೀಡುವವರಿಂದ ಪುನರ್ ಸ್ಥಾಪನೆ ಮಾಡಲು ಸಾಧ್ಯವಾಗಿ ಈ ಮೂಲಕ ಆರ್ಥಿಕ ಶಿಸ್ತು ಮತ್ತು ಹಣಕಾಸು ವ್ಯವಸ್ಥೆಯಲ್ಲಿ ವಿಶ್ವಾಸವಿಡಲು ಸಾಧ್ಯವಾಗಿದೆ.

**ಮುಂದಿನ ದಾರಿ**

ಈ ಸಂಸ್ಥೆಗಳ ಸೃಷ್ಟಿಯು ಆಧುನಿಕ ಆರ್ಥಿಕ ವ್ಯವಸ್ಥೆಯ ಪ್ರಮುಖ ಅವಶ್ಯಕತೆಗಳನ್ನು ಪೂರೈಸಿದೆ. ಆದಾಗ್ಯೂ, ಇವುಗಳು ಅವಶ್ಯಕವಾದರೂ ಸಾಕಷ್ಟಾಗಿಲ್ಲ ಎಂದು ಹೇಳಬಹುದು. ಅಂದರೆ ಕ್ಯಾನ್ಸರ್ ಪೀಡಿತ ರೋಗಿಯೊಬ್ಬನಿಗೆ ವಿಟಾಮಿನ್, ಆರೋಗ್ಯಕರ ಆಹಾರ ಮತ್ತು ವ್ಯಾಯಾಮ ಅವಶ್ಯಕವಾದರೂ ಕ್ಯಾನ್ಸರ್ ಕಣಗಳನ್ನು ನಿರ್ಮೂಲನೆ ಮಾಡದೆ ಅತನನ್ನು ಉಳಿಸಲು ಸಾಧ್ಯವಾಗದು.

ಪ್ರತಿ ವರ್ಷ ಒಂದು ಕೋಟಿ ಜನರಿಗೆ ಉದ್ಯೋಗಾವಕಾಶ ಸೃಷ್ಟಿಸುವ ಸವಾಲನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಭಾರತದಲ್ಲಿ ಇನ್ನಷ್ಟು ಆಳ ಮತ್ತು ವಿಸ್ತೃತವಾಗಿ ಬ್ಯಾಂಕಿಂಗ್ ಮತ್ತು ಹಣಕಾಸು ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕು. ದೂರ ಸಂಪರ್ಕ ಕೇಂದ್ರದಲ್ಲಿ ಗ್ರಾಹಕರನ್ನು ಸೇವಾದಾರರೇ ಬೆಂಬತ್ತಿ ಕಂಡುಕೊಳ್ಳುವ ರೀತಿಯ ಕ್ರಾಂತಿಯನ್ನು ಬ್ಯಾಂಕಿಂಗ್ ವ್ಯವಸ್ಥೆಯಲ್ಲೂ ಕೈಗೊಳ್ಳಬೇಕು.

ಸರ್ಕಾರವು ಬ್ಯಾಂಕಿಂಗ್‌ನಿಂದ ಹೊರ ನಡೆದು ದೊಡ್ಡ ಪ್ರಮಾಣದಲ್ಲಿ ಸ್ಪರ್ಧಾತ್ಮಕೆಯನ್ನು ಸೃಷ್ಟಿಸುವ ನಿಟ್ಟಿನಲ್ಲಿ ಖಾಸಗಿ ಕ್ಷೇತ್ರಕ್ಕೆ ಅವಕಾಶ ನೀಡಬೇಕು. ಎರಡನೆಯದಾಗಿ, ಬ್ಯಾಂಕಿಂಗ್ ವ್ಯವಸ್ಥೆಯು ದೂರ ಸಂಪರ್ಕ ಕಂಪನಿಗಳು ಮತ್ತು ಡಿಜಿಟಲ್ ಹಣಕಾಸು ವೇದಿಕೆಗಳು ಮತ್ತು ಫಿನ್‌ಟೆಕ್ ಕಂಪನಿಗಳಂತಹ ಹೊಸ ಸಂಸ್ಥೆಗಳ ಅಸ್ತಿತ್ವ ಕೂಡ ಬ್ಯಾಂಕುಗಳ ಸಾಂಪ್ರದಾಯಿಕ ಪಾತ್ರಕ್ಕೆ ಬಹು ದೊಡ್ಡ ಸವಾಲು ಆಗಿದೆ. ಈಗ ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನಗಳಿಗೆ ಅನುಗುಣವಾಗಿ ತ್ವರಿತ ಗತಿಯಲ್ಲಿ ಸ್ಪಂದಿಸುವಂತೆ ನಮ್ಮ ನೀತಿ–ನಿಯಮಗಳ ವೇಗವನ್ನು ಹೆಚ್ಚಿಸಬೇಕು. (ನಾವು ಪಿ2ಪಿ ವೇದಿಕೆಯನ್ನು ಕಳೆದ ಐದು ವರ್ಷಗಳಿಂದ ಚರ್ಚಿಸುತ್ತಿದ್ದರೂ ಯಾವುದೇ ರೀತಿ ಅಂತಿಮ ಹಂತವನ್ನು ತಲುಪಿಲ್ಲ).

ಅಂತಿಮವಾಗಿ ನೋಟು ಅಮಾನ್ಯದ ಬಳಿಕ ಡಿಜಿಟಲ್ ವ್ಯವಹಾರಕ್ಕೆ ನೀಡಿದ ಒತ್ತು ಮತ್ತು ಜಿಎಸ್‌ಟಿ ಜಾರಿಯಿಂದ ವಾಣಿಜ್ಯ ವ್ಯವಹಾರವು ಪಾರದರ್ಶಕವಾಗಿ ದೃಢೀಕರಣಕ್ಕೆ ಒಳಪಡುವ ರೀತಿಯಲ್ಲಿ ಮೂಲಭೂತ ಸ್ಥಿತ್ಯಂತರ ಕಂಡಿದೆ. ಜಿಎಸ್‌ಟಿಎನ್‌ನ ಮೂಲಕ ಬೃಹತ್ ಪ್ರಮಾಣದ ಮಾಹಿತಿ ಲಭ್ಯವಾಗಲಿದ್ದು, ಇದರಿಂದ ಮಾಹಿತಿ ಆಧಾರಿತ ಕೊಲ್ಲಾಟರಲ್ ಆಸ್ತಿ ಆಧಾರಿತ ಮಾಹಿತಿಗಿಂತ ಹೆಚ್ಚು ಲಾಭದಾಯಕವಾಗಲಿದ್ದು, ಸಾಂಪ್ರದಾಯಿಕ ಬ್ಯಾಂಕುಗಳು ಇತ್ತ ಗಮನ ಹರಿಸುವಂತೆ ಮಾಡಲಿವೆ. ❑

# ಬೀದರ್–ಕಲಬುರಗಿ ರೈಲು ಮಾರ್ಗ ಸಮರ್ಪಣೆ




ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಬೀದರ್–ಕಲಬುರಗಿ ನಡುವಿನ 107 ಕಿ.ಮೀ. ಉದ್ದದ ಹೊಸ ರೈಲು ಮಾರ್ಗವನ್ನು ಅಕ್ಟೋಬರ್ 29ರಂದು ದೇಶದ ಸೇವೆಗೆ ಸಮರ್ಪಿಸಿದರು. ಇದೇ ಸಂದರ್ಭದಲ್ಲಿ ಡಿಮೂ ರೈಲು ಸಂಚಾರಕ್ಕೆ ಬೀದರ್ ರೈಲು ನಿಲ್ದಾಣದಲ್ಲಿ ಚಾಲನೆ ನೀಡಿದರು.


## ಡಿಜಿಟಲ್ ಕರೆನ್ಸಿ ಯುಗದತ್ತ ಮುನ್ನಡೆ




ಡಿಜಿಟಲ್ ಕರೆನ್ಸಿಯ ಹೊಸ ಯುಗ ಆರಂಭವಾಗಿದ್ದು, ಈ ಕ್ಷೇತ್ರದಲ್ಲಿ ಮುಂಚೂಣಿ ಕಾಯ್ದುಕೊಳ್ಳಬೇಕೆಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಮನವಿ ಮಾಡಿದ್ದಾರೆ. ಉಜಿರೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ 12 ಲಕ್ಷ ಸ್ವಸಹಾಯ ಸಂಘದ ಸದಸ್ಯರಿಗೆ ರೂಪೇಕಾರ್ಡ್ ವಿತರಣೆ, ತಂತ್ರಾಂಶ ಆಧರಿತ ಸ್ವಸಹಾಯ ಸಂಘ ನಿರ್ವಹಣೆ ಒಪ್ಪಂದ ವಿನಿಮಯ ಮತ್ತು ಭೂಮಿ ತಾಯಿಯನ್ನು ರಕ್ಷಿಸಿ ಮತ್ತು ಮುಂದಿನ ಪೀಳಿಗೆಗೆ ವರ್ಗಾಯಿಸಿ ಅಭಿಯಾನ ಉದ್ಘಾಟಿಸಿ ಮಾತನಾಡಿದರು. ಹಳ್ಳಿಗಳಲ್ಲಿ ವಾಸಿಸುವ ಅಕ್ಷರಸ್ಥ ಮಾತ್ರವಲ್ಲ ಅನಕ್ಷರಸ್ಥ ತಾಯಂದಿರು, ಸೋದರಿಯರು ಡಿಜಿಟಲ್ ವ್ಯವಹಾರದ ಪ್ರಮಾಣ ತೆಗೆದುಕೊಂಡಿದ್ದಾರೆ ಎಂದು ಅವರು ಸಂತಸ ವ್ಯಕ್ತಪಡಿಸಿದರು.

# ವಿಧಾನಸೌಧದ ವಜ್ರಮಹೋತ್ಸವ





**ಕರ್ನಾಟಕ ವಿಧಾನಸೌಧದ 60ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ರಾಷ್ಟ್ರಪತಿ ಶ್ರೀ ರಾಮ್ ನಾಥ್ ಕೋವಿಂದ ಅವರು ವಿಧಾನ ಮಂಡಲದ ವಿಶೇಷ ಜಂಟಿ ಅಧಿವೇಶನವನ್ನು (25.10.2017) ಉದ್ದೇಶಿಸಿ ಮಾಡಿದ ಭಾಷಣದ ಕನ್ನಡ ಸಾರಾಂಶ**

ಸಂಸದೀಯ ಪ್ರಜಾತಂತ್ರದಲ್ಲಿ ಇಂದು ಅವಿಸ್ಮರಣೀಯ ದಿನ. ಭಾರತ ಗಣರಾಜ್ಯದ 14ನೇ ರಾಷ್ಟ್ರಪತಿಯಾಗಿ ವಿಧಾನಸೌಧದ ವಜ್ರಮಹೋತ್ಸವ ಸಂದರ್ಭದಲ್ಲಿ ಗೌರವಾನ್ವಿತ ಕರ್ನಾಟಕ ವಿಧಾನ ಮಂಡಲವನ್ನು ಉದ್ದೇಶಿಸಿ ಮಾತನಾಡುತ್ತಿರುವೆ. ಇದು ಈ ಕಟ್ಟಡದ ವಜ್ರಮಹೋತ್ಸವ, ಮಾತ್ರವಲ್ಲ, ಕರ್ನಾಟಕದ ಜನರ ಜೀವನ ಉನ್ನತಿಯ ನೀತಿ ನಿರೂಪಣೆಗೆ ಕಾರಣವಾದ ಉಭಯ ಶಾಸನ ಸಭೆಗಳ ವಿಚಾರ ವಿಮರ್ಶೆ ಚರ್ಚೆಗಳ ವಜ್ರಮಹೋತ್ಸವ ಕೂಡ. ಶಾಸಕಾಂಗ ಚರ್ಚೆ, ಅಸಮ್ಮತಿ ಹಾಗೂ ಅಂತಿಮವಾಗಿ ನಿರ್ಧಾರ ಕೈಗೊಳ್ಳುವ ಸದನವಾಗಿದೆ. ಇದಕ್ಕೆ ಮತ್ತೊಂದು ಅಂಶ – ಸಜ್ಜನಿಕೆ ಸೇರಿಸಿದ ನಂತರವೇ ಐದನೆಯ ಅಂಶ – ಅದುವೇ ಪ್ರಜಾತಂತ್ರ ಸಾಕಾರವಾಗುತ್ತದೆ. ಶಾಸಕಾಂಗವು ರಾಜಕೀಯ ನಂಬಿಕೆ, ಧರ್ಮ, ಲಿಂಗ ಅಥವ ಭಾಷೆ ಮೀರಿದ ಕರ್ನಾಟಕದ ಜನರ ಮನಸ್ಸು, ಆಶೋತ್ತರ ಮತ್ತು ನಂಬಿಕೆಗಳ





ಮೂರ್ತ ಸ್ವರೂಪವಾಗಿದೆ. ನಮ್ಮ ಜನರ ಕನಸುಗಳನ್ನು ಸಾಕಾರಗೊಳಿಸಲು ಉಭಯ ಸದನಗಳ ಪ್ರಜ್ಞಾವಂತಿಕೆ ಅತ್ಯವಶ್ಯ. ಈ ಶಾಸಕಾಂಗದ ಉಭಯ ಸದನಗಳು ಕನ್ನಡಿಗರ ಆದರ್ಶ, ಆಕಾಂಕ್ಷೆ, ಶಕ್ತಿ ಸಾಮರ್ಥ್ಯ, ಚಲನ ಶೀಲತೆಗಳನ್ನು ಪ್ರತಿನಿಧಿಸುತ್ತವೆ.

ವಿಧಾನಸೌಧ ಕರ್ನಾಟಕದ ಸಾರ್ವಜನಿಕ ಸೇವೆಯ ಇತಿಹಾಸದಲ್ಲಿ ಸ್ಮಾರಕ ಕಟ್ಟಡವಾಗಿದೆ. ಈ ಐತಿಹಾಸಿಕ ಕಟ್ಟಡದ ಉಭಯ ಸದನಗಳ ಕಲಾಪಗಳಲ್ಲಿ ರಾಜಕೀಯ ಗಣ್ಯರ ಸಮೂಹವೇ ಪಾಲ್ಗೊಂಡು ಅವಿಸ್ಮರಣೀಯವಾದ ಚರ್ಚೆ ನಡೆಸಿದ್ದಾರೆ. ಇಂತಹ ಜನಪ್ರತಿನಿಧಿಗಳ ಪರಂಪರೆಯನ್ನು ಪ್ರಸ್ತುತ ಸದಸ್ಯರು ಮುಂದುವರೆಸಿಕೊಂಡು ಹೋಗಬೇಕಾಗಿದೆ. ಚುನಾವಣೆಯ ಎದುರಾಳಿ ರಾಜಕೀಯ ಪ್ರತಿಸ್ಪರ್ಧಿ; ವೈರಿಯಲ್ಲ. ಚುನಾವಣೆ ನಂತರ ಕ್ಷೇತ್ರದ ಮತ್ತು ಸಮಾಜದ ಅಭಿವೃದ್ಧಿ ಏಳಿಗೆಗಾಗಿ ಸ್ಪರ್ಧಿಗಳು ಸಹವರ್ತಿಗಳಾಗುತ್ತಾರೆ. ಇದು ಪ್ರಜಾತಂತ್ರದ ಸೌಂದರ್ಯ.

ಈ ಭವ್ಯ ಕಟ್ಟಡದ ಉದ್ಘಾಟನೆಯು 1956ರ ಕರ್ನಾಟಕದ ಪುನರ್ಘಟನೆ / ಏಕೀಕರಣದ ಸಂದರ್ಭದೊಂದಿಗೆ ಸಮ್ಮಿಳಿತಗೊಂಡಿದೆ. ಕನ್ನಡಿಗರ ಅಸ್ಮಿತೆ, ಭಾಷೆ, ಸಂಸ್ಕೃತಿ ಹೆಮ್ಮೆಯ ಪ್ರತೀಕವಾಗಿದೆ. ಕರ್ನಾಟಕದ ಕನಸು, ಕರ್ನಾಟಕದ್ದು ಮಾತ್ರವಲ್ಲ ಭಾರತದ್ದೂ ಆಗಿದೆ.

ಕರ್ನಾಟಕ ಭಾರತದ ಆರ್ಥಿಕತೆಯ ಎಂಜಿನ್ ಆಗಿದೆ. ದೇಶದೆಲ್ಲೆಡೆಯ ಯುವಕರನ್ನು ವಿದ್ಯೆ, ಉದ್ಯೋಗಕ್ಕಾಗಿ ಆಕರ್ಷಿಸುತ್ತಿರುವ, ಅದೇ ವೇಳೆ ತನ್ನ ಸಾಂಸ್ಕೃತಿಕ - ಭಾಷಾ ವೈಶಿಷ್ಟ್ಯತೆಯನ್ನು ಕಾಪಾಡಿಕೊಂಡು ಬರುತ್ತಿರುವ ಮಿನಿಭಾರತ ಆಗಿದೆ.

ಒಂದು ಕಾಲದಲ್ಲಿ ಕರ್ನಾಟಕದ ಹಂಪೆ ವಿಶ್ವದಲ್ಲೇ ಅತಿ ಶ್ರೀಮಂತ ಮಹಾನ್ ನಗರವಾಗಿತ್ತು. ಜಾಗತಿಕ ಆರ್ಥಿಕತೆ ಮತ್ತು ಅಂತಾರಾಷ್ಟ್ರೀಯ ವ್ಯವಸ್ಥೆಯಲ್ಲಿ ಮಹತ್ವವನ್ನು ಪುನಃ ಪಡೆಯಲು ಶ್ರಮಿಸುತ್ತಿರುವ ಈ ಸಂದರ್ಭದಲ್ಲಿ ದೇಶ ಜ್ಞಾನೋದಯ ತಾಂತ್ರಿಕತೆ, ಏಕೀಕೃತ ಉದ್ದೇಶಗಳಿಗಾಗಿ, ಕರ್ನಾಟಕದತ್ತ ನೋಡುತ್ತಿದೆ. ಈ ನಿಟ್ಟಿನಲ್ಲಿ ಉಭಯ ಸದನಗಳ ಪ್ರತಿನಿಧಿಗಳ ಮೇಲೆ ವಿಶೇಷ ಜವಾಬ್ದಾರಿ ಇದೆ.

ಶಾಸಕಾಂಗ ಸಭೆಗಳು ಪ್ರಜಾತಂತ್ರದ ಪವಿತ್ರ ಮಂದಿರಗಳಂತೆ ಕಾರ್ಯನಿರ್ವಹಿಸಿ, ರಾಜಕೀಯ ಮತ್ತು ನೀತಿ ಚರ್ಚೆಗಳನ್ನು ಉನ್ನತ ಮಟ್ಟಕ್ಕೇರಿಸುವ ಜವಾಬ್ದಾರಿ ಹೊಂದಿವೆ. ಈ ವಜ್ರ ಮಹೋತ್ಸವ ಸಂದರ್ಭ ಹೆಮ್ಮೆಯ ಇತಿಹಾಸ ಆಚರಣೆ ಜೊತೆಗೆ ಮಹಾನ್ ಬದ್ಧತೆಗೆ ಅಡಿಯಿಡುವ ಕಾಲ, ಅದುವೇ ಕರ್ನಾಟಕದ ಭವ್ಯ ಭವಿತವ್ಯ, ಭಾರತದ್ದೂ ಕೂಡ! ❑

ವಿಭಿನ್ನ

ವಿಶೇಷ

# ಕರುನಾಡಿನ ಕಲಾ ಪ್ರಕಾರಗಳು

ಕನ್ನಡ ನಾಡಿನ ವೈವಿಧ್ಯಮಯ ಭಾಷೆ, ಸಂಸ್ಕೃತಿಗೆ ಜಾನಪದ ಕಲೆಗಳು ನೀಡಿರುವ ಆಯಾಮ ಅತಿ ವಿಶಿಷ್ಟ. ಜಾನಪದ ಕಲೆಗಳು ಆಯಾ ಪ್ರದೇಶದ ಜನರ ಅಭಿರುಚಿಯ ದ್ಯೋತಕ. ಬಹುತೇಕ ಕಲೆಗಳಲ್ಲಿ ಧಾರ್ಮಿಕ ಹಿನ್ನೆಲೆ ಹಾಸು ಹೊಕ್ಕಾಗಿದೆ. ವಿವಿಧ ಜಾನಪದ ಕಲಾ ಪ್ರಕಾರಗಳ ಚಿತ್ರ, ವೈಭವದ ಸ್ಥೂಲ ನೋಟ ಇಲ್ಲಿದೆ.


ಕಂಸಾಳೆ


ತೊಗಲು ಬೊಂಬೆಯಾಟ


ಯಕ್ಷಗಾನ


ಸೋಮನ ಕುಣಿತ


ವೀರಗಾಸೆ


ಡೊಳ್ಳು ಕುಣಿತ


ಲಾವಣಿ



ಹಗಲು ವೇಷ


ಗೊರವರ ಕುಣಿತ


ಗೊಂಬೆ ನೃತ್ಯ


ಕೃಷ್ಣ ಪಾರಿಜಾತ

# ತಾಂತ್ರಿಕ ಉನ್ನತೀಕರಣ; ವಿಶ್ವಾಸ ಸಂವರ್ಧನೆ



* ಬಾಲಸುಬ್ರಹ್ಮಣ್ಯ ಮುಂಗಿಲಾ ಹಿಲ್ಲೆಮನೆ

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು (ಎಂಎಸ್ಎಂಇ) ಜಾಗತಿಕವಾಗಿ ಅಸಂಖ್ಯವಾಗಿದ್ದು ಅವೆಲ್ಲವೂ ಉದ್ಯೋಗ, ಉತ್ಪಾದನೆ, ರಫ್ತು ಹಾಗೂ ಇನ್ನಿತರ ರೀತಿಯಲ್ಲಿ ತನ್ನದೇ ಕೊಡುಗೆ ನೀಡುತ್ತಿದ್ದು ನೀತಿ ರೂಪಕರ ಮುಂದೆ ಕಾರ್ಯತಂತ್ರವೊಂದರ ಮನವಿಯೊಂದನ್ನು ಇಟ್ಟಿದೆ. ಇದು ಎಲ್ಲವನ್ನೂ ಒಳಗೊಂಡ ಸುಸ್ಥಿರ ಆರ್ಥಿಕ ಬೆಳವಣಿಗೆ, ಉದ್ಯೋಗ ಸೃಷ್ಟಿ, ಸುಸ್ಥಿರ ಕೈಗಾರಿಕೀರಣ, ಆವಿಷ್ಕಾರಗಳಿಗೆ ಬೆಂಬಲ ಮತ್ತು ಆರ್ಥಿಕ ಅಸಮಾನತೆಯನ್ನು ಕಡಿಮೆಗೊಳಿಸುವುದನ್ನು ಒಳಗೊಂಡಿದೆ. ಪ್ರಸ್ತುತ ಜಾಗತೀಕರಣದ ವಿಶ್ವದಲ್ಲಿ ಹೊಸತನ್ನು ಒಳಗೊಂಡು ಮುಕ್ತ ವಾತಾವರಣದಲ್ಲಿ ಬೆಳೆಯುವಂತೆ ಕಡ್ಡಾಯವಾಗಿ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳನ್ನು (ಎಂಎಸ್ಎಂಇ) ಸಬಲಗೊಳಿಸಬೇಕು. ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸಲು ಹಾಗೂ ಎಲ್ಲವನ್ನೂ ಒಳಗೊಂಡಂತಹ ಜಾಗತೀಕರಣವನ್ನು ರೂಪಿಸಲು ಡಿಜಿಟಲ್ ರೂಪಾಂತರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು.

ಉಳಿದೆಲ್ಲ ಭಿನ್ನ ಗಾತ್ರದ ಉದ್ದಿಮೆಗಳಲ್ಲಿ ಎಂಎಸ್ಎಂಇ ತಮ್ಮ ಬೆಳವಣಿಗೆಗಾಗಿ ತಂತ್ರಜ್ಞಾನ ನಿರ್ವಹಣೆ ಮಾಡುವಲ್ಲಿ ತಮ್ಮದೇ ಆದರ ನಿರ್ಬಂಧಗಳನ್ನು ಎದುರಿಸುತ್ತವೆ. ಸೀಮಿತ ಮಾನವ ಸಂಪನ್ಮೂಲ ಮತ್ತು ಆರ್ಥಿಕ ದುರ್ಬಲತೆಯ ಕಾರಣಗಳಿಂದಾಗಿ ಎಂಎಸ್ಎಂಇ ಉದ್ದಿಮೆಗಳು ತಂತ್ರಜ್ಞಾನವನ್ನು ತಮ್ಮ ಪ್ರಮುಖ ಅಸ್ತ್ರವಾಗಿ ಬಳಸುವಲ್ಲಿ ಸಮರ್ಥರಾಗಿರುವುದಿಲ್ಲ. ಇವೆಲ್ಲವೂ ಕೂಡ ಆ ಉದ್ದಿಮೆಗಳು ತಂತ್ರಜ್ಞಾನ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗಿರುವುದಕ್ಕೆ ಅಡೆತಡೆಗಳು. ಆದ್ದರಿಂದ ಈ ಉದ್ದಿಮೆಗಳವರು ತಮ್ಮ ತಂತ್ರಜ್ಞಾನ ಅಭಿವೃದ್ಧಿಗೆ ಹೊರಗಿನ ತಂತ್ರಜ್ಞಾನಗಳನ್ನು ಅವಲಂಬಿಸಿರುತ್ತವೆ. ಇದು ಕೈಗಾರಿಕೀರಣಗೊಂಡ ಹಾಗೂ ಕೈಗಾರಿಕೀಕರಣಗೊಳ್ಳುತ್ತಿರುವ ಎರಡು ಬಗೆಯ ದೇಶಗಳ ವಿಷಯದಲ್ಲೂ ಸತ್ಯ.

> ತಂತ್ರಜ್ಞಾನ ವರ್ಗಾವಣೆಯು ಎಂಎಸ್ಎಂಇ ಉದ್ದಿಮೆಗಳು ತಮ್ಮ ಉದ್ದೇಶಗಳಲ್ಲಿ ಮುಖ್ಯವಾದ ಒಟ್ಟಾರೆಯಾದ ಆರ್ಥಿಕ ಕ್ಷಮತೆಯನ್ನು ಸಾಧಿಸಲು ಮತ್ತು ಸ್ಪರ್ಧಾತ್ಮಕತೆಯನ್ನು ತೋರಲು ಕಾರಣವಾಗುತ್ತದೆ. ಪ್ರಸ್ತುತ ಕಾಲಘಟ್ಟದಲ್ಲಿ ಭಾರತೀಯ ಆರ್ಥಿಕತೆ ಹಾಗೂ ಉದ್ದಿಮೆಗಳ ವಲಯಕ್ಕೆ ಎಂಎಸ್ಎಂಇ ಉದ್ದಿಮೆಗಳು ತಮ್ಮ ತಂತ್ರಜ್ಞಾನ ಉನ್ನತೀಕರಣವನ್ನು ತಂತ್ರಜ್ಞಾನ ವರ್ಗಾವಣೆಯ ಮೂಲಕ ಮಾಡಿಕೊಳ್ಳುವುದು ಅತ್ಯವಶ್ಯಕ.

ಭಾರತವು 1947ರಲ್ಲಿ ಸ್ವತಂತ್ರಗೊಂಡ ಕಾಲದಿಂದಲೂ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಅಭಿವೃದ್ಧಿಗೆ ದೂರಗಾಮಿ ಯೋಜನೆಗಳನ್ನು ಹಮ್ಮಿಕೊಂಡಿದ್ದರಿಂದ ಜಾಗತಿಕ ಆರ್ಥಿಕವಲಯದಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಗುರುತಿಸಲಾಗಿರುವ ವಿಶೇಷತೆಗಳು/ಗುಣಗಳು ಮತ್ತು ಅಡೆತಡೆಗಳು ಭಾರತೀಯ ಉದ್ದಿಮೆಗಳಿಗೂ ಅನ್ವಯವಾಗುತ್ತದೆ. ಅತಿಸಣ್ಣ, ಸಣ್ಣ ಮತ್ತು ಮಧ್ಯಮಗಾತ್ರದ ಉದ್ದಿಮೆಗಳು ಭಾರತೀಯ ಆರ್ಥಿಕತೆಗೆ ಮಹತ್ತರ ಕೊಡುಗೆಯನ್ನು ನೀಡುತ್ತವೆ : 2015/16ರಲ್ಲಿ ಈ ವಲಯವು 51 ಮಿಲಿಯನ್‌ಗಿಂತ ಹೆಚ್ಚು ಉದ್ದಿಮೆಗಳನ್ನು ಒಳಗೊಂಡಿತು, 117 ಮಿಲಿಯನ್‌ಗಿಂತಲೂ ಹೆಚ್ಚು ಮಂದಿಗೆ ಉದ್ಯೋಗ ಕಲ್ಪಿಸಿತು, ರೂ.8,492 ಬಿಲಿಯನ್‌ಗಿಂತಲೂ (ಪ್ರಸ್ತುತ ದರದಲ್ಲಿ) ಹೆಚ್ಚು ಮೌಲ್ಯದ ರಫ್ತು ವಹಿವಾಟನ್ನು ನಡೆಸಿತು, ರೂ.18,100 ಬಿಲಿಯನ್ ಮೌಲ್ಯದ ಸರಕನ್ನು ಉತ್ಪಾದಿಸಿದೆ (2012/13ರಲ್ಲಿದ್ದ ದರದಲ್ಲಿ) (ಆರ್‌ಬಿಐ

* ಅರ್ಥಶಾಸ್ತ್ರ ಪ್ರಾಧ್ಯಾಪಕರು, ನಿರ್ವಹಣಾ ಅಧ್ಯಯನ ವಿಭಾಗ, ಭಾರತೀಯ ವಿಜ್ಞಾನ ಮಂದಿರ, ಬೆಂಗಳೂರು. E-mail : bala@iisc.ac.in



2017). 2014/15ರಲ್ಲಿ ಈ ಉದ್ದಿಮೆಗಳ ಜಿಡಿಪಿ 30.74%ರಷ್ಟು ದಾಖಲಾಗಿದೆ. ಇದರಲ್ಲಿ ಈ ಉದ್ದಿಮೆಗಳ ಉತ್ಪಾದನಾ ವಲಯ 6.11%, ಸೇವಾ ವಲಯ 24.63% ರಷ್ಟಿತ್ತು (ಅತಿಸಣ್ಣ, ಸಣ್ಣ, ಮಧ್ಯಮ ಗಾತ್ರದ ಉದ್ದಿಮೆಗಳ ಸಚಿವಾಲಯ, 2017). ಆದ್ದರಿಂದಲೇ ಈ ಉದ್ದಿಮೆಗಳ ವಲಯವು ಭಾರತೀಯ ಆರ್ಥಿಕತೆಯ ಬಹುಮುಖ್ಯ ಆಧಾರಸ್ತಂಭಗಳಲ್ಲಿ ಒಂದಾಗಿ ಬೆಳೆದಿದೆ. ಭಾರತದ ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಹಣ ತೊಡಗಿಸುವುದು ಕಷ್ಟ. ಮಾರುಕಟ್ಟೆಯಲ್ಲಿ ಲಭ್ಯವಿರುವ ಉತ್ಪಾದನಾ ತಂತ್ರಜ್ಞಾನಗಳು ದುಬಾರಿಯಾದದ್ದರಿಂದ ಅವುಗಳನ್ನು ತಮ್ಮ ಸ್ವಂತಕ್ಕೆ ಕೊಂಡುಕೊಳ್ಳುವುದು ಕೂಡ ಈ ಉದ್ದಿಮೆಗಳಿಗೆ ಕಷ್ಟ.

### ತಂತ್ರಜ್ಞಾನದ ಉನ್ನತೀಕರಣ

ಬಹಳಷ್ಟು ಏಕಸ್ವಾಮ್ಯದ ಉದ್ದಿಮೆಗಳು ದೀರ್ಘಾವಧಿಯಲ್ಲೂ ಸ್ಪರ್ಧಾತ್ಮಕ ಸ್ಥಾನವನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದು ನಿರ್ವಹಣೆಯನ್ನು ಕಲಿಯುವ ಮೂಲಕ ಹಾಗೂ ತಮ್ಮ ತಂತ್ರಜ್ಞಾನ ಸಂಬಂಧಿತವಾದ ಪ್ರತಿಯೊಂದನ್ನು ಹೆಚ್ಚಿಸಿಕೊಂಡಲ್ಲಿ ಮಾತ್ರ. ಉದ್ದಿಮೆಗಳು ಆಂತರಿಕವಾಗಿ ಅಗತ್ಯವಿರುವ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸುವ 'ತಂತ್ರಜ್ಞಾನ ಸಂಬಂಧಿತವಾದ ಅಪಾಯಕಾರಿ ನಿರ್ಧಾರ'ಗಳನ್ನು ಅದೇ ರೀತಿ ಮತ್ತೊಂದು ಉದ್ದಿಮೆಯ ನೆರವನ್ನು ಇದಕ್ಕಾಗಿ ಪಡೆಯುವ 'ಕಡಿಮೆ ಆಪತ್ತಿನ ನಿರ್ಧಾರ'ಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಎಂಎಸ್‌ಎಂಇಗಳು ಹೊರಗಿನ ತಂತ್ರಜ್ಞಾನವನ್ನು ಪಡೆಯಬಹುದಾದ ವಿವಿಧ ಸಂಪನ್ಮೂಲಗಳಿವೆ. ಅವುಗಳಲ್ಲಿ ಕೆಲವು ಹೀಗಿವೆ :

* ವಿಶ್ವವಿದ್ಯಾಲಯಕ್ಕೆ ಸಂಶೋಧನೆಗೆ ಅನುದಾನ ಒದಗಿಸುವುದು. * ನೌಕರರ ಶಿಕ್ಷಣಕ್ಕೆ ನೆರವು ನೀಡುವ ಮೂಲಕ ಅವರ ತಾಂತ್ರಿಕ ಕೌಶಲ್ಯ ಪರಿಣಿತಿ ನೆರವಾಗುವುದು. * ಹೊರಗಿನ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರಗಳ ಬಳಕೆ. * ಮಾರುಕಟ್ಟೆಯಲ್ಲಿ ಲಭ್ಯವಿರುವ ಹೊಸ ತಂತ್ರಜ್ಞಾನಗಳನ್ನು ಕಲಿಯಲು ಹೊರಗಿನ ಸಲಹೆಗಾರರ ನೆರವನ್ನು ಪಡೆಯುವುದು. * ತಂತ್ರಜ್ಞಾನದ ಸ್ವಾಮ್ಯತೆಯನ್ನು ಪಡೆಯಲು ಹೆಚ್ಚು ಚಾಲ್ತಿಯಲ್ಲಿರುವ ವಿಧಾನ ಅದರ ಪರವಾನಿಗೆಯನ್ನು ಪಡೆಯುವುದು. * ತಂತ್ರಜ್ಞಾನ ಸಂಬಂಧಿ ಸಭೆಗಳು, ಪತ್ರಿಕೆಗಳು, ವ್ಯಾಪಾರಿ ಪ್ರದರ್ಶನಗಳನ್ನು ಬಳಸಿಕೊಂಡು ಪರ್ಯಾಯ ತಂತ್ರಜ್ಞಾನಗಳ ಮೌಲ್ಯಮಾಪನಕ್ಕೆ ಬಳಸಿಕೊಳ್ಳಬೇಕು. * ಮಾರಾಟಗಾರ / ಪೂರೈಕೆದಾರನ ಇಲ್ಲವೇ ಮತ್ತಾವುದೇ ವ್ಯಾಪಾರಿ ಮೂಲದ ಮೂಲಕ ಇರುವ ತಂತ್ರಜ್ಞಾನವನ್ನು ಕೊಂಡುಕೊಳ್ಳುವುದು.

ತಂತ್ರಜ್ಞಾನ ವರ್ಗಾವಣೆಯ ವಿವಿಧ ಬಗೆಗಳನ್ನು ಸ್ಥೂಲವಾಗಿ ಹೀಗೆ ವರ್ಗೀಕರಿಸಬಹುದು : (1) ಆದ್ಯಂತ ತಂತ್ರಜ್ಞಾನ ವರ್ಗಾವಣೆ (2) ಸಮಾನ ಹಂತ ತಂತ್ರಜ್ಞಾನ ವರ್ಗಾವಣೆ. ಆದ್ಯಂತ ವರ್ಗಾವಣೆಯಲ್ಲಿ ಮಾಹಿತಿಯು ಮೂಲಭೂತ ಸಂಶೋಧನ ಹಂತದಿಂದ ಆನ್ವಯಿಕ ಸಂಶೋಧನೆಗೆ ವರ್ಗಾಯಿಸಲ್ಪಡುತ್ತದೆ. ಅಲ್ಲಿಂದ ಅಭಿವೃದ್ಧಿಗೆ – ಅಭಿವೃದ್ಧಿಯಿಂದ ಉತ್ಪಾದನೆಗೆ ವರ್ಗಾಯಿಸಲ್ಪಡುತ್ತದೆ. ಈ ಬಗೆಯ ವರ್ಗಾವಣೆಗಳು ಎರಡೂ ದಿಕ್ಕುಗಳಲ್ಲೂ ನಡೆಯುತ್ತವೆ. ಯಾವ ದಿಕ್ಕಿಗೆ ಮಾಹಿತಿ ವರ್ಗಾಯಿತವಾಗುತ್ತಿದೆ ಎನ್ನುವುದರ ಮೇಲೆ ಮಾಹಿತಿಯ ಸ್ವರೂಪ ಬದಲಾಗುತ್ತದೆ. ಆದರೆ ಸಮಾನ ಹಂತದ ವರ್ಗಾವಣೆಯಲ್ಲಿ ಒಂದು ಪ್ರದೇಶ, ಸಂಸ್ಥೆ ಅಥವ ಸಂದರ್ಭದಲ್ಲಿ ಬಳಕೆಯಾಗುತ್ತಿರುವ ತಂತ್ರಜ್ಞಾನ ಮತ್ತೊಂದೆಡೆಗೆ ವರ್ಗಾಯಿತವಾಗುತ್ತದೆ (Enos, 1989). ಎಂಎಸ್‌ಎಂಇ ಉದ್ದಿಮೆಗಳಲ್ಲಿ ಸಮಾನ ಹಂತದ ವರ್ಗಾವಣೆಯನ್ನು ಹೆಚ್ಚಾಗಿ ಕಾಣಬಹುದು.

ಯಂತ್ರಗಳು ಮತ್ತು ಸಲಕರಣೆಗಳ ವರ್ಗಾವಣೆಯು ಮೊದಲ ಹಂತ. ತಂತ್ರಜ್ಞಾನವನ್ನು ಪಡೆಯುತ್ತಿರುವ ಉದ್ದಿಮೆಯ ನೌಕರರಿಗೆ ಆ ಕುರಿತ ಮಾಹಿತಿ ಮತ್ತು ಕೌಶಲ್ಯಗಳನ್ನು ವರ್ಗಾಯಿಸುವುದು ಎರಡನೆಯ ಹಂತ. ವರ್ಗಾಯಿತಗೊಂಡ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಲು ಮಾಹಿತಿ ಮತ್ತು ಕೌಶಲ್ಯಗಳನ್ನು ಆ ಉದ್ದಿಮೆ/ಸಂಸ್ಥೆಯ ನೌಕರರು ತಿಳಿದುಕೊಳ್ಳಬೇಕಾದ್ದು ಅತ್ಯವಶ್ಯಕ. ಎರಡನೆಯ ಹಂತದ ವರ್ಗಾವಣೆಯ ಬಳಕೆಯು ಕೆಳಹಂತದಲ್ಲಿ ತಂತ್ರಜ್ಞಾನವನ್ನು ಬಳಸುವವರಿಂದ ಹಿಡಿದು ತಾಂತ್ರಿಕ ವರ್ಗದ ವಿಜ್ಞಾನಿಗಳು ಹಾಗೂ ಇಂಜಿನಿಯರ್‌ಗಳನ್ನು ಒಳಗೊಂಡಿರುತ್ತದೆ. ಇದು ಯಶಸ್ವಿಯಾಗುವುದು ತಂತ್ರಜ್ಞಾನವನ್ನು ಪಡೆದ ಸಂಸ್ಥೆ/ಉದ್ದಿಮೆಯ ಗ್ರಹಿಕೆಯ ಸಾಮರ್ಥ್ಯವನ್ನು ಅವಲಂಭಿಸಿರುತ್ತದೆ (ಬಿಸ್ರ್ಚಾಫ್ 2001). ಆದ್ದರಿಂದ ಯಾವ ಉದ್ದಿಮೆಗಳಲ್ಲಿ ಉತ್ತಮ ಗ್ರಹಿಕಾ ಸಾಮರ್ಥ್ಯ ಹೊಂದಿರುವ ನೌಕರರಿರುತ್ತಾರೋ ಆ ಉದ್ದಿಮೆಗಳು ಈ ತಂತ್ರಜ್ಞಾನವನ್ನು ಹೆಚ್ಚು ಯಶಸ್ವಿಯಾಗಿ, ಸಮರ್ಥವಾಗಿ ಬಳಸಿಕೊಳ್ಳುತ್ತವೆ.

### ತಂತ್ರಜ್ಞಾನ ವರ್ಗಾವಣೆಯ ಸಂಪನ್ಮೂಲಗಳು ಮತ್ತು ಮೂಲಗಳು

ಎಂಎಸ್‌ಎಂಇಗಳು ತಂತ್ರಜ್ಞಾನ ಉನ್ನತೀಕರಣಕ್ಕೆ ತಂತ್ರಜ್ಞಾನ ವರ್ಗಾವಣೆಯ ಮೂಲಕ ಹಲವು ಸಂಪನ್ಮೂಲಗಳನ್ನು ಹೊಂದಿವೆ. ಅವುಗಳೆಂದರೆ :

(1) ತಂತ್ರಜ್ಞಾನ ಮಾಹಿತಿ ಮತ್ತು ನೆರವನ್ನು ನೀಡಲು ಭಾರತ ಸರ್ಕಾರದ ಅತಿಸಣ್ಣ, ಸಣ್ಣ, ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಸಂಬಂಧಿಸಿದ ಸಚಿವಾಲಯವು ತಂತ್ರಜ್ಞಾನ ಬ್ಯಾಂಕೊಂದನ್ನು ಹೊಂದಿದೆ (DCMSMEs, 2017).

(2) ವಿಶ್ವವಿದ್ಯಾಲಯಗಳು ಅಥವ ಇಂಜಿನಿಯರಿಂಗ್ ಸಂಸ್ಥೆಗಳು (ಐಐಟಿ/ಎನ್ಐಟಿ/ಐಐಎಸ್‌ಸಿ ಇನ್ನಿತರ ಇಂಜಿನಿಯರಿಂಗ್ ಕಾಲೇಜುಗಳು) ಎಂಎಸ್‌ಎಂಇ ಉದ್ದಿಮೆಗಳಿಗೆ ಒಪ್ಪಂದ ಆಧಾರಿತ ಸಂಶೋಧನೆಯಲ್ಲಿ ಪ್ರಯೋಗಾಲಾಯದಲ್ಲಿ ಅಭಿವೃದ್ಧಿ ಪಡಿಸಿದ ತಂತ್ರಜ್ಞಾನಗಳನ್ನು ನೀಡಬಹುದು ಅಥವ ತಮ್ಮ ಮೂಲಭೂತವಾದ ಸಂಶೋಧನೆಯಲ್ಲಿ ಹೊಮ್ಮಿದ ತಂತ್ರಜ್ಞಾನಗಳನ್ನು ನೀಡಬಹುದು. TIFAC-MSME ಇಂತಹ

ಪರಸ್ಪರ ಕೊಡುಕೊಳುವಿಕೆಯನ್ನು ಉತ್ತೇಜಿಸುತ್ತದೆ (TIFAC, 2017).

(3) ಸರ್ಕಾರದಿಂದ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ನಿಯೋಜಿತವಾಗಿರುವ ತಂತ್ರಜ್ಞಾನ ಸಂಶೋಧನ ಕೇಂದ್ರವು ಎಂಎಸ್ಎಂಇ ಉದ್ದಿಮೆಗಳಿಗೆ ತಂತ್ರಜ್ಞಾನವನ್ನು ಸಂಪನ್ಮೂಲವನ್ನು ಸ್ಥಳೀಯವಾಗಿ ಇಲ್ಲವೇ ಹೊರದೇಶದಿಂದ ಒದಗಿಸಬಹುದು.

(4) ದೇಶದೆಲ್ಲೆಡೆ ಇರುವ ರಾಷ್ಟ್ರೀಯ ಸಂಶೋಧನಾ ಅಭಿವೃದ್ಧಿ ಮಂಡಳಿಯು ವೈಜ್ಞಾನಿಕ ಮತ್ತು ಕೈಗಾರಿಕ ಸಂಶೋಧನ ಮಂಡಳಿಯು ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳನ್ನು ವಾಣಿಜ್ಯೀಕರಣಗೊಳಿಸುತ್ತದೆ. ಇವು ಎಂಎಸ್ಎಂಇ ಉದ್ದಿಮೆಗಳಿಗೆ ತಂತ್ರಜ್ಞಾನ ವರ್ಗಾವಣೆಗೆ ನೆರವಾಗುತ್ತದೆ.

(5) ರಾಷ್ಟ್ರೀಯ ಉತ್ಪಾದನಾ ಸ್ಪರ್ಧಾತ್ಮಕ ಕಾರ್ಯಕ್ರಮದ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮ (DCMSMEs, 2014)

(6) ಬಹುದೊಡ್ಡ ಉದ್ದಿಮೆಗಳೊಂದಿಗೆ (ಖಾಸಗಿ ಉದ್ಯಮ, ಸಾರ್ವಜನಿಕ ಉದ್ಯಮ ಅಥವ ಮಲ್ಟಿನ್ಯಾಷನಲ್ ಕಾರ್ಪೊರೇಷನ್) ಎಂಎಸ್ಎಂಇ ಉದ್ದಿಮೆಗಳು ಒಪ್ಪಂದ ಆಧರಿತ ಸಂಬಂಧಗಳನ್ನು ಹೊಂದಿರಬಹುದು. ಎಂಎಸ್ಎಂಇ ಉದ್ದಿಮೆಗಳು ಉತ್ತಮ ಗುಣಮಟ್ಟದ ಭಾಗಗಳನ್ನು ಉತ್ಪಾದಿಸಲು ಅಗತ್ಯವಾದ ತಾಂತ್ರಿಕ ಮಾಹಿತಿಯನ್ನು, ನೆರವನ್ನು ಹಾಗೂ ತಂತ್ರಜ್ಞಾನವನ್ನು ಒದಗಿಸುತ್ತವೆ.

(7) ವೃತ್ತಿಪರ ತಾಂತ್ರಿಕ ಸಲಹೆಗಾರ (ವೈಜ್ಞಾನಿಕ ಮತ್ತು ಕೈಗಾರಿಕ ಸಂಶೋಧನ ವಿಭಾಗ, ಭಾರತ ಸರ್ಕಾರದಲ್ಲಿ ನೊಂದಣಿ ಮಾಡಿಕೊಂಡವರು) ದೇಶದೊಳಗೆ ಇಲ್ಲವೇ ಹೊರದೇಶಗಳಲ್ಲಿ ಸೂಕ್ತ ತಂತ್ರಜ್ಞಾನವನ್ನು ಗುರುತಿಸಲು ಹಾಗೂ ಪಡೆಯಲು ನೆರವು ನೀಡುವರು.

(8) ಉದ್ದಿಮೆಗಳೊಳಗೆ ತಂತ್ರಜ್ಞಾನ ಪರಿಣತ ತಂಡವನ್ನು ರೂಪಿಸಿಕೊಳ್ಳಲು ತಾಂತ್ರಿಕ ವಿದ್ಯಾಭ್ಯಾಸ ಮತ್ತು



ಉನ್ನತ ಶಿಕ್ಷಣಕ್ಕೆ ಅನುದಾನವನ್ನು ಒದಗಿಸುವುದು. ಆ ಮೂಲಕ ಹೊರಗಿನ ತಂತ್ರಜ್ಞಾನಗಳನ್ನು ಪಡೆಯಬಹುದು.

(9) ಹೊರಗಿನ ತಂತ್ರಜ್ಞಾನಗಳ ಬೆಳವಣಿಗೆಗಳನ್ನು ತಿಳಿಯಲು ತಂತ್ರಜ್ಞಾನ ಪ್ರದರ್ಶನಗಳಲ್ಲಿ, ವಿಚಾರಸಂಕಿರಣ / ಸಮ್ಮೇಳನಗಳಲ್ಲಿ ಭಾಗವಹಿಸುವುದು ಹಾಗೂ ತಾಂತ್ರಿಕ ವಿಷಯ ಸಂಬಂಧಿ ಪತ್ರಿಕೆಗಳನ್ನು ಓದುವುದು ಹಾಗೂ ಅಂತರ್ಜಾಲದ ಮೂಲಕ ವಿಷಯ ಸಂಗ್ರಹಣೆ. ಇವೆಲ್ಲವೂ ತಂತ್ರಜ್ಞಾನ ತಿಳಿವಳಿಕೆಯನ್ನು ಪಡೆಯಲು ಇರುವ ಸಂಪನ್ಮೂಲಗಳು ಹಾಗೂ ಮಾಧ್ಯಮಗಳು.

(10) ತಂತ್ರಜ್ಞಾನ ಪರವಾನಿಗೆ: ಇದೊಂದು ಒಪ್ಪಂದ ವ್ಯವಸ್ಥೆ. ಇದರಲ್ಲಿ ಪರವಾನಿಗೆ ಪಡೆದವರ ಪೇಟೆಂಟ್‌ಗಳು, ಟ್ರೇಡ್‌ಮಾರ್ಕ್‌ಗಳು, ಸೇವೆ, ಕಾಪಿರೈಟ್, ಟ್ರೇಡ್ ಸಿಕ್ರೇಟ್ ಅಥವ ಮತ್ತಾವುದೇ ಬಗೆಯ ಬೌದ್ಧಿಕ ಆಸ್ತಿಯನ್ನು ಮಾರಬಹುದು ಇಲ್ಲವೇ ಒಪ್ಪಂದ ಮಾಡಿಕೊಂಡವರ ನಡುವೆ ಪರಿಹಾರ ಸಂಬಂಧಿ ಮಾತುಕತೆ ಮಾಡಿಕೊಳ್ಳಬಹುದು. ಈ ಪರಿಹಾರವು ಗೌರವಧನ ಇಲ್ಲವೇ ಒಂದೇ ಬಾರಿಗೆ ನೀಡುವ ಬೃಹತ್ ಗೌರವಧನ ಇಲ್ಲವೇ ನಿರಂತರವಾಗಿ ನೀಡುವ ಗೌರವಧನ (ಗೌರವಧನ ಉತ್ಪಾದನೆಯ ಪ್ರಮಾಣವನ್ನು ಆಧರಿಸಿ) ಅಥವ ಎರಡರ ಸಂಯೋಜನೆಯೂ ಆಗಿರಬಹುದು. ಮೇಲಿನ (1) ರಿಂದ (6)ರವರೆಗೆ ತಾಂತ್ರಿಕ ಪರವಾನಿಗೆಗೆ ನೆರವು ನೀಡುವಂತದ್ದು.

(11) ಒಂದೇ ಬಾರಿಗೆ ಮಾರಾಟಗಾರ / ಪೂರೈಕೆದಾರನಿಗೆ ಅಥವ ವಾಣಿಜ್ಯ ಮಾಧ್ಯಮಕ್ಕೆ ಪಾವತಿಸಿ ಇರುವಂತಹ ತಂತ್ರಜ್ಞಾನವನ್ನು ಕೊಂಡುಕೊಳ್ಳುವುದು. APCTT ಏಷ್ಯಾ – ಫೆಸಿಫಿಕ್ ಭಾಗಗಳಲ್ಲಿನ ಉದ್ದಿಮೆಗಳ ನಡುವೆ ಈ ಬಗೆಯ ತಂತ್ರಜ್ಞಾನ ವರ್ಗಾವಣೆಗೆ ನೆರವು ನೀಡುತ್ತದೆ. ಇದಕ್ಕಾಗಿ ನಿಯಮಿತವಾಗಿ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ.


(12) ಭಾರತದ ಸಣ್ಣ ಮಧ್ಯಮ ಗಾತ್ರದ ಉದ್ದಿಮೆಗಳ ತಂತ್ರಜ್ಞಾನ ಸೇವೆಗಳ ಲಿಮಿಟೆಡ್ ಎಂಎಸ್ಎಂಇ ಉದ್ದಿಮೆಗಳಿಗೆ ಜಾಗತಿಕ ಮಟ್ಟದಲ್ಲಿನ ಹೊಸ ತಂತ್ರಜ್ಞಾನಗಳನ್ನು ತಿಳಿಯಲು ಹಾಗೂ ವ್ಯಾಪಾರಿ ಸಹಯೋಗಗಳನ್ನು ಏರ್ಪಡಿಸಿಕೊಳ್ಳಲು ವೇದಿಕೆಯನ್ನು ಒದಗಿಸುತ್ತದೆ.

**ತಂತ್ರಜ್ಞಾನ ವರ್ಗಾವಣೆಯ ಸಾಧನೆಗಳು**

ಒಟ್ಟಾರೆಯಾಗಿ ಹೇಳಬೇಕೆಂದರೆ ತಂತ್ರಜ್ಞಾನ ಉನ್ನತೀಕರಣವು (ವಿವಿಧ ಸಂಪನ್ಮೂಲಗಳು ಮತ್ತು ಮಾಧ್ಯಮಗಳ ಮೂಲಕ) ಎಂಎಸ್ಎಂಇ ಉದ್ದಿಮೆಗಳು ವಿವಿಧ ಉದ್ದೇಶಗಳನ್ನು ಸಾಧಿಸಲು ನೆರವಾಗುತ್ತದೆ. ಅಂದರೆ ತಂತ್ರಜ್ಞಾನದ ಕೊರತೆ, ಪ್ರಮಾಣ/ ವೈವಿಧ್ಯತೆಯ ವಿಸ್ತಾರ, ಅಂತರಾಷ್ಟ್ರೀಯ ಮಾರುಕಟ್ಟೆ ಪ್ರವೇಶ ಇವುಗಳನ್ನು ಸಾಧಿಸಲು ನೆರವಾಗುತ್ತದೆ. ತಂತ್ರಜ್ಞಾನ ಉನ್ನತೀಕರಣಕ್ಕೆ ಎಂಎಸ್ಎಂಇ ಉದ್ದಿಮೆಗಳು ತಂತ್ರಜ್ಞಾನ ವರ್ಗಾವಣೆಯನ್ನು ಅವಲಂಭಿಸಿರುತ್ತವೆ. ಒಮ್ಮೆ ಸಂಪನ್ಮೂಲವನ್ನು ಗುರುತಿಸಿಕೊಂಡಲ್ಲಿ ತಂತ್ರಜ್ಞಾನ ವರ್ಗಾವಣೆಯ ಮಾಧ್ಯವನ್ನು ಅಂತಿಮಗೊಳಿಸಿಕೊಳ್ಳಬಹುದು. ತಂತ್ರಜ್ಞಾನ ವರ್ಗಾವಣೆಯು ಎಂಎಸ್ಎಂಇ ಉದ್ದಿಮೆಗಳು ತಮ್ಮ ಉದ್ದೇಶಗಳಲ್ಲಿ ಮುಖ್ಯವಾದ ಒಟ್ಟಾರೆಯಾದ ಆರ್ಥಿಕ ಕ್ಷಮತೆಯನ್ನು ಸಾಧಿಸಲು ಮತ್ತು ಸ್ಪರ್ಧಾತ್ಮಕತೆಯನ್ನು ತೋರಲು ಕಾರಣವಾಗುತ್ತದೆ. ಪ್ರಸ್ತುತ ಕಾಲಘಟ್ಟದಲ್ಲಿ ಭಾರತೀಯ ಆರ್ಥಿಕತೆ ಹಾಗೂ ಉದ್ದಿಮೆಗಳ ವಲಯಕ್ಕೆ ಎಂಎಸ್ಎಂಇ ಉದ್ದಿಮೆಗಳು ತಮ್ಮ ತಂತ್ರಜ್ಞಾನ ಉನ್ನತೀಕರಣವನ್ನು ತಂತ್ರಜ್ಞಾನ ವರ್ಗಾವಣೆಯ ಮೂಲಕ ಮಾಡಿಕೊಳ್ಳುವುದು ಅತ್ಯವಶ್ಯಕ. ❑

# ವಿಭಿನ್ನತೆಯ ವಿಶೇಷ

* ವಿ. ಕೆ. ಸಕ್ಸೇನಾ



**ಖಾದಿ ಉತ್ಪನ್ನಗಳ ಬೇಡಿಕೆ ಮರುಸ್ಥಾಪನೆಗೆ ಮತ್ತು ಮಾರುಕಟ್ಟೆ ಒದಗಿಸಲು ಕಾರ್ಪೋರೆಟ್ ಸಂಸ್ಥೆಗಳ ಸಹಯೋಗದಲ್ಲಿ ಅನೇಕ ಉಪಕ್ರಮಗಳನ್ನು ಆರಂಭಿಸಲಾಗಿದೆ. ಖಾದಿ ಡೆನಿಮ್‌ನಂತಹ ಖಾದಿ ಉತ್ಪನ್ನಗಳಿಗೆ ಮಾರುಕಟ್ಟೆ ಪ್ರೋತ್ಸಾಹ ದೊರಕಿಸಿಕೊಡುವ ಮೂಲಕ ಖಾದಿಯ ಮಾರಾಟವನ್ನು ವಾರ್ಷಿಕ 40 ಕೋಟಿ ರೂಪಾಯಿಗೆ ಹೆಚ್ಚಿಸುವುದರ ಜತೆಗೆ ಹೆಚ್ಚುವರಿ 7.5 ಲಕ್ಷ ಮಾನವ ದಿನಗಳನ್ನು ನೀಡುವಂತಾಗುತ್ತದೆ.**

ಖಾದಿ ಮತ್ತು ಗುಡಿ ಕೈಗಾರಿಕೆ ನಮ್ಮ ಐತಿಹಾಸಿಕ ಪರಂಪರೆ. ರಾಷ್ಟ್ರಪಿತ ಮಹಾತ್ಮಾ ಗಾಂಧಿ ಆಚರಿಸಿದ ರಾಷ್ಟ್ರೀಯತೆಯ ಸಂಕೇತ ಖಾದಿ ಎಂದು ನಾವು ಹೆಮ್ಮೆಪಡುತ್ತೇವೆ. ಸ್ವಾತಂತ್ರ್ಯಾನಂತರ ಕೂಡ ನಮ್ಮ ರಾಷ್ಟ್ರೀಯ ನಾಯಕರು ಖಾದಿಯ ಪರಂಪರೆ ಹಾಗೂ ರಾಷ್ಟ್ರೀಯ ಮೌಲ್ಯವನ್ನು ಗುರುತಿಸಿರುವುದನ್ನು ಮುಂದುವರಿಸಿ ಖಾದಿ ಮತ್ತು ಖಾದಿ ಉತ್ಪನ್ನಗಳ ಉತ್ಪಾದನೆ ಮೂಲಕ ಗ್ರಾಮೀಣ ಸಮುದಾಯಗಳ ಸ್ವಾವಲಂಬನೆಯನ್ನು ಪ್ರೋತ್ಸಾಹಿಸಲು ದೇಶಾದ್ಯಂತ ಕೇಂದ್ರಗಳನ್ನು ಸ್ಥಾಪಿಸಿದರು. ಈ ಸಂದರ್ಭದಲ್ಲಿ ಖಾದಿ ಮತ್ತು ಗುಡಿ ಕೈಗಾರಿಕೆ ಆಯೋಗ (ಕೆವಿಐಸಿ) ಕೂಡ ಅಸ್ತಿತ್ವಕ್ಕೆ ಬಂದಿತು ಮತ್ತು ಸ್ವಾವಲಂಬನೆಯ ತತ್ವದ ಮೇಲೆ ಅನೇಕ ಉಪಕ್ರಮಗಳನ್ನು ರೂಪಿಸಲು ನೆರವಾಯಿತು. ಆದಾಗ್ಯೂ ಬದಲಾಗುತ್ತಿರುವ ಭೌಗೋಳಿಕ – ರಾಜಕೀಯ ವಾಸ್ತವಗಳಿಂದಾಗಿ ಒಂದೊಮ್ಮೆ ಜನರ ಜೀವನಾಧಾರಕ್ಕೆ ನೆರವಾಗಿದ್ದ ಇಂತಹ ಅನೇಕ ಸಂಸ್ಥೆಗಳು ಮತ್ತು ಉಪಕ್ರಮಗಳು ಅಸಮರ್ಥ ಎಂದು ಅವುಗಳನ್ನು ಸ್ಥಗಿತಗೊಳಿಸಲಾಯಿತು.

ದೇಶಕ್ಕೆ ಸೇವೆ ಸಲ್ಲಿಸಿದ ನಮ್ಮ ನಡುವೆ ಇದ್ದ ರಾಷ್ಟ್ರೀಯ ಸಂಕೇತಗಳು ನಮ್ಮಿಂದ ದೂರವಾಗಬಾರದು ಮತ್ತು ಅವು ಸ್ಥಾಪಿತಗೊಂಡ ಉದ್ದೇಶವನ್ನು ಈಗಲೂ ಸಮರ್ಥವಾಗಿ ನಿಭಾಯಿಸಲು ಸಾಧ್ಯವಿದ್ದು, ಇದರಿಂದಾಗಿ ಸುತ್ತಮುತ್ತಲಿನ ಜನರು ತಾವು ಕಂಡುಕೊಂಡಿದ್ದ ಜೀವನಾಧಾರನ್ನು ಬಳಸಿ ಅಭಿವೃದ್ಧಿ ಹೊಂದಬಹುದು ಎಂಬ ಆಶಯದೊಂದಿಗೆ ಕೆವಿಐಸಿ ಸ್ಥಗಿತಗೊಂಡ ಸಂಸ್ಥೆಗಳನ್ನು ಮತ್ತು ಉಪಕ್ರಮಗಳನ್ನು ಪುನರುಜ್ಜೀವಗೊಳಿಸಲು ಸ್ವಆಸಕ್ತಿ ವಹಿಸಿ ಕ್ರಮಕೈಗೊಂಡಿತು.

### ಖಾದಿ ಆಶ್ರಮದ ಪುನರುಜ್ಜೀವನ

ಸೇವಾಪುರಿ, ವಾರಾಣಸಿ ಗಾಂಧಿ ಆಶ್ರಮವನ್ನು 1946 ರಲ್ಲಿ ಗಾಂಧೀಜಿ ಅವರ ಮಾರ್ಗದರ್ಶನದಲ್ಲಿ ಸ್ಥಾಪಿಸಲಾಯಿತು. ಈ ಆಶ್ರಮವನ್ನು ದೇಶದ ಮೊದಲ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಉದ್ಘಾಟಿಸಿದರು. ಗಾಂಧೀಜಿ ಇಲ್ಲಿ ಸ್ವಲ್ಪ ಕಾಲ ತಂಗಿದ್ದರು. 12 ಎಕರೆ ಪ್ರದೇಶದಲ್ಲಿರುವ ಈ ಸಂಸ್ಥೆಯಲ್ಲಿ 500ಕ್ಕೂ ಹೆಚ್ಚು ಜನ ಕಾರ್ಯನಿರ್ವಹಿಸಿದ್ದರು ಮತ್ತು ಅದು ದೇಶದ ಅತ್ಯುತ್ತಮ ಖಾದಿ ಕೇಂದ್ರಗಳಲ್ಲೊಂದಾಯಿತು. ಆದರೆ ಆರ್ಥಿಕ ಸಂಕಷ್ಟ ಮತ್ತು ಸೂಕ್ತ ನಿರ್ವಹಣೆಯ ಕೊರತೆಯ ಕಾರಣ ಈ ಸಂಸ್ಥೆಯನ್ನು 1990 ರಲ್ಲಿ ಮುಚ್ಚಲಾಯಿತು ಮತ್ತು ಈಗ ಅದು ಪ್ರಾಚೀನ ಹಿರಿಮೆಯ ಶಿಥಿಲ ಸ್ಮಾರಕವಾಗಿದೆ. ಕೇಂದ್ರದ ಪರಂಪರೆಯನ್ನು ಮರುಸ್ಥಾಪಿಸಲು ಸೆಪ್ಟೆಂಬರ್ 17 ರಂದು ಅಂದರೆ 'ಸೇವಾ ದಿವಸ್' ದಿನದಂದು ಈ ಕೇಂದ್ರವನ್ನು ಕೆವಿಐಸಿ ಪುನರಾರಂಭಿಸಿತು. ಖಾದಿ ಚಟುವಟಿಕೆಗಳನ್ನು ಚುರುಕುಗೊಳಿಸಲು ಸಿಎಸ್‌ಆರ್ ನಿಧಿ ಬಳಸಲು ಗ್ರಾಮೀಣ ವಿದ್ಯುದೀಕರಣ ನಿಗಮ – ಆರ್‌ಇಸಿ ಜೊತೆ ಕೆವಿಐಸಿ ಕೈಜೋಡಿಸಿತು. ಈ ಯೋಜನೆಗೆ ಆರ್‌ಇಸಿ ಐದೂವರೆ ಕೋಟಿ ರೂಪಾಯಿ ನೀಡಿತು. ಮೊದಲ ಬಾರಿಗೆ ಖಾದಿ ಚಟುವಟಿಕೆಗಳಿಗಾಗಿ ಸಿಎಸ್‌ಆರ್ ನಿಧಿ ಬಳಸಿ 500 ಸೌರ ಚರಕ ಹಾಗೂ 100 ಸೌರ ಮಗ್ಗಗಳನ್ನು ಹಂಚಲಾಯಿತು.

* ಅಧ್ಯಕ್ಷರು, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ, ನವದೆಹಲಿ. E-mail : chairmankvic2015@gmail.com

ಸೌರ ಚರಕ ಮತ್ತು ಮಗ್ಗಗಳ ಕುರಿತು ತರಬೇತಿ ನೀಡಲು ವಾರಾಣಸಿ ಜಿಲ್ಲೆಯ ಜಯಪುರ್ ಮತ್ತು ಕಕ್ರಾಹಿಯಾ ಗ್ರಾಮಗಳಲ್ಲಿ ಎರಡು ತರಬೇತಿ ಕೇಂದ್ರಗಳನ್ನು ಕೆವಿಐಸಿ ಸ್ಥಾಪಿಸಿದೆ. ಪ್ರತಿ ಜಿಲ್ಲೆಯಲ್ಲಿ ತಲಾ 25 ಸೌರ ಚರಕ ಮತ್ತು 5 ಸೌರ ಮಗ್ಗಗಳನ್ನು ಒದಗಿಸಲಾಗಿದ್ದು ಈವರೆಗೆ 500 ಕ್ಕೂ ಹೆಚ್ಚು ಸ್ಥಳೀಯ ಮಹಿಳೆಯರಿಗೆ ತರಬೇತಿ ನೀಡಲಾಗಿದೆ.

### ತರಬೇತಿ ಕೇಂದ್ರದ ಪುನರುಜ್ಜೀವನ

ಜಮ್ಮು – ಕಾಶ್ಮೀರದ ಝೇಲಂ ನದಿಯ ಪೂರ್ವ ಭಾಗದಲ್ಲಿನ ಐತಿಹಾಸಿಕ ಪಟ್ಟಣ ಪಾಂಪೋರ್‌ನಲ್ಲಿ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ತರಬೇತಿ ಕೇಂದ್ರವನ್ನು ಕೆವಿಐಸಿ 2017ರ ಆಗಸ್ಟ್ 22 ರಂದು ಪುನರುಜ್ಜೀವಗೊಳಿಸಿತು. ಇಲ್ಲಿನ ಕೇಸರಿ ವಿಶ್ವವ್ಯಾಪಿ ಖ್ಯಾತವಾಗಿದ್ದು ಕಾಶ್ಮೀರದ ಕೇಸರಿ ಪಟ್ಟಣ ಎಂದೇ ಪ್ರಸಿದ್ಧ. 1990ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರಗಾಮಿತ್ವ ತೀವ್ರ ಮಟ್ಟದಲ್ಲಿದ್ದಾಗ ನಾಶವಾಯಿತು. 1947 ರಲ್ಲಿ ಗಾಂಧೀಜಿ ಸಹ ಈ ಕೇಂದ್ರಕ್ಕೆ ಭೇಟಿ ನೀಡಿದ್ದರು. ಪಾಂಪೋರ್‌ನಲ್ಲಿನ ಐತಿಹಾಸಿಕ ಕೇಂದ್ರದಲ್ಲಿ ನೂಲುವ ಮತ್ತು ನೇಯುವ, ಇಡಿಪಿ, ಜೇನುಸಂರಕ್ಷಣೆ ಮತ್ತು ಸೌರ ಚರಕಗಳ ಬಗ್ಗೆ ತರಬೇತಿ ಆರಂಭಿಸಲಾಗಿದೆ. ಯುದ್ಧ ಕಾಲದಲ್ಲಿ ನಾಶವಾಗಿದ್ದ ಖಾದಿ ಮಳಿಗೆಯ ನವೀಕೃತ ಕೇಂದ್ರವನ್ನು ಸಹ ಉದ್ಘಾಟಿಸಲಾಗಿದೆ. ಇವೆಲ್ಲಕ್ಕಿಂತ ಮಿಗಿಲಾಗಿ, ಗುಜರಾತ್‌ನಲ್ಲಿನ ಬುಡಕಟ್ಟು ಪ್ರಾಬಲ್ಯವಿರುವ ವಣಜ್ ಗ್ರಾಮದಲ್ಲಿ ಕೆವಿಐಸಿ 25 ಚರಕ ಹಾಗೂ 5 ಮಗ್ಗಗಳನ್ನು ನೀಡಿದೆ. ಅಲ್ಲಿನ ಕನಿಷ್ಠ 50 ಬುಡಕಟ್ಟು ಮಹಿಳೆಯರಿಗೆ ಸುಸ್ಥಿರ ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆ. ಮುಂದುವರಿದಂತೆ ಈ ವರ್ಷದ ಏಪ್ರಿಲ್‌ನಲ್ಲಿ ಬೇಟೆ ಹೆಚ್ಚಿರುವ ಕಾಜೀರಂಗಾ ರಾಷ್ಟ್ರೀಯ ಉದ್ಯಾನವನ ಪ್ರದೇಶದಲ್ಲಿನ ಸಿಲಿಂಖೋವಾ ಗ್ರಾಮದಲ್ಲಿ ಕೆವಿಐಸಿ ಹೊಸ ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನೂ ಆರಂಭಿಸಿದೆ. ಗ್ರಾಮದ ಕುಶಲಕರ್ಮಿಗಳಿಗೆ 25 ಚರಕ, ಐದು ಮಗ್ಗ ಹಾಗೂ ಇತರ ಸಲಕರಣೆಗಳನ್ನು ಕೆವಿಐಸಿ ನೀಡಿದೆ. ಈ ಪ್ರದೇಶದ ಸುಮಾರು 50 ಗ್ರಾಮೀಣ ಕುಟುಂಬಗಳಿಗೆ ಈ ಘಟಕ ನೇರ ಉದ್ಯೋಗಾವಕಾಶ ಕಲ್ಪಿಸಿದೆ.

### ಜೇನು ಜಾಡು ಸ್ಥಾಪನೆ

ಉಪಖಂಡದ ವೈವಿಧ್ಯಮಯ ಭೂಪ್ರದೇಶದಲ್ಲಿನ ವಿಶಿಷ್ಟಸಸ್ಯವರ್ಗದಿಂದಾಗಿ ನೈಸರ್ಗಿಕ ಜೇನುತುಪ್ಪ ಉತ್ಪಾದನೆಗೆ ಭಾರತದಲ್ಲಿ ಹೆಚ್ಚಿನ ಸಾಮರ್ಥ್ಯವಿದೆ. ದೇಶದ ಅರಣ್ಯ, ಅರೆ ಅರಣ್ಯ ಮತ್ತು ಕೃಷಿ ಪ್ರದೇಶಗಳಲ್ಲಿ ಜೇನುಗೂಡು ನಿರ್ವಹಣೆ ಪ್ರಸಿದ್ಧವಾಗಿದೆ. ಜೇನು ತಯಾರಿಕೆಯಲ್ಲಿ ವಿಫುಲ ಉಪಯೋಗಗಳಿವೆ. ಸ್ವಾದಿಷ್ಟ ಜೇನುತುಪ್ಪದ ಜತೆಗೆ ಜೇನುಹುಳುಗಳು ಪರಾಗಸ್ಪರ್ಶ ಪ್ರಕ್ರಿಯೆ ಹೆಚ್ಚಿಸುತ್ತದೆ, ಇದರಿಂದ ಕೃಷಿ ಉತ್ಪಾದನೆಯೂ ಹೆಚ್ಚುತ್ತದೆ. ಜೇನು ಮೇಣ, ಪರಾಗ, ಜೇನಿನ ನಂಜು ಮಾನವನಿಗೆ ಅಪಾರ ಪ್ರಯೋಜನ ನೀಡುವ ಇತರ ಉಪಉತ್ಪನ್ನಗಳು. ಇವುಗಳ ಮಹತ್ವ ಮನಗಂಡು ಜೇನು ತಯಾರಿಕೆಗೆ ನ್ಯಾಯಯುತ ಪ್ರೋತ್ಸಾಹ ನೀಡಲು ಕೆವಿಐಸಿ ದೇಶದಲ್ಲಿ 'ಹನಿ ಮಿಷನ್' ಅಭಿಯಾನ ಆರಂಭಿಸಿದೆ. ಈ ಅಭಿಯಾನದಡಿ ಕೆವಿಐಸಿ ಈ ವರ್ಷ ಒಂದು ಲಕ್ಷ ಜೇನು ಪೆಟ್ಟಿಗೆಗಳನ್ನು ರೈತರಿಗೆ ನೀಡಲಿದೆ. ಕೆವಿಐಸಿ ರಾಷ್ಟ್ರಪತಿ ಭವನದಿಂದ




ಜೇನು ಅಭಿಯಾನ ಆರಂಭಿಸಿತು. ರಾಷ್ಟ್ರಪತಿ ಭವನದೊಳಗೆ ಕೆವಿಐಸಿ ಸ್ಥಾಪಿಸಿರುವ ಜೇನುಗೂಡು ಕೇಂದ್ರಕ್ಕೆ ಮಾನ್ಯ ರಾಷ್ಟ್ರಪತಿ ಶ್ರೀ ರಾಮ್ ನಾಥ್ ಕೋವಿಂದ್ ಭೇಟಿ ನೀಡುವ ಮೂಲಕ ಅಭಿಯಾನಕ್ಕೆ ಚಾಲನೆ ದೊರೆಯಿತು. ಕೆವಿಐಸಿ ಸ್ಥಾಪಿಸಿರುವ ರಾಷ್ಟ್ರಪತಿ ಭವನದೊಳಗಿನ ಕೇಂದ್ರದಲ್ಲಿ 150 ಜೇನು ಪೆಟ್ಟಿಗೆಗಳಿದ್ದು ಮುಂದಿನ ಕೆಲವು ತಿಂಗಳುಗಳಲ್ಲಿ 500 ಜೇನು ಪೆಟ್ಟಿಗೆಗಳಿಗೆ ಏರಿಕೆಯಾಗಲಿದೆ. ರಾಷ್ಟ್ರಪತಿ ಭವನದಲ್ಲಿನ ಕೇಂದ್ರದಲ್ಲಿ ಉತ್ತಮ ಗುಣಮಟ್ಟದ 15 ಸಾವಿರ ಕಿಲೋಗ್ರಾಂ ತೂಕದ ಜೇನುತುಪ್ಪ ಉತ್ಪಾದನೆಯಾಗಲಿದೆ. ವಾರಾಣಸಿಯ ಸೇವಾಪುರಿ ವೈವಿಧ್ಯಮಯ ಸಸ್ಯ ಹಾಗೂ ಪ್ರಾಣಿಗಳಿರುವ ಕೃಷಿ ಪ್ರದೇಶ. 'ಹನಿ ಮಿಷನ್' ಅಡಿ 100 ಜೇನುಪೆಟ್ಟಿಗೆ ಸಾಮರ್ಥ್ಯದ ಜೇನುಗೂಡುಗಳಿರುವ ಕೇಂದ್ರ ಸ್ಥಾಪಿಸಲಾಗಿದೆ. ಸುತ್ತಮುತ್ತಲ ಪ್ರದೇಶದ ರೈತರಿಗೆ ಜೇನು ಸಾಕಣೆ ತರಬೇತಿ ಮತ್ತು ಉತ್ಪಾದನಾ ಕೇಂದ್ರವಾಗಿದೆ. ವಾರಾಣಸಿ ಜಿಲ್ಲೆಯಲ್ಲಿ 100 ಜೇನು ಪೆಟ್ಟಿಗೆಗಳಿರುವ ಮೊದಲ ಜೇನು ಉತ್ಪಾದನೆ ಮತ್ತು ತರಬೇತಿ ಕೇಂದ್ರ ಕೂಡ ಇದಾಗಿದೆ. ಜಮ್ಮು ಕಾಶ್ಮೀರದ ಪಾಂಪೋರ್ ತರಬೇತಿ ಕೇಂದ್ರದಲ್ಲಿ ಜೇನು ಕೃಷಿ ಬಗ್ಗೆ ತರಬೇತಿ ನೀಡಲು ಜೇನುಗೂಡು ಸಹಿತ 100 ಜೇನು ಪೆಟ್ಟಿಗೆಗಳನ್ನು ಅಳವಡಿಸಲಾಗಿದೆ. ತರಬೇತಿ ನಂತರ ಸ್ಥಳೀಯ ರೈತರಿಗೆ ಮತ್ತು ಜೇನು ಸಾಕಣೆದಾರರಿಗೆ ಜೇನುಪೆಟ್ಟಿಗೆಗಳನ್ನು ನೀಡಲಾಗುತ್ತದೆ. ಸಸ್ಯ ಮತ್ತು ಪ್ರಾಣಿ ಸಂಕುಲ ಅಗಾಧವಾಗಿರುವ ಕಾಶ್ಮೀರದ ಕೇಸರಿ ಪಟ್ಟಣ ಜೇನು ಕೃಷಿಗೆ ಸೂಕ್ತ ಸ್ಥಳವಾಗಿದ್ದು ಉತ್ತಮ ಗುಣಮಟ್ಟದ ಜೇನುತುಪ್ಪ ತಯಾರಿಕೆಗಾಗಿ 'ಜೇನು ಅಭಿಯಾನ'ದಡಿ ಸಂಪರ್ಕಿಸಲಾಗುವುದು.

### ಅನುಭೂತಿ ಮತ್ತು ಸಬಲೀಕರಣ

ಕೆವಿಐಸಿಯ ಎಲ್ಲ ಅಭಿವೃದ್ಧಿ ಚಟುವಟಿಕೆಗಳಲ್ಲಿ ಮಹಿಳಾ ವಿಮೋಚನೆ ಮತ್ತು ಸಬಲೀಕರಣಕ್ಕೆ ಆದ್ಯತೆ ನೀಡಲಾಗಿದೆ. ಸಬಲೀಕೃತ ಮಹಿಳೆ ಆರೋಗ್ಯಕರ ಕುಟುಂಬ ನಿರ್ಮಾಣ ಮಾಡಬಹುದು ಆ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ನೆರವಾಗಬಹುದು ಎಂಬ ನಂಬಿಕೆಯಿಂದ ಸೇವಾಪುರಿ ಅಥವಾ ಪಾಂಪೋರ್ ಎಲ್ಲೇ ಇರಲಿ, ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಲಾಗಿದೆ.

### ಹೊಸ ಅಧ್ಯಾಯ

ಮಧ್ಯಪ್ರದೇಶದ ನರ್ಮದಾ ಕಣಿವೆ ಪ್ರದೇಶದಲ್ಲಿ ಖಾದಿ ಚಟುವಟಿಕೆಗಳನ್ನು ಆರಂಭಿಸಲು ಕೆವಿಐಸಿಯ ಸಹಯೋಗ್ ಕಾರ್ಯಕ್ರಮದ ಮೂಲಕ ಓಂಕಾರೇಶ್ವರದಲ್ಲಿನ ಬುಡಕಟ್ಟು ಮಹಿಳೆಯರಿಗೆ 80 ಚರಕಗಳನ್ನು ನೀಡಿದೆ. ಸೂಕ್ತ ತರಬೇತಿ ಪಡೆದ ಎಲ್ಲ 90 ಕುಶಲಕರ್ಮಿ ಮಹಿಳೆಯರು ಇತರ ಬುಡಕಟ್ಟು ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಸಹಯೋಗ್ ಕಾರ್ಯಕ್ರಮದಲ್ಲಿ ಸಾರ್ವಜನಿಕ ಸಹಭಾಗಿತ್ವದೊಂದಿಗೆ ದೇಶಾದ್ಯಂತ ಗ್ರಾಮೀಣ ಸಮುದಾಯಗಳಿಗೆ ಒಂದು

ಸಾವಿರಕ್ಕೂ ಹೆಚ್ಚು ಚರಕಗಳನ್ನು ಹಂಚಲಾಗಿದೆ.

**ಮಾರುಕಟ್ಟೆಯಲ್ಲಿ ಗುರುತಿಸುವಿಕೆ**

ಗ್ರಾಮೀಣ ಸಮುದಾಯದವರ ಜೀವನಮಟ್ಟ ಸುಧಾರಿಸಲು ಮಾರುಕಟ್ಟೆ ಬಗ್ಗೆ ಆದ್ಯ ಗಮನ ನೀಡಬೇಕು. ಇದು ಆರೋಗ್ಯಕರ ಬೇಡಿಕೆ – ಪೂರೈಕೆ ಸ್ಥಿತಿ ನಿರ್ಮಿಸುವಲ್ಲಿ ನೆರವಾಗುತ್ತದೆ. ಮಾರುಕಟ್ಟೆ ಬಗ್ಗೆ ಕೆವಿಐಸಿ ನಿಯಮಿತವಾಗಿ ಗಮನ ಕೇಂದ್ರೀಕರಿಸಿದೆ. ಏಕೆಂದರೆ ಮಾರುಕಟ್ಟೆಯಲ್ಲಿನ ಬೇಡಿಕೆ ಉದ್ಯೋಗ ಸೃಷ್ಟಿಗೆ ಗ್ರಾಮೀಣ ಸಮುದಾಯಕ್ಕೆ ನಾವು ಹೇಗೆ ನೆರವಾಗಬಹುದು ಎಂಬುದನ್ನು ತಿಳಿಸುತ್ತದೆ. ಈ ನಿಟ್ಟಿನಲ್ಲಿ ಕೆವಿಐಸಿ ಅಪಾರ ಶ್ರಮ ವಹಿಸಿದೆ. ಖಾದಿ ಉತ್ಪನ್ನಗಳ ಬೇಡಿಕೆ ಮರುಸ್ಥಾಪನೆಗೆ ಮತ್ತು ಮಾರುಕಟ್ಟೆ ಒದಗಿಸಲು ಕಾರ್ಪೊರೇಟ್ ಸಂಸ್ಥೆಗಳ ಸಹಯೋಗದಲ್ಲಿ ಅನೇಕ ಉಪಕ್ರಮಗಳನ್ನು ಆರಂಭಿಸಲಾಗಿದೆ. ಖಾದಿ ಡೆನಿಮ್ ನಂತಹ ಖಾದಿ ಉತ್ಪನ್ನಗಳಿಗೆ ಮಾರುಕಟ್ಟೆ ಪ್ರೋತ್ಸಾಹ ದೊರಕಿಸಿಕೊಡುವ ಮೂಲಕ ಖಾದಿಯ ಮಾರಾಟವನ್ನು ವಾರ್ಷಿಕ 40 ಕೋಟಿ ರೂಪಾಯಿಗೆ ಹೆಚ್ಚಿಸುವುದರ ಜತೆಗೆ ಹೆಚ್ಚುವರಿ 7.5 ಲಕ್ಷ ಮಾನವ ದಿನಗಳನ್ನು ನೀಡುವಂತಾಗುತ್ತದೆ. ಖಾದಿ ಪೀಟರ್ ಇಂಗ್ಲೆಂಡ್ ಎಂದು ಉತ್ಪನ್ನ ಅಭಿವೃದ್ಧಿಗೊಳಿಸಿ ಖಾದಿಯನ್ನು ಆಯ್ಕೆಯ ವಸ್ತ್ರವಾಗಿಸುವತ್ತ ಕ್ರಮ ಕೈಗೊಳ್ಳಲಾಗುತ್ತಿದೆ.

**ಆರೋಗ್ಯ ಸಚಿವಾಲಯದಿಂದ ಸೂಚನೆ**

ಅನೇಕ ಸಾರ್ವಜನಿಕ ಮತ್ತು ಖಾಸಗಿ ವಲಯ ಕಂಪೆನಿಗಳಿಂದ ಕೆವಿಐಸಿಗೆ ಅನೇಕ ಪೂರೈಕೆ ಬೇಡಿಕೆಗಳು ದೊರೆತಿವೆ. ತೈಲ ಮತ್ತು ನೈಸರ್ಗಿಕ ಅನಿಲ ನಿಗಮ – ಓಎನ್‌ಜಿಸಿ (ತನ್ನ 35 ಸಾವಿರ ಸಿಬ್ಬಂದಿಗೆ ಸಿದ್ಧ ಉಡುಪು ಮತ್ತು ಗುಡಿ ಕೈಗಾರಿಕೆಯ ಉತ್ಪನ್ನಗಳನ್ನು ಪೂರೈಕೆ ಮಾಡಲು 45 ಕೋಟಿ ರೂಪಾಯಿ. ರೈಲ್ವೆ ವಲಯ (ಹಾಸು ಹೊದಿಕೆ, ದಿಂಬು ಹೊದಿಕೆ, ಬ್ಲಾಂಕೆಟ್ ಮೊದಲಾದವುಗಳ ಪೂರೈಕೆಗೆ 42 ಕೋಟಿ ರೂಪಾಯಿ), ಏರ್ ಇಂಡಿಯಾ (ಮೊದಲ ದರ್ಜೆ ಮತ್ತು ವ್ಯಾಪಾರ ದರ್ಜೆ ಪ್ರಯಾಣಿಕರಿಗೆ ನೀಡಲು 35 ಸಾವಿರ ಉಪಯೋಗಕರ ಕಿಟ್ ಒದಗಿಸಲು 11 ಕೋಟಿ 1 ಲಕ್ಷ ರೂಪಾಯಿ), ಎನ್‌ಟಿಪಿಸಿ (23 ಸಾವಿರ ರೇಷ್ಮೆ ಜಾಕೆಟ್ ಪೂರೈಕೆಗೆ ಐದು ಕೋಟಿ ರೂಪಾಯಿ) ಮತ್ತು ಜೆಕೆ ವೈಟ್ ಸಿಮೆಂಟ್ (ಸಮವಸ್ತ್ರ ಸರಬರಾಜಿಗೆ 17 ಲಕ್ಷ ರೂಪಾಯಿ). ಆರೋಗ್ಯ ಸಚಿವಾಲಯ ತನ್ನ ಆಸ್ಪತ್ರೆ ಮತ್ತು ಸಿಬ್ಬಂದಿಗೆ ಖಾದಿ ಬಳಕೆಗೆ ಆದ್ಯತೆ ನೀಡಿರುವುದು ಮಹತ್ವದ ಸಂಕೇತವಾಗಿದೆ. ಆರೋಗ್ಯ ಸಚಿವಾಲಯದಿಂದ ಸುಮಾರು 150 ಕೋಟಿ ರೂಪಾಯಿ ಮೌಲ್ಯದ ಖರೀದಿ ಖಾದಿ ಉತ್ಪನ್ನ ತಯಾರಕರ ಬದುಕಿಗೆ ಬೆಂಬಲ ನೀಡುವ ಮೂಲಕ ಹೆಚ್ಚುವರಿ ಪರಿಣಾಮ ಬೀರಲಿದೆ. ಆರೋಗ್ಯ ಸಚಿವಾಲಯದ ದೇಶಾದ್ಯಂತ ಇರುವ 23 ಕೇಂದ್ರ ಸರ್ಕಾರಿ ಆಸ್ಪತ್ರೆಗಳು ಮತ್ತು ಸಂಶೋಧನಾ ಕೇಂದ್ರಗಳು ಕೇವಲ ಖಾದಿ ಉತ್ಪನ್ನಗಳನ್ನು ಮಾತ್ರ ಖರೀದಿಸುತ್ತವೆ.

**ಏರ್ ಇಂಡಿಯಾದಿಂದ ಬೇಡಿಕೆ**

ಕೆವಿಐಸಿ ಸುಮಾರು 12 ಕೋಟಿ ಮೌಲ್ಯದ ಪುನರಾವರ್ತಿತ ಸರಬರಾಜು ಆದೇಶವನ್ನು ಪಡೆದಿದೆ. ರಾಷ್ಟ್ರೀಯ ವಿಮಾನ ಸೌಲಭ್ಯ ಒದಗಿಸುವ ಏರ್ ಇಂಡಿಯಾ ತನ್ನ ವಿಮಾನಗಳಲ್ಲಿ ನೈಸರ್ಗಿಕ ಮತ್ತು ಪರಿಸರ ಸ್ನೇಹಿ ಖಾದಿ ಉತ್ಪನ್ನಗಳನ್ನು ಬಳಸಲು ನಿರ್ಧರಿಸಿದೆ ಮತ್ತು ತನ್ನ ಪ್ರಥಮ ದರ್ಜೆ ಮತ್ತು ವ್ಯಾಪಾರ ದರ್ಜೆ ಪ್ರಯಾಣಿಕರಿಗಾಗಿ ಸುಮಾರು 7 ಕೋಟಿ 98 ಲಕ್ಷ ಮೌಲ್ಯದ 65 ಸಾವಿರದ 600 ಉಪಯೋಗಿ ಕಿಟ್‌ಗಳ ಖರೀದಿಗೆ ಬೇಡಿಕೆ ಇಟ್ಟಿದೆ. ಸ್ಪರ್ಧಾತ್ಮಕ ಪೂರೈಕೆ ಹಾಗೂ ಗುಣಮಟ್ಟ ಪರೀಕ್ಷೆ ಮೂಲಕ ಬೇಡಿಕೆ ಪೂರೈಸಲಾಗುವುದು, ಈ ಮೂಲಕ ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳ ಮೌಲ್ಯವನ್ನು ಎತ್ತಿಹಿಡಿಯಲಾಗುತ್ತಿದೆ. 2016ರ ಜೂನ್‌ನಲ್ಲಿ 1 ಲಕ್ಷ 85 ಸಾವಿರ ಅಮೆನಿಟಿ ಕಿಟ್ಸ್ ಗಾಗಿ ಸುಮಾರು ಎಂಟು ಕೋಟಿ ರೂಪಾಯಿ ಮೌಲ್ಯದ ಉತ್ಪನ್ನಗಳಿಗಾಗಿ ಕೆವಿಐಸಿಗೆ ಬೇಡಿಕೆ ಇಟ್ಟಿತ್ತು. ಅದೇ ರೀತಿ 2015ರ ಡಿಸೆಂಬರ್‌ನಲ್ಲಿ 25 ಸಾವಿರ ಕಿಟ್‌ಗಳ ಪೂರೈಕೆಗಾಗಿ ಕೆವಿಐಸಿಗೆ ಪರೀಕ್ಷಾ ಬೇಡಿಕೆ ಇಟ್ಟಿತು. ಈ ಕಿಟ್‌ನಲ್ಲಿ ಖಾದಿ ಸ್ಯಾನಿಟೈಸರ್ (ಕೈ ಸ್ವಚ್ಛಗೊಳಿಸುವ ದ್ರವ), ಖಾದಿ ಮಾಯ್ಚರೈಸರ್ ಲೋಷನ್ (ಆರ್ದ್ರಕ ದ್ರವ), ಖಾದಿ ಲೆಮನ್‌ಗ್ರಾಸ್ (ನಿಂಬೆಹುಲ್ಲು), ಖಾದಿ ಹ್ಯಾಂಡ್ ಮೇಡ್ ಸೋಪ್ (ಕೈಯಿಂದ ಮಾಡಿದ ಸೋಪು), ಖಾದಿ ಲಿಪ್ ಬಾಮ್ (ತುಟಿ ಮುಲಾಮು), ಖಾದಿ ರೋಸ್ ಫೇಸ್ ವಾಶ್ (ಗುಲಾಬಿ ಮುಖ ಮಾರ್ಜಕ) ಮತ್ತು ಇತರ ಸಾರಭೂತ ತೈಲ ಲಭ್ಯ.



**ವ್ಯಾಪಕವಾಗಿ ತಲುಪುವಿಕೆ**

ಭಾರತೀಯ ದೇಶಿ ಉತ್ಪನ್ನಗಳ ಬಗ್ಗೆ ವಿಶ್ವಾದ್ಯಂತ ವ್ಯಾಪಕ ಮಾಹಿತಿ ನೀಡಬೇಕಾದುದು ಖಾದಿ ಮತ್ತು ಗುಡಿ ಕೈಗಾರಿಕೆ ಸಂಸ್ಥೆಗೆ ಅತಿ ಮುಖ್ಯ ಎಂದು ಕೆವಿಐಸಿ ಬಲವಾಗಿ ನಂಬುತ್ತದೆ. ಪ್ರಪಂಚದಾದ್ಯಂತ ಅನೇಕ ರಾಯಭಾರಿಗಳು ಮತ್ತು ಗಣ್ಯರು ಖಾದಿ ಕೇಂದ್ರಗಳಿಗೆ ಭೇಟಿ ನೀಡಿದ್ದು ಖಾದಿಯತ್ತ ಆಕರ್ಷಿತರಾಗಿದ್ದಾರೆ.

**ತೀರ್ಮಾನ**

ಖಾದಿ ಸುಧಾರಣೆ ಮತ್ತು ಅಭಿವೃದ್ಧಿ ಯೋಜನೆ (ಕೆಆರ್‌ಡಿಪಿ)ಯ ಅನುಷ್ಠಾನದಲ್ಲಿ ನೈಜ ಖಾದಿ ಸುಧಾರಣೆ ಪ್ರತಿಫಲನವಾಗುತ್ತದೆ. ಈ ಯೋಜನೆ 2010–11 ರಲ್ಲಿ ಆರಂಭವಾಗಿ ನಂತರ ಎಡಿಪಿಯಿಂದ 2013–14 ರಲ್ಲಿ 96 ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಪಡೆಯಿತು. ಆದಾಗ್ಯೂ 2014ರ ಮೇ ತಿಂಗಳವರೆಗೆ ಒಂದೇ ಒಂದು ಚರಕ ಅಥವಾ ಮಗ್ಗವನ್ನು ವಿತರಿಸಿರಲಿಲ್ಲ. ಕಳೆದೆರಡು ವರ್ಷಗಳಲ್ಲಿ 5 ಸಾವಿರದ 323 ಕ್ಕೂ ಹೆಚ್ಚು ಮಗ್ಗಗಳನ್ನು ಮಂಜೂರು ಮಾಡಲಾಗಿದ್ದು 1 ಸಾವಿರದ 350 ಕ್ಕೂ ಹೆಚ್ಚು ಮಗ್ಗಗಳನ್ನು ಪೂರೈಕೆ ಮಾಡಲಾಗಿದೆ. ಅದೇ ರೀತಿ ಸುಮಾರು 27 ಸಾವಿರಕ್ಕೂ ಹೆಚ್ಚು ಚರಕಗಳು ಮಂಜೂರಾಗಿದ್ದು 16 ಸಾವಿರ ಚರಕಗಳು ಪೂರೈಕೆಯಾಗಿವೆ. ಖಾದಿಯ ಗರಿಮೆಯನ್ನು ತಳಮಟ್ಟದಿಂದ ಪುನರ್‌ಸ್ಥಾಪಿಸಿ ಮಹಾತ್ಮಾ ಗಾಂಧಿ ಅವರ ಅಭಿವೃದ್ಧಿ ಭಾರತದ ಗುರಿಯನ್ನು ಸಾಧಿಸಲು ಗ್ರಾಮಗಳಲ್ಲಿ ಉದ್ಯಮಶೀಲತೆ ಮತ್ತು ಸುಸ್ಥಿರತೆಗೆ ಪ್ರೋತ್ಸಾಹ ನೀಡುವಲ್ಲಿ ಕೆವಿಐಸಿ ನಿರತವಾಗಿದೆ. ❑

# ಉತ್ಪನ್ನ, ಸೇವೆಗಳ ಲಭ್ಯತೆ

* ಶಿಶಿರ್ ಸಿನ್ಹಾ



ಈಗ ಅತಿ ಮುಖ್ಯ ಪ್ರಶ್ನೆಯೆಂದರೆ, ಎಂಎಸ್‌ಎಂಇಗಳಿಂದ ಪೂರೈಸಲ್ಪಡುವ ಉತ್ಪಾದಿತ ವಸ್ತುಗಳು ಮತ್ತು ಸೇವೆಗಳು ಮೂಲಭೂತ ಗುಣಮಟ್ಟದ ಪರೀಕ್ಷೆಯನ್ನು ಗೆಲ್ಲಬಲ್ಲವೇ ಎಂಬುದಾಗಿದೆ. ಎಂಎಸ್‌ಎಂಇಗಳು ಬೃಹತ್ ಕೈಗಾರಿಕಾ ನೆಲೆಗಳಿಗೆ ಸರಿಸಮನಾದ ಗುಣಮಟ್ಟದ ಯಾಂತ್ರಿಕತೆಯನ್ನು ಹೊಂದಿಲ್ಲವೆಂಬುದು ನಿಜವಾದರೂ, ಅವುಗಳೊಂದಿಗೆ ಸಹ ಅವು ಸ್ಪರ್ಧಿಸಲೇಬೇಕಾಗಿದೆ.

ಒಂದು ಪದಾರ್ಥವನ್ನು ಉತ್ಪಾದನೆ ಮಾಡುವುದು ಬಹಳ ಮುಖ್ಯವಾದುದು. ಅಷ್ಟೇ ಮುಖ್ಯವಾದುದು, ಉತ್ಪಾದಿಸಿದ ಪದಾರ್ಥವು ಅದನ್ನು ಬಳಕೆ ಮಾಡುವವನನ್ನು ತಲುಪಿದೆಯೇ ಎಂಬುದು. ಉತ್ಪಾದನೆಗೊಂಡ ಪದಾರ್ಥವನ್ನು ಮಾರುಕಟ್ಟೆಗೆ ಕೊಂಡೊಯ್ಯುವ ಅಗತ್ಯ ತುಂಬಾ ಇದೆ. ಮಾರುಕಟ್ಟೆಗೆ ಪ್ರವೇಶ ಪಡೆಯುವ ಅಗತ್ಯ ತುಂಬಾ ಇದೆ. ಆದರೆ ಮಾರುಕಟ್ಟೆಗೆ ಪ್ರವೇಶ ದೊರಕಿಸಿಕೊಳ್ಳುವುದು ಅಷ್ಟು ಸುಲಭವೇ? ಉತ್ತರ ಸರಳವಾದುದಲ್ಲ. ಯಾವುದೇ ದೊಡ್ಡ ಕಂಪನಿಯನ್ನು ವಿಚಾರಿಸಿಕೊಂಡಲ್ಲಿ, ಅವರು ಹೇಳುವುದು ಮಾರುಕಟ್ಟೆಗೆ ಉತ್ತಮ ಪ್ರವೇಶ ದೊರಕಿಸಿಕೊಳ್ಳುವ ಭರವಸೆ ಪಡೆಯಲು, ತಾವು ಲಕ್ಷಗಟ್ಟಲೆ ಹಣವನ್ನು ವ್ಯಯಿಸಬೇಕಾಗುತ್ತದೆ ಎಂದು. ಮಾರುಕಟ್ಟೆಯ ಪ್ರವೇಶಕ್ಕೆ ಒಂದು ನೀಲಿನಕ್ಷೆ ಸಿದ್ಧಪಡಿಸಲು ಅವರು ಮಾರುಕಟ್ಟೆಯ ತಜ್ಞರನ್ನು ಹಣಕೊಟ್ಟು ನೇಮಿಸಿಕೊಳ್ಳಬೇಕಾಗುತ್ತದೆ. ಭಾರೀ ಹಣವುಳ್ಳವರಿಗೆ ಇದೆಲ್ಲಾ ಸುಲಭವಾಗಿ ಕಾಣಿಸಬಹುದು, ಆದರೆ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆದಾರರಿಗೆ ಅಂದರೆ ತೀರಾ ಮಿತಿಯುಳ್ಳ ಸಂಪನ್ಮೂಲವುಳ್ಳವರಿಗೆ? ಖಂಡಿತವಾಗಿಯೂ, ಅವರು ಕೇವಲ ಸ್ಥಳೀಯ ಮಾರುಕಟ್ಟೆ ಮಾತ್ರವಲ್ಲ ಅದರ ಜೊತೆಗೆ ವಿದೇಶಿ ಉತ್ಪಾದಕರನ್ನು ಒಳಗೊಂಡಂತೆ ಇರುವ ಮಾರುಕಟ್ಟೆಯಲ್ಲಿ ತಮ್ಮ ಉತ್ಪಾದಕ ವಸ್ತುಗಳನ್ನು ಕೊಂಡೊಯ್ಯುವುದು ತುಂಬಾ ಕಠಿಣಸಾಧ್ಯ ಕೆಲಸವೇ ಸರಿ. ಹಾಗಾದರೆ ಇದಕ್ಕೆ ಬೇರೆ ಏನಾದರೂ ಹಾದಿಗಳಿವೆಯೇ? ಅದನ್ನು ಚಾಚಿಸುವ ಮೊದಲು ಈ ಮುಂದಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ;

ಎ) ಸೂಕ್ಷ್ಮ, ಸಣ್ಣ, ಮಧ್ಯಮ ಗಾತ್ರದ ಉದ್ದಿಮೆ ಎಂದರೇನು?

ವಿವರ, ಉತ್ತರ ಪಟ್ಟಿ 1 ರಲ್ಲಿದೆ.

ಬಿ) ದಾಖಲೆಗೊಳಪಟ್ಟ ಕಿರು, ಸಣ್ಣ, ಮಧ್ಯಮ ಗಾತ್ರದ ಉದ್ದಿಮೆಗಳ ಒಟ್ಟು ಸಂಖ್ಯೆಗಳು ಎಷ್ಟು?

ದಾಖಲೆಗೊಳಪಟ್ಟ ಕಿರು, ಸಣ್ಣ ಮಧ್ಯಮ ಗಾತ್ರದ ಉದ್ದಿಮೆಗಳ ಒಟ್ಟು ಸಂಖ್ಯೆ 65,91,870, ಇದರಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ದಾಖಲಾಗಿರುವುದು 15,63,974 ಹಾಗೂ ಉದ್ಯಮ ಶೀಲ ಒಪ್ಪಂದ ಅಡಿಯಲ್ಲಿ 21,96,902 ಮತ್ತು ಉದ್ಯೋಗ ಆಧಾರ್ ಒಪ್ಪಂದ ಅಡಿಯಲ್ಲಿ 28,30,994 ಗಳನ್ನು ಒಟ್ಟು ಸಂಖ್ಯೆಯು ಒಳಗೊಂಡಿದೆ.

ಸಿ) ಆರ್ಥಿಕ ವ್ಯವಸ್ಥೆಗೆ ಎಂ.ಎಸ್. ಎಂ.ಇ. ಕೊಡುಗೆಯೇನು? ಭಾರತ ಸರ್ಕಾರದ, ಸಂಖ್ಯಾ ಶಾಸ್ತ್ರೀಯ ಉಗ್ರಾಣಕ್ಕೆ ಸಂಬಂಧಪಟ್ಟ, ಕೇಂದ್ರ ಸಂಖ್ಯಾ ಶಾಸ್ತ್ರ ಕಚೇರಿಯಲ್ಲಿ ಲಭ್ಯವಿರುವ ದತ್ತಾಂಶದ ಪ್ರಕಾರ, ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳ ಕೊಡುಗೆಯು ದೇಶದ ಗ್ರಾಸ್ ವ್ಯಾಲ್ಯೂ ಆಡೆಡ್ (ಜಿ.ವಿ.ಎ.) ನಲ್ಲಿ, 2013–13, 2014–15 ಮತ್ತು 2015–16 ರಲ್ಲಿ ಪ್ರಸಕ್ತ ಬೆಲೆಯಲ್ಲಿ ಕ್ರಮಬದ್ಧವಾಗಿ 32.26%, 31.86% ಮತ್ತು 31.60% ಆಗಿರುತ್ತದೆ ಹಾಗೂ ಗ್ರಾಸ್ ಒಟ್ಟು ದೇಶೀಯ ಉತ್ಪನ್ನ (ಜಿ.ಡಿ.ಪಿ.) ಆಧಾರದ ಮೇಲೆ ದೇಶಕ್ಕೆ ಆಗಿರುವ ಕೊಡುಗೆಯು 2013–14, 2014–15 ಮತ್ತು 2015–16 ರಲ್ಲಿ ಕ್ರಮಬದ್ಧವಾಗಿ ಪ್ರಸ್ತುತ ಬೆಲೆಯಲ್ಲಿ 29.76%, 29.39 ಹಾಗೂ 28.77% ಆಗಿರುತ್ತದೆ.

* ಹಿರಿಯ ಪತ್ರಕರ್ತರು. E-mail : hblshishir@gmail.com

| ಪಟ್ಟಿ 1 : ಕಿರು, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳಿಗೆ ವ್ಯಾಖ್ಯಾನ | |
|---|---|
| **2006 ರ ಕಿರು, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳ ಅಭಿವೃದ್ಧಿ ಕಾಯಿದೆಯ ಏರ್ಪಾಡಿನ ಪ್ರಕಾರ, ಎಂ.ಎಸ್.ಎಂ.ಇ. ಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ.** | |
| **ಉತ್ಪಾದನೆ ಮಾಡುವ ಉದ್ದಿಮೆಗಳು** | **ಸೇವಾ ಉದ್ದಿಮೆಗಳು** |
| ಉತ್ಪಾದನೆಯಲ್ಲಿ ತೊಡಗಿಕೊಂಡಿರುವ ಉದ್ದಿಮೆಗಳು ಅಥವಾ ಸರಕುಗಳ ಉತ್ಪಾದನೆ ಅಥವಾ ಒಂದು ವಿಶಿಷ್ಟ ಹೆಸರು ಅಥವಾ ಲಕ್ಷಣ ಅಥವಾ ಉಪಯುಕ್ತತೆ ಹೊಂದಿರುವ ಅಂತಿಮ ಘಟ್ಟದ ಉತ್ಪಾದಕ ವಸ್ತುವೊಂದಕ್ಕೆ ಮೌಲ್ಯ ಹೆಚ್ಚಿಸುವ ಪ್ರಕ್ರಿಯೆಯಲ್ಲಿ ಬಳಸಲ್ಪಟ್ಟ ಪ್ಲಾಂಟ್ ಅಥವಾ ಯಂತ್ರಗಳು. ಪ್ಲಾಂಟ್ ಮತ್ತು ಯಂತ್ರಗಳಿಗೆ ಬಂಡವಾಳ ಹೂಡಿದ್ದನ್ನು ಉತ್ಪಾದನಾ ಉದ್ದಿಮೆ ಎಂದು ವ್ಯಾಖ್ಯಾನಿಸ ಲಾಗುತ್ತದೆ. | ಸೇವೆಯನ್ನು ಒದಗಿಸುವ ಅಥವಾ ನೀಡುವುದರಲ್ಲಿ ತೊಡಗಿರುವ ಉದ್ದಿಮೆಗಳು ಮತ್ತು ಉಪಕರಣಗಳಿಗೆ ಸಂಬಂಧಿಸಿದಂತೆ ಬಂಡವಾಳ ಹೂಡಿದ್ದಕ್ಕೆ ಸಂಬಂಧಿಸಿ ವ್ಯಾಖ್ಯಾನ ಮಾಡಬಹುದು. |

ಡಿ) ಉದ್ಯೋಗಕ್ಕೆ ಸಂಬಂಧಿಸಿದಂತೆ ಎಂ.ಎಸ್.ಎಂ.ಇ. ಕೊಡುಗೆ ಏನು ?

ಎಂಎಸ್‌ಎಂಇಗೆ ಸಂಬಂಧಿಸಿದ ನಾಲ್ಕನೇ ಅಖಿಲ ಭಾರತೀಯ ಗಣತಿಯ ಪ್ರಕಾರ (ಇದಕ್ಕೆ ಸಂಬಂಧಿಸಿದ ಮೂಲ ಪರಾಮರ್ಶೆಯು 2006–07 ವರ್ಷದ್ದಾಗಿದ್ದು, ದತ್ತಾಂಶವು 2009 ರವರೆಗೆ ಸಂಗ್ರಹವಾಗಿದ್ದು, ಇದರ ಫಲಿತಾಂಶಗಳು 2011–12 ರಲ್ಲಿ ಪ್ರಕಟವಾಗಿದೆ) ಅದರ ಜೊತೆಗೆ ಕೇಂದ್ರ ಸಂಖ್ಯಾ ಶಾಸ್ತ್ರೀಯ ಸಂಸ್ಥೆಯು ನಿರ್ವಹಣೆ ಮಾಡಿದ 2005 ರ ಆರ್ಥಿಕತೆಯ ಗಣತಿಯಿಂದ ಪಡೆದುಕೊಂಡ ದತ್ತಾಂಶದ ಪ್ರಕಾರ, ಎಂಎಸ್‌ಎಂಇ ಘಟಕದಲ್ಲಿನ ಒಟ್ಟು ಉದ್ಯೋಗವು 8.05 ಕೋಟಿಗಳಷ್ಟು ಇರುತ್ತದೆ. ಇಷ್ಟಾಗಿ, ಕೈಗಾರಿಕಾ ಮಂಡಳಿ ಹಾಗೂ ಭಾರತೀಯ ಕೈಗಾರಿಕೆಗಳ ಮಹಾ ಮಂಡಳಿ (ಸಿಐಐ) ಅಂದಾಜಿಸುವಂತೆ, ಎಂಎಸ್‌ಎಂಇ ಉದ್ಯೋಗ ಒದಗಿಸುವ ಸಾಮರ್ಥ್ಯ ಹೊಂದಿರುವುದು 12 ಕೋಟಿಯ ಹತ್ತಿರಕ್ಕೆ ಬರುತ್ತದೆ.

ಇ) ಒಟ್ಟಾರೆ ರಫ್ತಿಗೆ ಸಂಬಂಧಪಟ್ಟಂತೆ ಎಂ.ಎಸ್.ಎಂ.ಇ. ಪಾಲು ಎಷ್ಟಿದೆ?

ಅಂದಾಜು 45% ಇರಬಹುದು.

ಮೇಲೆ ಹೇಳಿದ ವಾಸ್ತವಾಂಶಗಳಿಂದ, ಎಂ.ಎಸ್.ಎಂ.ಇ. ಎಂಬುದು ಆರ್ಥಿಕ ವ್ಯವಸ್ಥೆಯಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ ಎಂಬುದು ತುಂಬಾ ಸ್ಪಷ್ಟವಾಗಿ ತಿಳಿದು ಬರುತ್ತದೆ.

ಒಂದು ಪಕ್ಷ ನಾವು ಗಾತ್ರವನ್ನು ಅಲಕ್ಷಿಸಿದಲ್ಲಿ, ಎಂಎಸ್‌ಎಂಇ ಎಂಬುದು ಇತರೆ ಯಾವುದೇ ಉದ್ದಿಮೆಗಳಂತೆ ಇರುವುದಾಗಿದ್ದು, ಅವು ಕೂಡ ಸ್ಥಳೀಯ ಹಾಗೆಯೇ ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನು ತಟ್ಟುವಂಥ ಅಗತ್ಯ ಇದ್ದೇ ಇದೆ. ಮಾರುಕಟ್ಟೆಯ ಕಾರ್ಯಾಚರಣೆಗೆ ಒಳಪಡುವಲ್ಲಿ ಅವುಗಳಿಗೆ ಮಿತಿಯುಳ್ಳ ಸಂಪನ್ಮೂಲಗಳು ಇರುವುದರಿಂದ, ಅವು ತಮಗೆ ಬೇಕಾದ ಎಲ್ಲಾ ರೀತಿಯ ಬೆಂಬಲಕ್ಕೆ ಸರ್ಕಾರವನ್ನು ಅವಲಂಬಿಸಬೇಕಾಗಿದೆ ಈಗಿರುವಂತೆ ಹೇಳುವುದಾದಲ್ಲಿ, ಕಾರ್ಯಯೋಜನೆಗಳಿದ್ದು ಅವು ಎಂ.ಎಸ್.ಎಂ.ಇ. ಗೆ ಅದರಲ್ಲೂ ಹೆಚ್ಚಿನ ಆದ್ಯತೆ ಯನ್ನೊಳಗೊಂಡಂತೆ ಎಂಎಸ್‌ಇ (ಸೂಕ್ಷ್ಮ ಮತ್ತು ಸಣ್ಣ ಉದ್ದಿಮೆಗಳಿಗೆ ಸಹಾಯ ಮಾಡುವ ಉದ್ದೇಶ ಹೊಂದಿದ್ದು, ಅವು ಸ್ಥಳೀಯ ಮತ್ತು ಅಂತರ ರಾಷ್ಟ್ರೀಯ ಮಾರುಕಟ್ಟೆಗಳನ್ನು ನಿರ್ಧರಿಸ ಬಲ್ಲಂತವುಗಳಾಗಿವೆ.

| ಉದ್ದಿಮೆಗಳು | ಸ್ಥಾವರ ಮತ್ತು ಯಂತ್ರಗಳಿಗೆ ಬಂಡವಾಳ |
|---|---|
| ಸೂಕ್ಷ್ಮ | ರೂ. 25 ಲಕ್ಷದವರೆಗೆ |
| ಸಣ್ಣ | ರೂ. 25 ಲಕ್ಷದಿಂದ 5 ಕೋಟಿವರೆಗೆ |
| ಮಧ್ಯಮ | ರೂ. 5 ಕೋಟಿಯಿಂದ 10 ಕೋಟಿಯವರೆಗೆ |
| ಮಧ್ಯಮ | ರೂ. 5 ಕೋಟಿಯಿಂದ 10 ಕೋಟಿಯವರೆಗೆ |
| ಉದ್ದಿಮೆಗಳು | ಉಪಕರಣದ ಮೇಲಿನ ಬಂಡವಾಳ |
| ಸೂಕ್ಷ್ಮ | 10 ಲಕ್ಷದವರೆಗೆ |
| ಸಣ್ಣ | 10 ಲಕ್ಷದಿಂದ 2 ಕೋಟಿ ರೂ. ವರೆಗೆ |
| ಮಧ್ಯಮ | ರೂ. 2 ಕೋಟಿ ಯಿಂದ 5 ಕೋಟಿ |

### ಮಾರುಕಟ್ಟೆಗೆ ಸಹಕರಿಸುವ ಯೋಜನೆ

ಈ ಯೋಜನೆಯು ಎಂ.ಎಸ್.ಎಂ. ಗಳಿಗೆ ಸಹಕರಿಸುವ ಗುರಿ ಹೊಂದಿದ್ದು, ಸ್ಥಳೀಯ ಹಾಗೂ ಅಂತರ ರಾಷ್ಟ್ರೀಯ ಪ್ರದರ್ಶನಗಳು, ವಾಣಿಜ್ಯ ಉತ್ಸವಗಳು, ಗ್ರಾಹಕ ಹಾಗೂ ಮಾರಾಟಗಾರರ ಸಭೆಗಳು, ಪ್ರಚಾರ / ಸೆಮಿನಾರ್‌ಗಳು ಮತ್ತು ಒಕ್ಕೂಟ ರಚನೆಗಳು – ಇಂಥವುಗಳಲ್ಲಿ ಭಾಗವಹಿಸಲು ಸಹಾಯ ಮಾಡುತ್ತದೆ. ಎಂಎಸ್‌ಎಂಇ ಸಚಿವಾಲಯದ ಒಂದು ಸಾರ್ವಜನಿಕ ಘಟಕದ ಉದ್ದಿಮೆಯೆನಿಸಿರುವ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಕಾರ್ಪೊರೇಶನ್ (ಎನ್‌ಎಸ್‌ಐಸಿ) ಮೂಲಕ ಇದು ಜಾರಿಗೊಂಡಿದೆ. ಈಗ ತತ್ ಕ್ಷಣದ ಅಗತ್ಯವೆಂದರೆ, ಅದು ಎಂಎಸ್‌ಎಂಇಯ ಇಡೀ ಘಟಕಕ್ಕೆ (ಸೇವಾ ಘಟಕವನ್ನೊಳಗೊಂಡಂತೆ), ಗ್ರಾಮೀಣ ಹಾಗೂ ಸೂಕ್ಷ್ಮ ಉದ್ಯಮಗಳಿಗೆ ವಿಶೇಷ ಒತ್ತು ನೀಡುತ್ತಾ, ಅವು ತಮ್ಮ ಸವಾಲುಗಳನ್ನು ಸದಾವಕಾಶಗಳಾಗಿ ಪರಿವರ್ತಿಸಿಕೊಳ್ಳುವಂತೆ ಬಲವರ್ಧನೆಗೊಳಿಸುವ ಕ್ರಮಗಳನ್ನು ಕೈಗೊಳ್ಳುವ ಮೂಲಕ, ಅವು ಹೊಸ ಎತ್ತರಕ್ಕೆ ಏರುವ ಹಾಗೆ ಅವುಗಳಿಗೆ ಸುಸ್ಥಿರತೆಯನ್ನು ಹಾಗೂ ಬೆಂಬಲವನ್ನು ಒದಗಿಸಬೇಕಾಗಿದೆ. ಈ ರೀತಿಯಲ್ಲಿ, ಈ ಕಾರ್ಯ ಯೋಜನೆಯಲ್ಲಿ ಮಧ್ಯಮ ಗಾತ್ರದ ಉದ್ದಿಮೆಗಳೂ ಗುರಿ ಸಾಧನೆಯ ಫಲಾನುಭವಿಗಳಾಗಿ ಒಳಗೊಂಡಿದ್ದಾಗ್ಯೂ, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ಸೂಕ್ಷ್ಮ ಹಾಗೂ ಸಣ್ಣ ಗಾತ್ರದ ಉದ್ದಿಮೆಗಳಿಗೆ ಸಂಬಂಧಿಸಿದ ಉತ್ಪಾದಕ ವಸ್ತುಗಳು ಮತ್ತು ಸೇವೆಗಳನ್ನು ಮಾರುಕಟ್ಟೆಗೊಳಪಡಿಸುವುದಕ್ಕೆ ವಿಶೇಷ ಆದ್ಯತೆ ನೀಡಲಾಗುವುದು.

| ಪಟ್ಟಿ 1 : ಎಂ.ಎಸ್.ಇ. ಗಳಿಂದ ಸಂಗ್ರಹಣೆ (ಸಿ.ಪಿ.ಎಸ್.ಇ ಗಳಿಂದ ದೊರೆತ ವರದಿಯಂತೆ / ಕೋಟಿ ರೂಪಾಯಿಗಳಲ್ಲಿ ) | | |
|---|---|---|
| ವರ್ಷ | ಒಟ್ಟು ಸಂಗ್ರಹಣೆ (ಎಸ್‌ಸಿ / ಎಸ್‌ಟಿ ಮಾಲಿಕತ್ವದ ಎಂ.ಎಸ್.ಎಂ.ಇ. ಸೇರಿ) | ಎಂ.ಎಸ್.ಎಂ.ಇ ಗಳಿಂದ |
| 2014–15 | (133 ಸಿಪಿಎಸ್‌ಯು) 131766.86 | 15300.57 |
| 2015–16 | (116 ಸಿಪಿಎಸ್‌ಯು) 134848.14 | 18246.15 |
| 2016–17 | (60 ಸಿಪಿಎಸ್‌ಯು ಗಳು) 55291.64 | 13288.96 |

### ಯೋಜನೆಯ ಧ್ಯೇಯೋದ್ದೇಶಗಳು ಹೀಗಿವೆ

* ಎಂ.ಎಸ್.ಎಂ.ಇ. ಗಳ ಮಾರಾಟಕ್ಕೆ ಒಳಪಡಿಸುವಿಕೆಯ ಸಾಮರ್ಥ್ಯಗಳನ್ನು ಹಾಗೂ ಸ್ಪರ್ಧಾತ್ಮಕತೆಯನ್ನು ವಿಸ್ತೀರ್ಣಗೊಳಿಸುವುದು. * ಎಂಎಸ್‌ಎಂಇ ಗಳ ದಕ್ಷತೆಯನ್ನು ಪ್ರದರ್ಶನಕ್ಕೆ ಒಳಪಡಿಸುವುದು. * ಈಗ ಚಲನ ಶೀಲ ವಾಗಿರುವ ಮಾರುಕಟ್ಟೆಯ ಸ್ಥಿತಿಗತಿಯನ್ನೂ, ಅವುಗಳ ಚಟುವಟಿಕೆಯ ಮೇಲೆ ಆಗುತ್ತಿರುವ ಪರಿಣಾಮಗಳನ್ನೂ ಗಮನಿಸಿ, ಎಂ.ಎಸ್. ಎಂ.ಇ.ಗಳನ್ನೂ ಸಕಾಲಕ್ಕೇರಿಸುವುದು. ಎಂ.ಎಸ್.ಎಂ.ಇ. ಗಳು ತಮ್ಮ ಉತ್ಪಾದಕ ವಸ್ತುಗಳು ಮತ್ತು ಸೇವೆಗಳ ಮಾರುವ ಉದ್ದೇಶಕ್ಕೆ ಒಕ್ಕೂಟ ರಚಿಸಿಕೊಳ್ಳುವುದಕ್ಕೆ ಅವಕಾಶಮಾಡಿಕೊಡುವುದು. * ಬೃಹತ್ ಸಾಂಸ್ಥಿಕ ಗ್ರಾಹಕರೊಂದಿಗೆ ಎಂ.ಎಸ್.ಎಂ.ಇ ಗಳು ಪರಸ್ಪರ ಸಂವಾದ ಮಾಡಿಕೊಳ್ಳಲು ವೇದಿಕೆಯನ್ನು ಒದಗಿಸುವುದು. * ಸರ್ಕಾರದ ಹಲವಾರು ಕಾರ್ಯಕ್ರಮಗಳನ್ನು ಎಲ್ಲೆಡೆ ಪ್ರಸಾರ ಮತ್ತು ಪ್ರಚಾರ ಮಾಡುವುದು. * ಕಿರು, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳ ಮಾರುಕಟ್ಟೆಯ ಕೌಶಲಗಳನ್ನು ಸಂಪತ್ಭರಿತಗೊಳಿಸುವುದು.

### ಮೇಲ್ದರ್ಜೆಗೇರಿಸುವ ಪದ್ಧತಿ

**ಸ್ಥಳೀಯ ಮಾರುಕಟ್ಟೆ :**

ಇಲ್ಲಿ, ರಾಜ್ಯ / ಜಿಲ್ಲಾ ಮಟ್ಟದ ಸ್ಥಳೀಯ ಪ್ರದರ್ಶನಗಳಲ್ಲಿ / ವಾಣಿಜ್ಯೋತ್ಸವಗಳಲ್ಲಿ ಭಾಗವಹಿಸುವುದಕ್ಕೆ ಆರ್ಥಿಕ ಸಹಾಯ ದೊರೆಯುತ್ತದೆ. ಈ ವ್ಯವಸ್ಥೆಯು ಈ ಮುಂದಿನ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ :

* ಉತ್ಪಾದನೆ ಮಾಡುವ ಎಂ.ಎಸ್. ಎಂ.ಇ. ಗಳಿಗೆ ಸ್ಥಳೀಯ ಹಾಗೂ ಹೊರದೇಶಗಳ ಮಾರುಕಟ್ಟೆಯನ್ನು ತಲುಪುವಲ್ಲಿ ಹಾಗೂ ಅಭಿವೃದ್ಧಿಪಡಿಸುವಲ್ಲಿ ಅವುಗಳ ಪ್ರಯತ್ನಗಳಿಗೆ ಪ್ರೋತ್ಸಾಹ ನೀಡುವುದು. * ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ಪಾದಿತ ವಸ್ತುಗಳ ಮಾರಾಟ ಸಾಧ್ಯತೆಯನ್ನು ಹೆಚ್ಚಿಸುವ ಸಲುವಾಗಿ ಎಂ.ಎಸ್.ಎಂ.ಇ. ಗಳು ಬಾರ್ ಕೋಡಿಂಗ್ ಅಳವಡಿಸಿಕೊಳ್ಳುವುದನ್ನು ಪ್ರೋತ್ಸಾಹಿಸುವುದು. ಎಂ.ಸ್.ಎಂ.ಇ. ಗಳ ಮಾರುಕಟ್ಟೆ ಸಂಪರ್ಕವನ್ನು ವಿಶೇಷವಾಗಿ ಸಾರ್ವಜನಿಕ ಸಂಗ್ರಹಣಾ ಕಾಯಿದೆಯನ್ನು ಗಮನದಲ್ಲಿಟ್ಟುಕೊಂಡು ಸೌಲಭ್ಯ ಒದಗಿಸುವುದು. ಎಂ.ಎಸ್.ಎಂ.ಇ. ಘಟಕಕ್ಕೆ ಪ್ರಸ್ತುತವೆನಿಸುವ ಮಾರುಕಟ್ಟೆ ಮಾಡುವಿಕೆ, ಪ್ಯಾಕ್ ಮಾಡುವುದು – ಇಂತಹ ವಿಷಯಗಳ ಬಗ್ಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವರ್ಕ್ ಶಾಪ್ / ಸೆಮಿನಾರ್‌ಗಳನ್ನು ಆಯೋಜಿಸುವ ಮೂಲಕ, ಮಾರುಕಟ್ಟೆಯಲ್ಲಿ ಪ್ಯಾಕ್ ಮಾಡುವುದರ ಪ್ರಾಧಾನ್ಯತೆ, ತೀರಾ ಇತ್ತೀಚಿನ ಪ್ಯಾಕ್ ಮಾಡುವ ತಂತ್ರಜ್ಞಾನ, ಆಮದು ಮತ್ತು ರಫ್ತು ಸಂಬಂಧದಲ್ಲಿ ಕಾಯಿದೆ ನೀತಿ ಮತ್ತು ಪ್ರಕ್ರಿಯೆ, ಅಂತರ ರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಎಂ.ಎಸ್.ಎಂ.ಇ.ಗಳಿಗೆ ಒಂದು ಅರಿವು ಹುಟ್ಟಿಸಿ, ಶಿಕ್ಷಣ ನೀಡುವುದು. ಈ ಒಂದು ಸೌಲಭ್ಯದ ಮೂಲಕ ಆರ್ಥಿಕ ಬೆಂಬಲವನ್ನು ಪಡೆದುಕೊಳ್ಳಲು ಎಂ.ಎಸ.ಇ. ಗಳು ಸರ್ಕಾರದೊಂದಿಗೆ ದಾಖಲಿಸುವ ಅಗತ್ಯವಿದೆ. ಎಂ.ಎಸ್.ಎಂ.ಇ. ಅಭಿವೃದ್ಧಿ ಸಂಸ್ಥೆ (ಎಂ.ಎಸ್.ಎಂ.ಇ. – ಡಿ.ಐ.) ಯು ಈ ಸೌಲಭ್ಯವನ್ನು ಜಾರಿಗೊಳಿಸುವ ಜವಾಬ್ದಾರಿ ಹೊತ್ತಿದೆ. ಒಂದು ಸಮಿತಿಯು ಸ್ಥಳೀಯ ವಾಣಿಜ್ಯೋತ್ಸವ / ಪ್ರದರ್ಶನವನ್ನು ಆಯ್ಕೆ ಮಾಡಲಿದ್ದು ಅದರಲ್ಲಿ ಎಂ.ಎಸ್. ಎಂ.ಇ.ಗಳು ಭಾಗವಹಿಸಬಹುದಾಗಿದೆ.

ಎಂ.ಎಸ್.ಎಂ.ಇ. – ಡಿ.ಐ. ಛೇರ್ಮನ್‌ರು ಈ ಸಮಿತಿಯ ನಿರ್ದೇಶಕರೆಂಬ ಮುಖ್ಯಸ್ಥರಾಗಿದ್ದು, ಸಂಸ್ಥೆಯ ಹಿರಿಯ ಅಧಿಕಾರಿಗಳು ಮತ್ತು ಕೈಗಾರಿಕೆಯ ಸಂಘ – ಸಂಸ್ಥೆಗಳ ಪದಾಧಿಕಾರಿಗಳು ಇದರ ಸದಸ್ಯರಾಗಿರುತ್ತಾರೆ. ಒಮ್ಮೆ ಈ ಸಮಿತಿಯು ಸ್ಥಳೀಯ ಉತ್ಸವ ಮತ್ತು ಪ್ರದರ್ಶನಗಳ ಪಟ್ಟಿಯನ್ನು ಸಿದ್ಧಪಡಿಸಿದ ನಂತರ, ಈ ಪಟ್ಟಿಯನ್ನು ಅಂತಿಮ ಅನುಮೋದನೆಗೆ ಅಭಿವೃದ್ಧಿ ಕಮಿಷನರ್ ಕಚೇರಿ ಅಥವಾ ಎಂ.ಎಸ್. ಎಂ.ಇ. ಡಿಸಿಯವರಿಗೆ ಕಳುಹಿಸಲಾಗುವುದು. ಒಂದು ಅನುಮೋದಿತ ಮೇಳ / ಪ್ರದರ್ಶನಕ್ಕೆ ಕಿರು ಹಾಗೂ ಸಣ್ಣ ಗಾತ್ರದ ಉದ್ದಿಮೆದಾರರನ್ನು ಎಂ.ಎಸ್.ಎಂ.ಇ – ಡಿ ಯು ಹತ್ತು ಗರಿಷ್ಠ ಸಂಖ್ಯೆಯಷ್ಟನ್ನು ಮಾತ್ರ ಶಿಫಾರಸ್ಸು ಮಾಡಬಹುದಾಗಿದೆ. ಇದಕ್ಕೆ ಸಂಬಂಧಿಸಿದ ಆಹ್ವಾನವು "ಮೊದಲು ಬಂದವರಿಗೆ ಮೊದಲ ಆದ್ಯತೆ' ಆಧಾರದ ಮೇಲೆ ಅವಕಾಶ ನೀಡಲಾಗುತ್ತದೆ. ವಾಣಿಜ್ಯೋತ್ಸವ / ಪ್ರದರ್ಶನಗಳಿಗೆ ಎಂ.ಎಸ್.ಇ. ಗಳ ಭಾಗವಹಿಸುವಿಕೆಯು, ಎಂ.ಎಸ್.ಎಂ.ಇ. – ಡೈರೆಕ್ಟರ್ ಒಂದಕ್ಕಿಂತ ಹೆಚ್ಚಿನವರ ಮೂಲಕ ಆಗುವ ಸಾಧ್ಯತೆಯಿದ್ದು, ಅಂತಿಮ ಅನುಮೋದನೆಯು ಎಂ.ಎಸ್. ಎಂ.ಇ. ಡಿಸಿ ಯಿಂದ ನೀಡಲ್ಪಡುತ್ತದೆ ಮತ್ತು ಎಂ.ಎಸ್.ಎಂ.ಇ.ಗಳ ಭಾಗವಹಿಸುವಿಕೆಯ ಗರಿಷ್ಠ ಸಂಖ್ಯೆಯು, ಎಂಎಸ.ಇ. ಘಟಕಕ್ಕೆ ಸಂಬಂಧಿಸಿದ ಉಪಯುಕ್ತತೆ ಮತ್ತು ಗಾತ್ರವನ್ನವಲಂಬಿಸಿ ನಿರ್ಧಾರಕ್ಕೆ ಒಳಪಡುತ್ತದೆ. ಎಂ.ಎಸ್.ಇ.ಗಳ ಆರ್ಥಿಕ ಸಹಾಯವು; ಸ್ಥಳಾವಕಾಶ ಬಾಡಿಗೆ : ಸಾಮಾನ್ಯ ವರ್ಗಕ್ಕೆ ಸೇರುವ ಘಟಕಗಳ ವೆಚ್ಚಕ್ಕೆ ಸಂಬಂಧಪಟ್ಟಂತೆ 80% ರಷ್ಟನ್ನೂ ಮತ್ತು ಎಸ್.ಸಿ. /ಎಸ್.ಟಿ. / ಮಹಿಳೆಯರು /ಎನ್‌ಇಆರ್ / ಪಿಎಚ್ ಘಟಕಗಳಿಗೆ 100% ರಷ್ಟನ್ನೂ, ಗರಿಷ್ಠ ಮಿತಿ 20000 ಇಲ್ಲವೇ ವಾಸ್ತವ ವೆಚ್ಚಗಳಲ್ಲಿ ಯಾವುದು ಕಡಿಮೆ ಇದೆಯೋ ಅದು ಅನ್ವಯಿಸುತ್ತದೆ.

**ಸಂಭವನೀಯ ಅಥವಾ ಅನಿರೀಕ್ಷಿತ ವೆಚ್ಚ :** ಘಟಕಗಳ ಎಲ್ಲಾ ವರ್ಗದವರಿಗೂ ಎಲ್ಲ ವೆಚ್ಚಕ್ಕೆ ಸಂಬಂಧಪಟ್ಟಂತೆ 100% ಸಂಭವನೀಯ ವೆಚ್ಚವನ್ನು ನೀಡುವುದಾದರೂ, ಇದರ ಗರಿಷ್ಠ ಮಿತಿ ಎಲ್ಲವನ್ನೊಳಗೊಂಡಂತೆ 10000/ ರೂಪಾಯಿಗಳು ಅಥವಾ ವಾಸ್ತವ ವೆಚ್ಚ,

ಇವುಗಳಲ್ಲಿ ಯಾವುದು ಕಡಿಮೆ ಇರುತ್ತದೋ ಅದನ್ನು ನೀಡಲಾಗುವುದು. ಉದ್ದಿಮೆದಾರ ತಾನು ಮಾಡಿದ ವೆಚ್ಚವನ್ನು ಹಿಂಪಡೆಯಲು ಈ ವ್ಯವಸ್ಥೆಯಲ್ಲಿ ಅವಕಾಶವಿದ್ದು, ಅದನ್ನು ವರ್ಷದಲ್ಲಿ ಗರಿಷ್ಠ ಎರಡು ಘಟನೆಗಳಿಗೆ ಮಾತ್ರ ಎಂದು ಮಿತಿಗೊಳಿಸಲಾಗಿದೆ. ಆರ್ಥಿಕ ಸಹಾಯದ ಪ್ರಮಾಣವನ್ನು, ಒಂದು ಘಟನೆಗೆ ಗರಿಷ್ಠ 10 ಲಕ್ಷ ಎಂದು ಮಿತಿಗೊಳಿಸಲಾಗಿದೆ .

*** ಅಂತಾರಾಷ್ಟ್ರೀಯ ಮಾರುಕಟ್ಟೆ :**

ಈ ಸೌಲಭ್ಯವು ಸೂಕ್ಷ್ಮ ಹಾಗೂ ಸಣ್ಣ ಗಾತ್ರದ ಉದ್ದಿಮೆಗಳು (ಎಂ.ಎಸ್.ಎಂ.ಇ) ಉತ್ಪಾದನೆ ಮಾಡುವುದಕ್ಕೂ ಪ್ರೋತ್ಸಾಹ ನೀಡುವ ಗುರಿಯಿಟ್ಟುಕೊಂಡಿದ್ದು, ಅವು ಹೊರ ರಾಷ್ಟ್ರಗಳಲ್ಲಿರುವ ಮಾರುಕಟ್ಟೆಯನ್ನು ತಟ್ಟುವ ಹಾಗೂ ಅಭಿವೃದ್ಧಿಗೊಳಿಸುವ ಅವುಗಳ ಪ್ರಯತ್ನಕ್ಕೆ ಪ್ರೋತ್ಸಾಹ ನೀಡುತ್ತವೆ.

ಇಲ್ಲಿಯೂ ಸಹ ಎಂ.ಎಸ್.ಎಂ.ಇ. – ಅಭಿವೃದ್ಧಿ ಸಂಸ್ಥೆಗಳು ಸೌಲಭ್ಯವನ್ನು ಜಾರಿಗೊಳಿಸುತ್ತವೆ. ಅಂತಾರಾಷ್ಟ್ರೀಯ ವಾಣಿಜ್ಯ ಉತ್ಸವಗಳು / ಪ್ರದರ್ಶನಗಳು ಡಿಸಿ ಕಚೇರಿಯಿಂದ (ಎಂ.ಎಸ್.ಎಂ.ಇ) ತೀರ್ಮಾನಗೊಳ್ಳಲಿದ್ದು, ಒಂದು ಎಂ.ಎಸ್. ಎಂ.ಇ. ಯು ಆನ್ ಲೈನ್‌ನಲ್ಲಿ ಇಲ್ಲವೇ ನಿರ್ದಿಷ್ಟ ಅರ್ಜಿ ನಮೂನೆಯಲ್ಲಿ ತುಂಬಾ ಮೊದಲೇ ಅರ್ಜಿಯನ್ನು ಅಂದರೆ ಕನಿಷ್ಠ ಎರಡು ತಿಂಗಳ ಮುಂಚೆ ಭಾಗವಹಿಸುವುದಕ್ಕೆ ಹಾಕಿಕೊಳ್ಳಬೇಕು. ಭಾಗವಹಿಸುವುದಕ್ಕೆ ಸಂಬಂಧಪಟ್ಟ ಆಹ್ವಾನವು "ಮೊದಲು ಬಂದವರಿಗೆ ಮೊದಲ ಆದ್ಯತೆ" ಆಧಾರದ ಮೇಲೆ ದೊರಕುತ್ತದೆ.

ಅಂತಾರಾಷ್ಟ್ರೀಯ ವಾಣಿಜ್ಯ ಉತ್ಸವ / ಪ್ರದರ್ಶನಗಳಿಗೆ ಭಾಗವಹಿಸುವುದಕ್ಕೆ ಉತ್ಪಾದಿತ ವಸ್ತುಗಳ ಗುಣಮಟ್ಟವು ಗಣನೀಯ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು, ಭಾಗವಹಿಸುವ ಘಟಕಗಳು ಐಎಸ್‌ಓ 9000 / 14000 ಸರ್ಟಿಫಿಕೇಟ್ ಅನ್ನು ಹೊಂದಿರುವುದು ಅಪೇಕ್ಷಣೀಯವಾದುದು. ಆಯ್ಕೆ ಸಮಿತಿಯೊಂದು ಮೊದಲು ಹೆಸರುಗಳುಳ್ಳ ಹ್ರಸ್ವ ಪಟ್ಟಿಯೊಂದನ್ನು ಸಿದ್ಧಪಡಿಸಿಯಾದ ಮೇಲೆ, ಎಂ.ಎಸ್. ಎಂ.ಇ. ಡಿಸಿ ಕಚೇರಿ ಅನುಮೋದಿಸುತ್ತದೆ. ಆರ್ಥಿಕ ಸಹಾಯವನ್ನು ಆಯ್ಕೆಗೊಂಡ ಎಂ.ಎಸ್.ಎಂ.ಇ ಗಳಿಗೆ ಕೊಡಲಾಗುತ್ತದೆ.



**ಸ್ಥಳಾವಕಾಶ ಬಾಡಿಗೆ :** ಸಾಮಾನ್ಯ ವರ್ಗದ ಘಟಕಗಳಿಗೆ 80% ಅನ್ನೂ, ಎಸ್‌ಸಿ/ ಎಸಟಿ / ಎನ್‌ಇಆರ್ / ಹೆಂಗಸರು – ಇವರ ಯೂನಿಟ್‌ಗಳಿಗೆ 100% ಸ್ಥಳಾವಕಾಶ ಬಾಡಿಗೆ ದೊರಕಲಿದ್ದು, ಇದರ ಗರಿಷ್ಠ ಮಿತಿಯು ರೂಪಾಯಿ ಒಂದು ಲಕ್ಷ ಇಲ್ಲವೇ ವಾಸ್ತವವಾಗಿ ನೀಡಲಾದ ಬಾಡಿಗೆಯಲ್ಲಿ ಯಾವುದು ಕಡಿಮೆ ಇರುತ್ತದೊ ಅದನ್ನು ನೀಡಲಾಗುವುದು.

**ವಿಮಾನ ಯಾನ ವೆಚ್ಚ :** ವಿಮಾನ ಪ್ರಯಾಣಕ್ಕೆ ಸಂಬಂಧಪಟ್ಟಂತೆ ,ಎಕಾನಮಿ ಕ್ಲಾಸ್ ನ ವೆಚ್ಚವನ್ನು ಘಟಕಗಳ ಎಲ್ಲಾ ವರ್ಗ ದವರಿಗೆ 100% ಕೊಡುವ ಸೌಲಭ್ಯ ಇದೆಯಾದರೂ, ಅದರ ಗರಿಷ್ಠ ಮಿತಿ 1.25 ಲಕ್ಷ ರೂಪಾಯಿ ಇಲ್ಲವೇ ವಾಸ್ತವ ವೆಚ್ಚ ಎಷ್ಟನ್ನು ನೀಡಲಾಗಿದೆಯೋ – ಇವುಗಳಲ್ಲಿ ಯಾವುದು ಕಡಿಮೆ ಇರುತ್ತದೆಯೋ ಅದನ್ನು ನೀಡಲಾಗುವುದು. (ಪ್ರತಿ ಭಾಗವಹಿಸಿದ ಉದ್ದಿಮೆಗೆ ಸಂಬಂಧಪಟ್ಟಂತೆ ಒಬ್ಬ ಪ್ರತಿನಿಧಿಗೆ ಮಾತ್ರ). ಎಂ.ಎಸ್.ಎಂ.ಇ. ಗಳಿಗೆ ಅಂತಾರಾಷ್ಟ್ರೀಯ ವಾಣಿಜ್ಯೋತ್ಸವ / ಪ್ರದರ್ಶನಗಳಲ್ಲಿ ಭಾಗವಹಿಸಿದ ಉದ್ದೇಶಕ್ಕೆ ಈ ವ್ಯವಸ್ಥೆಯ ಅಡಿಯಲ್ಲಿ ಆರ್ಥಿಕ ಪ್ರಯೋಜನ ಪಡೆದುಕೊಳ್ಳಲು ಒಪ್ಪಿಗೆ ನೀಡಲಾಗಿದೆ ಮತ್ತು ಅವರು ಮಾಡಿರುವ ವೆಚ್ಚವನ್ನು ಹಿಂಪಡೆದುಕೊಳ್ಳಲು, ಅವರು ಎಷ್ಟೇ ಘಟಕಗಳನ್ನು ಹೊಂದಿದ್ದರೂ ಕೂಡ ವರ್ಷಕ್ಕೆ ಒಮ್ಮೆ ಮಾತ್ರ ಉಪಯೋಗಿಸಬಹುದಾಗಿದೆ. ಹಾಗೆಯೇ, ಒಬ್ಬ ವ್ಯಕ್ತಿ ಒಂದು ಆರ್ಥಿಕ ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಎಂ.ಎಸ.ಇ. ಗಳಲ್ಲಿ ಪ್ರತಿನಿಧಿಸುವಂತಿಲ್ಲ. ಆರ್ಥಿಕ ಸಹಾಯದ ಪ್ರಮಾಣವು , ಒಂದು ಘಟನೆಗೆ ಗರಿಷ್ಟ ರೂಪಾಯಿ 25 ಲಕ್ಷ ಮಾತ್ರ ಎಂಬ ಮಿತಿಯನ್ನು ಹಾಕಲಾಗಿದೆ.

**ಬಾರ್ ಕೋಡ್ ಪಡೆದುಕೊಂಡ ನಂತರ ಹಣ ಹಿಂಪಡೆಯುವ ಬಗ್ಗೆ**

"ಬಾರ್ ಕೋಡ್ ಎನ್ನುವುದು ಯಂತ್ರವೊಂದು ಓದುವ ಸಾಧ್ಯತೆಯುಳ್ಳ, ಸಂಖ್ಯೆಗಳ ಸ್ವರೂಪವನ್ನು ಹೊಂದಿದ್ದು, ವ್ಯತ್ಯಸ್ಥ ಅಂತರಗಳ, ಪಕ್ಕಪಕ್ಕದ ರೇಖೆಗಳನ್ನು ಒಳಗೊಂಡ ಒಂದು ವಿನ್ಯಾಸವಾಗಿದ್ದು, ಇದನ್ನು ಪ್ರಿಂಟ್ ಮಾಡಿ, ಉತ್ಪಾದಕ ವಸ್ತುವನ್ನು ಗುರುತಿಸಲಾಗುತ್ತದೆ." ಅಂತಹ ಒಂದು ವ್ಯವಸ್ಥೆಯು, ಉತ್ಪಾದಿತ ವಸ್ತುಗಳನ್ನು, ಅವುಗಳ ಬೆಲೆಗಳನ್ನು, ಸರಕು ಸಂಗ್ರಹದ ಮಟ್ಟವನ್ನು ಉದ್ಯಮಿಗಳು ಹಾಗೂ ಸಂಸ್ಥೆಗಳು ತಿಳಿಯುವುದಕ್ಕೆ ಸಹಾಯಮಾಡುತ್ತದೆ. ಇದಕ್ಕೆ ಕೇಂದ್ರೀಕೃತ ವ್ಯವಸ್ಥೆಯಿದ್ದು, ಕಂಪ್ಯೂಟರ್ ಸಾಫ್ಟ್‌ವೇರ್ ವ್ಯವಸ್ಥೆಗೆ ಉತ್ಪಾದನೆ ಮತ್ತು ಸಾಮರ್ಥ್ಯಗಳಲ್ಲಿ ಆಗಿರುವ ಅಸಾಧಾರಣ ಹೆಚ್ಚಳವನ್ನು ಅಳವಡಿಸಲಾಗುತ್ತದೆ. ಇದರ ಮಹತ್ವವನ್ನು ಗಮನದಲ್ಲಿಟ್ಟುಕೊಂಡೇ, ಸರ್ಕಾರವು, ಎಂ.ಎಸ್.ಎಂ.ಇ ಅಭಿವೃದ್ಧಿ ಸಂಸ್ಥೆಗಳ ಮೂಲಕ ಸೂಕ್ಷ್ಮ ಹಾಗೂ ಸಣ್ಣ ಗಾತ್ರದ (ಎಂಎಸ್‌ಎಂಇಗಳು) ಉದ್ದಿಮೆಗಳಿಗೆ ಅವುಗಳ ಮಾರ್ಕೆಟಿಂಗ್ ಸ್ಪರ್ಧಾತ್ಮಕತೆಯನ್ನು ವಿಸ್ತರಿಸಿಕೊಳ್ಳಲು ಆರ್ಥಿಕ ಸಹಾಯವನ್ನು ಒದಗಿಸುತ್ತದೆ. ಈ ಸೌಲಭ್ಯದ ಅಡಿಯಲ್ಲಿ ಒಮ್ಮೆ ಮಾತ್ರ ನೀಡಿರುವ ದಾಖಲಾತಿ ಮೊತ್ತ ಮತ್ತು ವಾರ್ಷಿಕ ಪುನರಾವೃತ್ತಿ ಶುಲ್ಕ (ಮೊದಲ ಮೂರು ವರ್ಷಗಳಿಗೆ ಮಾತ್ರ) ಗಳನ್ನು ಪಾವತಿಸಿದ ಎಂ.ಎಸ್.ಎಂ.ಇ. ಗಳಿಗೆ 75% ರಷ್ಟನ್ನು ಹಿಂದಿರುಗಿಸಲಾಗುವುದು. ಹಿಂದೆ ಇ.ಎ.ಎನ್ ಎಂದು ಕರೆಯಿಸಿಕೊಳ್ಳುತ್ತಿದ್ದ,

ಈಗಿನ ಜಿ.ಎಸ್. 1 ಇಂಡಿಯಾ ಎಂಬುದು ಕಾಮರ್ಸ್ ಅಂಡ್ ಇಂಡಸ್ಟ್ರಿ (ಭಾರತ ಸರ್ಕಾರ) ಯಾ ಒಂದು ಸ್ವಾಯತ್ತ ಅಂಗವಾಗಿದ್ದು, ಬಾರ್ ಕೋಡ್ ಬಳಕೆಗೆ ಸಂಬಂಧಿಸಿದ ದಾಖಲಾತಿ ನೀಡುವ ಅಧಿಕೃತತೆಯನ್ನು ಪಡೆದ ಸಂಸ್ಥೆಯಾಗಿದೆ.

**ಬಿಕರಿ ಅಭಿವೃದ್ಧಿ ಕಾರ್ಯಕ್ರಮ (ವಿಡಿಪಿ)**

ವ್ಯಾಪಾರ ಉತ್ತೇಜನಕ್ಕೆ ಮಾರಾಟಗಾರರು ಮತ್ತು ಕೊಳ್ಳುವವರು ಇಬ್ಬರನ್ನೂ ಒಂದೆಡೆ ಸೇರಿಸುವ ಒಂದು ವೇದಿಕೆ ಇದಾಗಿದೆ. ಇಂಥದ್ದೊಂದು ವ್ಯವಸ್ಥೆ ರೂಪುಗೊಂಡಿದ್ದು ಎಂ.ಎಸ್.ಎಂ.ಇ. ಅಭಿವೃದ್ಧಿ ಸಂಸ್ಥೆ ಈ ವೇದಿಕೆಯನ್ನು ದೇಶದ ಮೂಲೆ ಮೂಲೆಗಳಲ್ಲಿ ಸ್ಥಾಪಿಸಿದೆ. ಇದು ವ್ಯಾಪಾರದ ಜೊತೆ ಜೊತೆಗೆ ಮಾರಾಟ ಸಂಸ್ಥೆಗಳಿಗೆ ಒಂದು ಸಾಮಾನ್ಯ ವೇದಿಕೆಯನ್ನು ಒದಗಿಸುವಂಥದ್ದಾಗಿದ್ದು, ಕೊಳ್ಳುವ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ

ಹೊಸದಾಗಿ ಕಾಣಿಸಿಕೊಳ್ಳುವ ಬೇಡಿಕೆಗಳನ್ನು ಗಮನದಲ್ಲಿ ಇಟ್ಟುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವ ಆಶಯ ಹೊಂದಿದೆ. ಹಾಗೆಯೇ ಏಕಕಾಲದಲ್ಲಿ ಸಣ್ಣ ಗಾತ್ರದ ಉದ್ದಿಮೆಯವರು ಮತ್ತು ಕೈಗಾರಿಕಾ ಸಹಚರರು ತಮ್ಮ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ತೋರ್ಪಡಿಸಿಕೊಳ್ಳುವುದಕ್ಕೆ ಅವಕಾಶವನ್ನು ಒದಗಿಸುತ್ತದೆ. ಈ ಕಾರ್ಯಕ್ರಮಗಳು ಯೋಗ್ಯ ರೀತಿಯ ಉದ್ದಿಮೆಗಳವರನ್ನು ಗುರುತಿಸುವ ಅತ್ಯಂತ ಉಪಯುಕ್ತ ಕೆಲಸವನ್ನು ಸಾಧಿಸಿ ತೋರಿಸಿವೆ. ಇದಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕ ರಂಗದ ಉದ್ದಿಮೆಗಳು ಹಲವಾರು ರಕ್ಷಣಾ ಇಲಾಖೆಯ ಅಂಗ ಸಂಸ್ಥೆಗಳು, ರೈಲ್ವೆ ಇಲಾಖೆ ಹಾಗೂ ಮತ್ತಿತರ ಅಸಂಖ್ಯಾತ ದೇಶೀಯ ಉತ್ಪಾದಕ ವಸ್ತುಗಳನ್ನು ಹೊಂದಿದ್ದರೂ ದುಬಾರಿ ವೆಚ್ಚದಲ್ಲಿ ಆಮದು ಮಾಡಿಕೊಳ್ಳುತ್ತಿವೆ. ಎಂ.ಎಸ್.ಎಂ.ಇ. ಅಭಿವೃದ್ಧಿ ಸಂಸ್ಥೆಯಿಂದ ಎರಡು ರೀತಿಯ ಬಿಕರಿ ಅಭಿವೃದ್ಧಿ ಕಾರ್ಯಕ್ರಮಗಳು ಸಂಘಟಿಸಲ್ಪಡುತ್ತದೆ. ಒಂದು ರಾಷ್ಟ್ರೀಯ ಮಟ್ಟದಲ್ಲಿ ಮತ್ತೊಂದು ರಾಜ್ಯ ಮಟ್ಟದಲ್ಲಿ. ರಾಷ್ಟ್ರ ಮಟ್ಟದ ಬಿಕರಿ ಅಭಿವೃದ್ಧಿ ಕಾರ್ಯಕ್ರಮವು ಮೂರು ದಿನಗಳ ಅವಧಿ ಯದಾಗಿದ್ದು, ಇದು ಬೃಹತ್ ಕಂಪನಿ ಗಳಂತಹ ವಿಶೇಷವಾಗಿ ಕೇಂದ್ರ ಸಾರ್ವಜನಿಕ ಉದ್ದಿಮೆಗಳೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುವ ಅವಕಾಶ ಒದಗಿಸುತ್ತದೆ. ಆ ರೀತಿಯ ವಿಚಾರ ವಿನಿಮಯವು ಎಂ.ಎಸ್.ಎಂ.ಇ. ಗಳಿಗೆ ಬೃಹತ್ ಕಂಪನಿಗಳೊಡನೆ ಬಿಕರಿದಾರರಾಗುವುದಕ್ಕೆ ಸಹಾಯ ಮಾಡುತ್ತದೆ. ರಾಜ್ಯ ಮಟ್ಟದ ಬಿಕರಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ, ರಾಜ್ಯದಲ್ಲಿರುವ ಒಂದೋ ಎರಡೊ ಬೃಹತ್ ಗಾತ್ರದ ಕೊಳ್ಳುವ ಸಂಸ್ಥೆಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ, ಕೊಳ್ಳುವ – ಮಾರುವ ಕಾರ್ಯಕ್ರಮದಲ್ಲಿ ಎಂ.ಎಸ್.



ಎಂ.ಇ.ಗಳೊಂದಿಗೆ ಸಂವಾದ ನಡೆಸುತ್ತವೆ. ಎಲ್ಲಾ ಸೂಕ್ಷ್ಮ, ಮಾಧ್ಯಮ ಹಾಗೂ ಬೃಹತ್ ಗಾತ್ರದ ಉದ್ದಿಮೆಯವರು, ಬಿಕರಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ.

**ಮಾರುಕಟ್ಟೆ ನೆರವು**

ಈ ಸೌಲಭ್ಯವು ಸಣ್ಣ ಹಾಗೂ ಸೂಕ್ಷ್ಮ ಉದ್ದಿಮೆಯ ರಫ್ತುದಾರರಿಗೆ ಅವರ ವಿದೇಶದ ಮಾರುಕಟ್ಟೆಯನ್ನು ಪಡೆದುಕೊಳ್ಳುವ ಮತ್ತು ಅಭಿವೃದ್ಧಿಗೊಳಿಸುವ ಪ್ರಯತ್ನದಲ್ಲಿ ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ. ಅದರ ಜೊತೆಗೆ ಎಂ.ಎಸ್. ಎಂ.ಇ. ಇಂಡಿಯಾ ಸ್ಟಾಲ್‌ನ ಅಡಿಯಲ್ಲಿ ಸೂಕ್ಷ್ಮ ಹಾಗೂ ಸಣ್ಣ ಗಾತ್ರದ ಉತ್ಪಾದನಾ ಉದ್ಯಮವಾಗಿ, ಅಂತಾರಾಷ್ಟ್ರೀಯ ವಾಣಿಜ್ಯೋತ್ಸವ / ಪ್ರದರ್ಶನಗಳಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸುವಿಕೆಯನ್ನು ಹೆಚ್ಚಳಗೊಳಿಸುವುದರ ಜೊತೆಗೆ ಸಣ್ಣ ಹಾಗೂ ಸೂಕ್ಷ್ಮ ಉತ್ಪಾದನಾ ಉದ್ಯಮದವರು ರಫ್ತು ಮಾಡುವುದನ್ನು ವಿಸ್ತರಿಸುವ ಉದ್ದೇಶ ಹೊಂದಿದೆ. ಈ ಸೌಲಭ್ಯವು ಬೃಹತ್ ಗಾತ್ರದಲ್ಲಿ ಬಾರ್ ಕೋಡಿಂಗ್ ಅನ್ನು ಅಳವಡಿಸಿಕೊಳ್ಳುವುದನ್ನು ಜನಪ್ರಿಯಗೊಳಿಸುವ ಪ್ರಯತ್ನಕ್ಕೆ ಅವಕಾಶಮಾಡಿಕೊಡಲಿದೆ.

**ಈ ಕಾರ್ಯಕ್ರಮದಡಿ ಮುಂದಿನ ಹಣ ಸಹಾಯ ಮಾಡಲಾಗುತ್ತದೆ**

ಎಂ.ಎಸ್.ಎಂ.ಇ. ಇಂಡಿಯಾ ಸ್ಟಾಲ್ ನ ಅಡಿಯಲ್ಲಿ ಅಂತರ ರಾಷ್ಟ್ರೀಯ ವಾಣಿಜ್ಯ ಉತ್ಸವ / ಪ್ರದರ್ಶನಗಳಲ್ಲಿ ಭಾಗವಹಿಸುವ ಸಣ್ಣ ಹಾಗೂ ಸೂಕ್ಷ್ಮ ಉತ್ಪಾದನೆಮಾಡುವ ಉದ್ದಿಮೆದಾರರಿಗೆ.

* ಘಟಕ ವಿಶಿಷ್ಟ ಮಾರ್ಕೆಟ್ ಅಧ್ಯಯನ ಮಾಡುವ ಕೈಗಾರಿಕಾ ಸಂಘಗಳು / ರಫ್ತು ಉತ್ತೇಜಿಸುವ ಕೌನ್ಸಿಲ್‌ಗಳು /ಭಾರತೀಯ ರಫ್ತು ಸಂಸ್ಥೆಯ ಒಕ್ಕೂಟ. * ಬೇಡವಾದದ್ದನ್ನು ಗುಡ್ಡೆ ಹಾಕುವುದರ ವಿರುದ್ಧ ಎಸ್.ಎಸ್.ಐ ನವರ ಪ್ರಕರಣಗಳಿಗೆ ಉಪಕ್ರಮಿಸುವ ಇಲ್ಲವೇ ಸ್ಪರ್ಧಿಸುವ ವಿಷಯ ಮತ್ತು * ಬಾರ್ ಕೋಡಿಂಗ್ ಮೇಲೆ ವ್ಯಯಿಸಿದ ಹಣವನ್ನು ಹಿಂಪಡೆಯುವುದು. ಆದ್ಯತೆಯ ಸಂಗ್ರಹಣದ ಮೂಲಕ ಮಾರ್ಕೆಟ್ ಅನ್ನು ಒದಗಿಸುವುದು.

ಭಾರತ ಸರ್ಕಾರವು ಸಾರ್ವಜನಿಕ ಸಂಗ್ರಹಣಾ ಕಾಯಿದೆಯೊಂದನ್ನು, ಸೂಕ್ಷ್ಮ ಹಾಗೂ ಸಣ್ಣ ಗಾತ್ರದ ಉದ್ದಿಮೆಗಾಗಿ ತಂದಿದ್ದು ಪ್ರಾರಂಭಿಸಿದ್ದು (ಎಂಎಸ್‌ಇ ಗಳು) ಆದೇಶ–2012, ಇದು ಕೇಂದ್ರ ಸಚಿವಾಲಯಗಳು / ವಿಭಾಗಗಳು / ಕೇಂದ್ರ ಸಾರ್ವಜನಿಕ ಉದ್ದಿಮೆಗಳು (ಸಿ.ಪಿ.ಎಸ್.ಇ.ಗಳು) ಇವೆಲ್ಲವುಗಳಿಗೆ ಅನ್ವಯಿಸುತ್ತಿದ್ದು, ಏಪ್ರಿಲ್ 1, 2012 ರಿಂದ ಜಾರಿಗೊಳಪಟ್ಟಿದೆ.

ಈ ಖಾಯಿದೆ ಪ್ರಕಾರ, ಪ್ರತಿಯೊಂದು ಕೇಂದ್ರ ಸರ್ಕಾರದ ಸಚಿವಾಲಯ, ವಿಭಾಗ, ಸಾರ್ವಜನಿಕ ಏಕಸ್ವಾಮ್ಯಕ್ಕೆ ಒಳಪಟ್ಟ ಉದ್ದಿಮೆಗಳು ತಮ್ಮ ವಾರ್ಷಿಕ ಸರಕು ಅಥವಾ ಸೇವೆಗಳ ಒಟ್ಟು ಮೌಲ್ಯದ ಕನಿಷ್ಠ 20% ರಷ್ಟನ್ನು ಸೂಕ್ಷ್ಮ ಹಾಗೂ ಸಣ್ಣ ಗಾತ್ರದ ಉದ್ದಿಮೆಗಳಿಂದ (ಎಂ. ಎಸ್.ಎಂ.ಇ. ಗಳು) ಸಂಗ್ರಹಿಸಬೇಕು. ಈ 20% ರಲ್ಲಿ 4% ರಷ್ಟನ್ನು ಎಸ್‌ಸಿ / ಎಸ್‌ಟಿ ಮಾಲಿಕತ್ವದ ಉದ್ದಿಮೆಗಳಿಗೆ ಮೀಸಲಿರಿಸುವುದು ಕಡ್ಡಾಯ. ❑

# ಯೋಜನಾ

## ಡಿಸೆಂಬರ್ 2017 ಸಂಚಿಕೆಯ ವಿಷಯ

## ಗ್ರಾಹಕ ಜಾಗೃತಿ

# ಕರ್ನಾಟಕದಲ್ಲಿ ಸಣ್ಣ ಕೈಗಾರಿಕೆ ಮತ್ತು ನವೋದ್ಯಮ

* ಮಾಧವ



**ಬೆಂಗಳೂರು ಸ್ಟಾರ್ಟ್‌ಅಪ್‌ಗಳ ರಾಜಧಾನಿಯಾಗಿಯೂ ಬೆಳೆಯುತ್ತಿರುವುದು ಗಮನಾರ್ಹ ಬೆಳವಣಿಗೆಯಾಗಿದೆ. ಸಮಾಜದ ಬಹುದೊಡ್ಡ ಬಳಕೆದಾರರ ವಿವಿಧ ಬಗೆಯ ಅಗತ್ಯಗಳು ಮತ್ತು ಆಶೋತ್ತರಗಳನ್ನು ಈಡೇರಿಸುವ ಸಾಫ್ಟ್‌ವೇರ್, ಮೊಬೈಲ್ ಆ್ಯಪ್ ಆಧರಿತ ಉದ್ದಿಮೆಗಳನ್ನು ಸ್ಥಾಪಿಸುವ ಪ್ರವೃತ್ತಿ ಯುವ ತಂತ್ರಜ್ಞರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ.**

ವ್ಯಾಪಕ ಸ್ವರೂಪದ, ವೈವಿಧ್ಯಮಯ ಕೈಗಾರಿಕೆಗಳ ವಿಶಾಲ ತಳಹದಿ ಹೊಂದಿರುವ ಕರ್ನಾಟಕ ರಾಜ್ಯವು, ಅತ್ಯಂತ ತ್ವರಿತವಾಗಿ ಬೆಳವಣಿಗೆ ಕಾಣುತ್ತಿರುವ ದೇಶದ ರಾಜ್ಯಗಳ ಪೈಕಿ ಒಂದಾಗಿದೆ. ರಾಜ್ಯದ ಯೋಜಿತ ಆರ್ಥಿಕ ಪ್ರಗತಿಯಲ್ಲಿ ಕಿರು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು (ಎಂಎಸ್‌ಎಂಇ) ಮಹತ್ವದ ಪಾತ್ರ ನಿರ್ವಹಿಸುತ್ತಿವೆ. ಹೊಸ ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಇವುಗಳು ಪ್ರಮುಖ ಚಾಲನಾ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿವೆ. ಆದರೆ, ಹಣಕಾಸು, ಮೂಲಸೌಕರ್ಯ ಮತ್ತು ತಂತ್ರಜ್ಞಾನ ನೆರವಿನ ಪ್ರಮುಖ ಸವಾಲುಗಳನ್ನೂ ಈ ವಲಯವು ಎದುರಿಸುತ್ತಿದೆ. ಪ್ರಗತಿ ಪಥದಲ್ಲಿ ಮುನ್ನಡೆದಿರುವ ರಾಜ್ಯದ ಆರ್ಥಿಕತೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವಲ್ಲಿ ಇವುಗಳ ಕೊಡುಗೆ ಅನನ್ಯವಾಗಿದೆ.

ಉದ್ಯಮಶೀಲತೆ ರೂಢಿಸಿ ಕೊಂಡಿರುವವರು ಮತ್ತು ಅನುಭವಿ ತಂತ್ರಜ್ಞರು ಸ್ವಯಂ ಉದ್ಯೋಗ ಆರಂಭಿಸಲು ಸಣ್ಣ ಕೈಗಾರಿಕಾ ರಂಗವು ಉತ್ತಮ ವೇದಿಕೆ ಕಲ್ಪಿಸಿಕೊಟ್ಟಿದೆ. ಕೈಗಾರಿಕಾ ಉದ್ಯಮಶೀಲತೆಗೆ ಪೂರಕವಾಗಿ ಕಾರ್ಯನಿರ್ವಹಿಸುವ ಈ ವಲಯವು ಒಟ್ಟಾರೆ ಕೈಗಾರಿಕಾ ವಲಯದ ಪ್ರಗತಿಗೆ ಗಮನಾರ್ಹ ಕೊಡುಗೆ ನೀಡುತ್ತಿದೆ. ಪ್ರಾದೇಶಿಕ ಆರ್ಥಿಕ ಸಮತೋಲನದ ಬೆಳವಣಿಗೆಯಲ್ಲಿ ಈ ವಲಯ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಸಣ್ಣ ಕೈಗಾರಿಕೋದ್ಯಮಿಗಳ ಉದ್ಯಮಶೀಲತಾ ಉತ್ಸಾಹಕ್ಕೆ ಕೈಗಾರಿಕಾ ಸಂಸ್ಥೆಗಳು ಮತ್ತು ಸರ್ಕಾರದ ವಿವಿಧ ಯೋಜನೆಗಳು ನೆರವಾಗುತ್ತಿವೆ. ಈ (ಎಂಎಸ್‌ಎಂಇ) ವಲಯವು ಸರಕುಗಳ ತಯಾರಿಕೆ, ಸೇವೆ, ಕೈಗಾರಿಕೆಗಳ ಉತ್ಪಾದನೆ, ರಫ್ತು ಉದ್ಯೋಗ ಅವಕಾಶಗಳ ಸೃಷ್ಟಿಗೆ ಗರಿಷ್ಠ ಕೊಡುಗೆಯನ್ನೂ ನೀಡುತ್ತಿದೆ. ಕೃಷಿ ವಲಯ ಹೊರತುಪಡಿಸಿದರೆ ಎಂಎಸ್‌ಎಂಇ' ವಲಯವೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಅವಕಾಶಗಳನ್ನು ಕಲ್ಪಿಸುತ್ತಿದೆ. ಕಾರ್ಖಾನೆ ಸ್ಥಾಪನೆ ಮತ್ತು ಯಂತ್ರೋಪಕರಣ ಅಳವಡಿಕೆಗೆ ರೂ 25 ಲಕ್ಷದವರೆಗೆ ವೆಚ್ಚ ಮಾಡುವ ಘಟಕಗಳನ್ನು ಕಿರು ಕೈಗಾರಿಕೆಗಳು ರೂ 25 ಲಕ್ಷದಿಂದ ರೂ 5 ಕೋಟಿವರೆಗೆ ವೆಚ್ಚ ಮಾಡುವ ಘಟಕಗಳು ಸಣ್ಣ ಮತ್ತು ರೂ 5 ಕೋಟಿಗಳಿಂದ ರೂ 10 ಕೋಟಿಗಳವರೆಗೆ ವೆಚ್ಚ ಮಾಡುವ ಘಟಕಗಳನ್ನು ಮಧ್ಯಮ ಕೈಗಾರಿಕೆಗಳು ಎಂದು ವರ್ಗೀಕರಿಸಲಾಗುತ್ತಿದೆ. ಇದೇ ಬಗೆಯಲ್ಲಿ ಸೇವಾ ವಲಯದ ಘಟಕಗಳನ್ನೂ ಕ್ರಮವಾಗಿ ರೂ 10 ಲಕ್ಷ, ರೂ 10 ಲಕ್ಷದಿಂದ ರೂ 2 ಕೋಟಿ ಮತ್ತು ರೂ 2 ಕೋಟಿಗಳಿಂದ ರೂ 5 ಕೋಟಿಗಳವರೆಗೆ ಹೂಡಿಕೆ ಆಧರಿಸಿ ವರ್ಗೀಕರಿಸಲಾಗುತ್ತಿದೆ.

ದೇಶದ ಕೈಗಾರಿಕಾ ಪ್ರಗತಿಯಲ್ಲಿ ಕರ್ನಾಟಕ ರಾಜ್ಯವು ಯಾವಾಗಲೂ ಮುಂಚೂಣಿಯಲ್ಲಿ ಇದೆ. ಉದ್ಯಮಶೀಲತೆಯ ಗುಣಗಳನ್ನು ಮೈಗೂಡಿಸಿಕೊಂಡಿರುವ ನಾಗರಿಕರು, ಎಂಜಿನಿಯರಿಂಗ್, ಆಡಳಿತ ನಿರ್ವಹಣೆ, ಮೂಲ ವಿಜ್ಞಾನ ರಂಗದಲ್ಲಿನ ಪರಿಣತ ಮಾನವ ಸಂಪನ್ಮೂಲ, ಉನ್ನತ ಮಟ್ಟದ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ಮತ್ತು ಬಂಡವಾಳ ಹೂಡಿಕೆಗೆ ಇರುವ ವಿಪುಲ ಅವಕಾಶ ಮತ್ತು ಮಾಹಿತಿ ಸಂವಹನ ಪರಿಣತಿ, ಮಾಹಿತಿ ತಂತ್ರಜ್ಞಾನ ರಂಗದಲ್ಲಿನ ಪ್ರಗತಿಯನ್ನು ಸದ್ಬಳಕೆ ಮಾಡಿಕೊಂಡ ಜಾಣತನ, ರಸ್ತೆ, ರೈಲು,

* ಹಿರಿಯ ಪತ್ರಕರ್ತರು.

ಬಂದರು ಮತ್ತು ವಿಮಾನ ಯಾನದಂತಹ ಸಂಪರ್ಕ ಮೂಲ ಸೌಕರ್ಯಗಳು ಮತ್ತಿತರ ಕಾರಣಕ್ಕೆ ರಾಜ್ಯ ಈಗಾಗಲೇ ಕೈಗಾರಿಕಾ ಪ್ರಗತಿಯಲ್ಲಿ ತನ್ನದೇ ಆದ ವಿಶಿಷ್ಟ ಛಾಪನ್ನು ದಾಖಲಿಸಿದೆ. ರಾಜ್ಯ ಸರ್ಕಾರವೂ ಕೈಗಾರಿಕಾ ಪ್ರಗತಿಗೆ ಪೂರಕವಾದ ಕಾರ್ಯಕ್ರಮಗಳನ್ನು ಜಾರಿಗೆ ಬದ್ಧತೆ ತೋರಿಸುತ್ತಿದೆ. ಕರ್ನಾಟಕ ತಂತ್ರಜ್ಞಾನ ಸಲಹಾ ಸಂಘಟನೆಯು ಸಣ್ಣ ಕೈಗಾರಿಕೆಗಳಿಗೆ ಅಗತ್ಯವಾದ ಸಲಹೆ ನೀಡುತ್ತಿದೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಕೈಗಾರಿಕಾ ಹೂಡಿಕೆ ಅಭಿವೃದ್ಧಿ ನಿಗಮ, ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಎಲೆಕ್ಟ್ರಾನಿಕ್ಸ್ ನಿಗಮವು, ಕೈಗಾರಿಕಾ ಘಟಕಗಳಿಗೆ ಅಗತ್ಯವಾದ ಹಣಕಾಸು, ಪಾಲುದಾರಿಕೆ, ಕಾರ್ಖಾನೆ ಷೆಡ್ ಮತ್ತು ಕಚ್ಚಾ ಸರಕು ಪೂರೈಸಲು ನೆರವಾಗುತ್ತಿವೆ. ಕಾರ್ಮಿಕರ ಕೌಶಲ್ಯ – ಉತ್ಪಾದನಾ ಸಾಮರ್ಥ್ಯ ವೃದ್ಧಿಸುವ ಮತ್ತು ಈ ಮೂಲಕ ಉದ್ಯಮದ ಮಾರುಕಟ್ಟೆ / ಮಾರಾಟ ತಂತ್ರಗಾರಿಕೆಯಲ್ಲಿಯೂ ಅಗತ್ಯ ಬದಲಾವಣೆ ಮಾಡಿಕೊಂಡು ಪ್ರಗತಿಯ ದಾಪುಗಾಲು ಹಾಕಲು ಹೊರಟಿವೆ.

ಪರಿಣತ ಕಾರ್ಮಿಕರನ್ನು ಪೂರೈಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಸಂಘ (ಕಾಸಿಯಾ) ದೊಡ್ಡ ಪ್ರಮಾಣದ ಕಾರ್ಯಕ್ರಮ ಹಾಕಿಕೊಂಡಿದೆ. ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯದ ಸಹಯೋಗದಲ್ಲಿ ಗರಿಷ್ಠ ಪ್ರಮಾಣದಲ್ಲಿ ಕಾರ್ಮಿಕರಿಗೆ ತರಬೇತಿ ನೀಡುತ್ತಿದೆ. ಕಾರ್ಮಿಕರ ಪರಿಣತಿ ಹೆಚ್ಚಿಸಲು ರಾಜ್ಯದ ಹಲವು ಕಡೆ ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರಗಳನ್ನು ಏರ್ಪಡಿಸುತ್ತ ಬಂದಿದೆ. ಸಣ್ಣ ಕೈಗಾರಿಕಾ ಘಟಕಗಳ ಉತ್ಪಾದನಾ ಸಾಮರ್ಥ್ಯ ಮತ್ತು ಸ್ಪರ್ಧಾತ್ಮಕತೆ ಹೆಚ್ಚಿಸುವ ನಿಟ್ಟಿನಲ್ಲಿಯೂ ಈಗ ಕಾರ್ಯಪ್ರವೃತ್ತವಾಗಿದೆ.

ರಾಜ್ಯದಲ್ಲಿ ಕಿರು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಹಲವಾರು ಸಮೂಹಗಳಿವೆ. ಈ ಕೈಗಾರಿಕಾ ಸಮೂಹಗಳಲ್ಲಿನ ಕೈಗಾರಿಕಾ ಘಟಕಗಳು ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿ ಹಂಚಿ ಹೋಗಿವೆ. ಕೈಗಾರಿಕೆ ವ್ಯಾಪಾರ, ವಾಣಿಜ್ಯ ಮತ್ತು ಬ್ಯಾಂಕಿಂಗ್ ವಹಿವಾಟಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಹಲವಾರು ಸಂಘ – ಸಂಸ್ಥೆಗಳು ಇವೆ. ಅವುಗಳ ಪೈಕಿ, ಕರ್ನಾಟಕ ಸಣ್ಣ ಕೈಗಾರಿಕಾ ಸಂಘ (ಕಾಸಿಯಾ) ಮತ್ತು ಕರ್ನಾಟಕ ಮತ್ತು ಪೀಣ್ಯ ಎಲೆಕ್ಟ್ರಾನಿಕ್ ಕೈಗಾರಿಕಾ ಸಂಘಗಳ



ಒಕ್ಕೂಟ ಪ್ರಮುಖವಾಗಿವೆ. ಎಲ್ಲ ಕೈಗಾರಿಕಾ ಸಂಘಗಳು ಕರ್ನಾಟಕ ವಾಣಿಜ್ಯೋದ್ಯಮ ಮಹಾಸಂಘದ (ಎಫ್‌ಕೆಸಿಸಿಐ) ಸದಸ್ಯತ್ವ ಪಡೆದಿವೆ. ಕಾಸಿಯಾದಲ್ಲಿ ಎಂಟು ಸಾವಿರಕ್ಕೂ ಹೆಚ್ಚು ಘಟಕಗಳು ಸದಸ್ಯತ್ವ ಹೊಂದಿವೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಿಂದ ಸಾಕಷ್ಟು ಪ್ರಮಾಣದಲ್ಲಿ ಬೇಡಿಕೆ ದೊರೆತರೆ 'ಎಂಎಸ್‌ಎಂಇ' ಘಟಕಗಳ ಉತ್ಪಾದನಾ ಚಟುವಟಿಕೆ ಇನ್ನಷ್ಟು ಗರಿಗೆದರಲಿದೆ. ರಾಜ್ಯದಲ್ಲಿನ ಕೇಂದ್ರೋದ್ಯಮಗಳು ತಮ್ಮ ಅಗತ್ಯಗಳಿಗೆ ಸ್ಥಳೀಯ ಸಣ್ಣ ಕೈಗಾರಿಕಾ ಘಟಕಗಳನ್ನೆ ನೆಚ್ಚಿಕೊಂಡರೆ, 'ಎಸ್‌ಎಂಇ'ಗಳಿಗೂ ಲಾಭ ಆಗಲಿದೆ. ಸದ್ಯಕ್ಕೆ ಕೈಗಾರಿಕಾ ವಲಯದಲ್ಲಿ ಸ್ಪರ್ಧೆ ಹೆಚ್ಚುತ್ತಿದೆ. ವೆಚ್ಚ ಕಡಿತ, ಸ್ಪರ್ಧಾತ್ಮಕತೆ ರೂಢಿಸಿಕೊಳ್ಳುವ ಮತ್ತು ಮಾರುಕಟ್ಟೆಯಲ್ಲಿ ಸಕ್ರಿಯವಾಗಿ ಇರುವುದು ಅಗತ್ಯ ಎನ್ನುವ ಸತ್ಯವನ್ನು ಸಣ್ಣ ಕೈಗಾರಿಕಾ ಘಟಕಗಳಿಗೂ ಮನವರಿಕೆ ಆಗಿದೆ.

**ಎಸ್‌ಎಂಇ ಸಮಸ್ಯೆಗಳು**

ಕಿರು, ಸಣ್ಣ ಮತ್ತು ಮಧ್ಯಮ (ಎಂಎಸ್‌ಎಂಇ) ಕೈಗಾರಿಕೆಗಳು ಬೆಳವಣಿಗೆಯ ಹಾದಿಯಲ್ಲಿ ಸಾಗಲು ಹಲವಾರು ಅಡಚಣೆಗಳನ್ನು ಎದುರಿಸುತ್ತಿವೆ. ಈ ಘಟಕಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿವೆ. ದೊಡ್ಡ ಕೈಗಾರಿಕೆಗಳಿಗೆ ಬಿಡಿಭಾಗಗಳನ್ನು ಪೂರೈಸುತ್ತಿರುವ 'ಎಸ್‌ಎಂಇ' ಗಳು, ಬೆಲೆ ನಿಗದಿ ಮತ್ತು ಹಣ ಪಾವತಿ ವಿಳಂಬದಿಂದಾಗಿ ದೊಡ್ಡ ಕೈಗಾರಿಕೆಗಳ ಮರ್ಜಿಯಲ್ಲಿ ಇರಬೇಕಾಗಿದೆ.

**ಸವಾಲುಗಳು**

ಸುಲಭವಾಗಿ ಸಿಗದ ಹಣಕಾಸು ಮತ್ತು ಸಾಲದ ಲಭ್ಯತೆ, ಗಂಭೀರ ಸ್ವರೂಪದ ನಿಯಂತ್ರಣ ಕ್ರಮಗಳು, ಸರ್ಕಾರದ ನೆರವಿನ ಯೋಜನೆಗಳ ಬಗ್ಗೆ ಸೂಕ್ತ ಮಾಹಿತಿ ಇಲ್ಲದಿರುವುದು, ವಿವಿಧ ಇಲಾಖೆಗಳ ನಿಯಮಾವಳಿ ಪಾಲಿಸುವ ಅನಿವಾರ್ಯತೆ, ಅತ್ಯಾಧುನಿಕ ಮತ್ತು ಕೈ ತಂತ್ರಜ್ಞಾನವು ಸುಲಭವಾಗಿ ದೊರೆಯದಿರುವುದು, ಮೂಲ ಸೌಕರ್ಯಗಳ ಕೊರತೆ, ಆಧುನಿಕ ಮಾರುಕಟ್ಟೆ ಮತ್ತು ವಿತರಣಾ ಜಾಲಗಳ ಅಲಭ್ಯತೆ, ಕುಶಲ ಕಾರ್ಮಿಕರ ಕೊರತೆ, ಬದಲಾಗದ ಕಾರ್ಮಿಕ ನೀತಿಗಳು, ಭೂಮಿ ಹಂಚಿಕೆ ಸಮಸ್ಯೆಗಳು ಈ ವಲಯವನ್ನು ತೀವ್ರವಾಗಿ ಕಾಡುತ್ತಿವೆ. ಎರಡು ಮತ್ತು ಮೂರನೇ ಹಂತದ ನಗರಗಳು ಮತ್ತು ಗ್ರಾಮೀಣ ಪ್ರದೇಶದಲ್ಲಿನ 'ಎಂಎಸ್‌ಎಂಇ'ಗಳು ಎದುರಿಸುತ್ತಿರುವ ಸಮಸ್ಯೆಗಳು ಇನ್ನಷ್ಟು ಗಂಭೀರವಾಗಿವೆ. ಭೂಮಿ ಹಂಚಿಕೆ, ಅಸಮರ್ಪಕ ವಿದ್ಯುತ್ ಮತ್ತು ನೀರು ಪೂರೈಕೆಗಳು 'ಎಂಎಸ್‌ಎಂಇ'ಗಳ ಅಭಿವೃದ್ಧಿಗೆ ಅಡ್ಡಿಯಾಗಿ ಪರಿಣಮಿಸಿವೆ. ಭೂಮಿ ಹಂಚಿಕೆಯಲ್ಲಿ ರಾಜ್ಯ ಸರ್ಕಾರವು ಇತ್ತೀಚೆಗೆ ಜಾರಿಗೆ ತಂದಿರುವ 99 ವರ್ಷಗಳ ಗುತ್ತಿಗೆ ನೀತಿಯು, 'ಎಂಎಸ್‌ಎಂಇ'ಗಳ ಪಾಲಿಗೆ ಮಾರಕವಾಗಿದೆ.

10 ವರ್ಷಗಳ ಗುತ್ತಿಗೆ ಮತ್ತು ಮಾರಾಟ ಬದಲಿಗೆ (lease-cum-sale) ಸರ್ಕಾರವು 2014–19ನೇ ಕೈಗಾರಿಕಾ ನೀತಿಯಲ್ಲಿ ಏಕಪಕ್ಷೀಯವಾಗಿ ಜಾರಿಗೆ ತಂದಿರುವ 99 ವರ್ಷಗಳ ಗುತ್ತಿಗೆ ನೀತಿಯು ಈ ವಲಯಕ್ಕೆ ಅಪಾರ ತೊಂದರೆಗಳನ್ನು ತಂದೊಡ್ಡಿದೆ. ಬ್ಯಾಂಕ್‌ಗಳಿಂದ ಹಣಕಾಸು ಸೌಲಭ್ಯ ಮತ್ತು ಇತರ ಸೌಲಭ್ಯಗಳನ್ನು ಪಡೆಯಲು ಇದರಿಂದ ತೀವ್ರ ಅಡ್ಡಿಯಾಗಿದೆ. ಮುಕ್ತ ಮಾರುಕಟ್ಟೆಯಲ್ಲಿ ಕಚ್ಚಾ ಸರಕುಗಳ ಬೆಲೆ ಏರುತ್ತಿರುವುದು, ತಮ್ಮ ಸರಕುಗಳ ಬೆಲೆ ನಿಗದಿ ವಿಷಯದಲ್ಲಿ ಯಾವುದೇ ಸ್ವಾತಂತ್ರ್ಯ ಇಲ್ಲದಿರುವುದು ಇವುಗಳ ಪಾಲಿಗೆ ಮಾರಕವಾಗಿ ಪರಿಣಮಿಸಿದೆ. ಮುಕ್ತ ಮಾರುಕಟ್ಟೆ ವ್ಯವಸ್ಥೆಯು ಅವುಗಳ ಅಸ್ತಿತ್ವಕ್ಕೇನೆ ಧಕ್ಕೆ ಒದಗಿಸುವ ಬೆದರಿಕೆ ಒಡ್ಡಿದೆ. ಸಾಲ ಖಾತರಿ ಯೋಜನೆ (ಸಿಜಿಎಸ್) ಬಗ್ಗೆ ಶೇ 71ರಷ್ಟು ಕಿರು ಮತ್ತು ಸಣ್ಣ ಕೈಗಾರಿಕೆಗಳ ಮಾಲಿಕರಿಗೆ ಮಾಹಿತಿಯೇ ಇಲ್ಲ. ಈ ಯೋಜನೆಯ ಪ್ರಯೋಜನ ಪಡೆಯಲು ಹಣಕಾಸು ಸಂಸ್ಥೆಗಳು ಸೂಕ್ತ ರೀತಿಯಲ್ಲಿ ಸಹಕರಿಸುತ್ತಿಲ್ಲ ಎಂದು ಉದ್ಯಮಿಗಳು ಆರೋಪಿಸುತ್ತಾರೆ. 'ಎಂಎಸ್‌ಎಂಇ'ಗಳಿಗಾಗಿಯೇ ರಾಜ್ಯ ಸರ್ಕಾರ ಪ್ರತ್ಯೇಕ ಕೈಗಾರಿಕಾ ನೀತಿ ಜಾರಿಗೆ ತರಬೇಕಾಗಿದೆ. ಮುಕ್ತ ಮತ್ತು ಜಾಗತೀಕರಣದ ಆರ್ಥಿಕತೆಯಲ್ಲಿ ಈ ವಲಯ ಎದುರಿಸುತ್ತಿರುವ ಸಂಕೀರ್ಣ ಸ್ವರೂಪದ ಸವಾಲುಗಳನ್ನು ಬಗೆಹರಿಸಲು ಸರ್ಕಾರ ಪ್ರಾಮಾಣಿಕ ಪ್ರಯತ್ನ

ಮಾಡಬೇಕಾಗಿದೆ. ಹಣಕಾಸು ಸೌಲಭ್ಯ ಪಡೆಯುವುದನ್ನು ಸುಲಲಿತಗೊಳಿಸಬೇಕಾಗಿದೆ. ಈ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು 'ಎಂಎಸ್‌ಎಂಇ'ಗಳ ಮಾಲಿಕರ ಜತೆ ಮಾತುಕತೆ ನಡೆಸಿ ಅವರ ಸಮಸ್ಯೆಗಳನ್ನು ಸರ್ಕಾರ ಅರ್ಥೈಸಿಕೊಂಡು ಪರಿಹಾರ ಉಪಾಯಗಳನ್ನು ಕಂಡುಕೊಳ್ಳಬೇಕಾಗಿದೆ. ಸರಕುಗಳ ತಯಾರಿಕೆ, ಉದ್ಯೋಗ ಅವಕಾಶ ಮತ್ತು ರಫ್ತಿಗೆ ನೀಡುವ ಕೊಡುಗೆ ಮೂಲಕ 'ಎಂಎಸ್‌ಎಂಇ'ಗಳು ರಾಜ್ಯದ ಆರ್ಥಿಕ ಬೆನ್ನೆಲುಬುಗಳಾಗಿವೆ. ಇಡೀ ರಾಜ್ಯದ ಸಮತೋಲನದ ಬೆಳವಣಿಗೆಗೆ ರಾಜ್ಯ ಸರ್ಕಾರವು ನಿರ್ದಿಷ್ಟ ಕಾರ್ಯಸೂಚಿ ಹಾಕಿಕೊಳ್ಳಬೇಕಾಗಿದೆ. ವಿದ್ಯುತ್, ನೀರು, ನೈರ್ಮಲ್ಯ, ತ್ಯಾಜ್ಯ ನಿರ್ವಹಣೆ, ರಸ್ತೆ, ರೈಲು, ವಿಮಾನ ಸೇವೆ ವಿಸ್ತರಣೆಯಂತಹ ಮೂಲ ಸೌಕರ್ಯಗಳ ಅಭಿವೃದ್ಧಿಗೆ ತೀವ್ರ ಗಮನ ನೀಡಬೇಕಾಗಿದೆ.

**ಸ್ಟಾರ್ಟ್‌ಅಪ್: ಮುಂಚೂಣಿಯಲ್ಲಿ ಕರ್ನಾಟಕ**

ಉದಯೋನ್ಮುಖ ಯುವ ಉತ್ಸಾಹಿಗಳು ನವೋದ್ಯಮ ಆರಂಭಿಸುವುದು ಈಗ ದೇಶಿ ಉದ್ದಿಮೆ ರಂಗದಲ್ಲಿ ಕಂಡು ಬಂದಿರುವ ಹೊಸ ಬೆಳವಣಿಗೆಯಾಗಿದೆ. ಕಳೆದ ಎರಡು ಮೂರು ವರ್ಷಗಳಿಂದ ದೇಶಿ ಉದ್ದಿಮೆ ರಂಗದಲ್ಲಿ ಮೊದಲ ತಲೆಮಾರಿನ ಯುವಕರು ನವೋದ್ಯಮ ಆರಂಭಿಸುವ ಹೊಸ ಗಾಳಿ ಜೋರಾಗಿ ಬೀಸುತ್ತಿದೆ. ಬೆಂಗಳೂರು ದೇಶದ ಸ್ಟಾರ್ಟ್‌ಅಪ್ ರಾಜಧಾನಿ ಎನ್ನುವ ಹೊಸ ಹೆಗ್ಗಳಿಕೆಗೂ ಭಾಜನವಾಗುತ್ತಿದೆ.

'ಸ್ಟಾರ್ಟ್‌ಅಪ್' ಎನ್ನುವುದು ಉದ್ಯಮ ಲೋಕದಲ್ಲಿ ಹೊಸದೇನೂ ಅಲ್ಲ. ಕೈಗಾರಿಕೆ ಹಾಗೂ ಉದ್ದಿಮೆಗಳು ಆರಂಭವಾದಾಗಿನಿಂದ ಹೊಸ ಹೊಸ ಕಂಪನಿಗಳು ಹುಟ್ಟಿಕೊಳ್ಳುತ್ತಲೇ ಇವೆ. ಆದರೆ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಬೆಳೆಯುತ್ತಿದ್ದಂತೆ, ಮೊಬೈಲ್‌ಗಳ ಬಳಕೆ ಹೆಚ್ಚಿದಂತೆ ಹೊಸ ಹೊಸ ಆ್ಯಪ್‌ಗಳು ಅಭಿವೃದ್ಧಿಯಾಗುತ್ತಿದ್ದಂತೆ ಯುವ ಉದ್ಯಮಿಗಳಉದ್ಯಮಶೀಲತೆಗೆ 'ಸ್ಟಾರ್ಟ್‌ಅಪ್' (ನವೋದ್ಯಮ) ಹೆಸರು ಬಳಕೆಗೆ ಬಂದಿದೆ. ಹೊಸ ಉದ್ಯೋಗಾವಕಾಶ ಸೃಷ್ಟಿಸುವ, ಸಮಾಜದ ಬೇಡಿಕೆ ಮತ್ತು ಅಗತ್ಯಗಳನ್ನು ಪೂರೈಸುವ ಮೊದಲ ತಲೆಮಾರಿನ ಉದ್ಯಮಶೀಲರ ಪ್ರಯತ್ನವೇ 'ಸ್ಟಾರ್ಟ್‌ಅಪ್' ಎಂದು ಈ ಉದ್ದಿಮೆಯನ್ನು ಕೇಂದ್ರ ಸರ್ಕಾರ ವ್ಯಾಖ್ಯಾನಿಸಿದೆ. ಹೊಸಬಗೆಯ




ಉದ್ಯಮದ ಅಭಿವೃದ್ಧಿ, ಹೊಸ ಉತ್ಪನ್ನಗಳ ವಾಣಿಜ್ಯೀಕರಣ, ತಂತ್ರಜ್ಞಾನ ಅಥವಾ ಬೌದ್ಧಿಕ ಆಸ್ತಿಗಳಿಂದ ಪ್ರೇರಿತವಾದ ಸೇವೆಗಳೂ ಸ್ಟಾರ್ಟ್‌ಅಪ್‌ಗಳಾಗಿವೆ. ಫ್ಲಿಪ್‌ಕಾರ್ಟ್, ಪೇಟಿಎಂ, ಓಲಾಕ್ಯಾಬ್ಸ್, ಉಬರ್, ಓಯೊರೂಂ, ಸ್ನ್ಯಾಪ್‌ಡೀಲ್ ಸ್ಟಾರ್ಟ್‌ಅಪ್‌ಗಳು ಈಗಾಗಲೇ ಮನೆಮಾತಾಗಿವೆ. ಇವುಗಳು ಗ್ರಾಹಕರ ಅನೇಕ ಅಗತ್ಯಗಳನ್ನು ಈಡೇರಿಸುತ್ತ ಲಾಭದಾಯಕವಾಗಿ ಮುನ್ನಡೆದಿರುವುದು ಇತರ ಅನೇಕ ನೂರಾರು ಯುವ ಉತ್ಸಾಹಿಗಳಿಗೆ ಉತ್ತೇಜನ ನೀಡುತ್ತಿವೆ.

ಇನ್ಫೊಸಿಸ್ ಕೂಡ ಮೊದಲಿಗೆ ಸಣ್ಣ ಪ್ರಮಾಣದಲ್ಲಿಯೇ, ಅಂದರೆ ಸ್ಟಾರ್ಟ್‌ಅಪ್‌ಗಳ ಮಾದರಿಯಲ್ಲಿಯೇ ಆರಂಭಗೊಂಡಿತ್ತು. ಸಂಸ್ಥೆ ಸ್ಥಾಪಿಸಿದವರ ನಿರಂತರ ಪರಿಶ್ರಮದ ಫಲವಾಗಿ ಸಂಸ್ಥೆಯು ಈಗ ದೇಶದ ಎರಡನೆ ಅತಿದೊಡ್ಡ ಸಾಫ್ಟ್‌ವೇರ್ ರಫ್ತು ಸಂಸ್ಥೆಯಾಗಿ ಬೆಳೆದು ವಿಶ್ವದ ಗಮನ ಸೆಳೆದಿದೆ. ರಾಜ್ಯದಲ್ಲಿ ಸದ್ಯಕ್ಕೆ ಅಸ್ತಿತ್ವಕ್ಕೆ ಬರುತ್ತಿರುವ ಸ್ಟಾರ್ಟ್‌ಅಪ್‌ಗಳು ಪರಿಶ್ರಮ, ಸರ್ಕಾರದ ಬೆಂಬಲದ ಫಲವಾಗಿ ಭವಿಷ್ಯದಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆಯುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಸ್ಟಾರ್ಟ್‌ಅಪ್‌ಗಳಾಗಿ ಹುಟ್ಟಿಕೊಂಡು ಗಮನಾರ್ಹ ಆವಿಷ್ಕಾರಗಳನ್ನು ಮಾಡಿದಂತಹ ಕಂಪನಿಗಳನ್ನು ದೊಡ್ಡ ಕಂಪನಿಗಳು ಖರೀದಿಸಿ ವಿಲೀನಗೊಳಿಸಿಕೊಳ್ಳುವುದು ಸಾಮಾನ್ಯ ಸಂಗತಿಯಾಗಿದೆ. ಸ್ಟಾರ್ಟ್‌ಅಪ್ ನೀತಿ ಜಾರಿಗೆ ತಂದ ದೇಶದ ಮೊದಲ ರಾಜ್ಯ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿರುವ ಕರ್ನಾಟಕವು, ಈ ವಿಷಯದಲ್ಲಿ ಇತರ ರಾಜ್ಯಗಳಿಗೆ ಮೇಲ್ಪಂಕ್ತಿ ಹಾಕಿದೆ. 2020ರಷ್ಟೊತ್ತಿಗೆ ರಾಜ್ಯದಲ್ಲಿ 20 ಸಾವಿರದಷ್ಟು ಸ್ಟಾರ್ಟ್‌ಅಪ್‌ಗಳನ್ನು ಆರಂಭಿಸುವುದು ರಾಜ್ಯ ಸರ್ಕಾರದ ಆಶಯವಾಗಿದೆ. ಇದರಿಂದ ಒಟ್ಟಾರೆ 18 ಲಕ್ಷದಷ್ಟು ಹೊಸ ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿವೆ ಎಂದು ನಿರೀಕ್ಷಿಸಲಾಗಿದೆ. ಹೊಸದಾಗಿ ಉದ್ಯಮ ಸ್ಥಾಪಿಸುವವರೆಗೆ ಪರಿಣತರಿಂದ ಮಾಹಿತಿ ಹಂಚಿಕೆ, ಪ್ರತಿಷ್ಠಿತ ಸಂಸ್ಥೆಗಳಲ್ಲಿ ತರಬೇತಿ ನೀಡುವ ಮೂಲಕ ನವೋದ್ಯಮಿಗಳಿಗೆ ಕರ್ನಾಟಕ ಸರ್ಕಾರ ಹಲವಾರು ಸೌಲಭ್ಯಗಳನ್ನು ಒದಗಿಸಲು ಮುಂದಾಗಿದೆ. ಕೇಂದ್ರ ಸರ್ಕಾರದ ಭಾರತದಲ್ಲಿಯೇ ತಯಾರಿಸಿ ಮತ್ತು 'ಡಿಜಿಟಲ್ ಇಂಡಿಯಾ' ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ರಾಜ್ಯದಲ್ಲಿನ ಸ್ಟಾರ್ಟ್‌ಅಪ್‌ಗಳಿಗೆ ಅಗತ್ಯ ಉತ್ತೇಜನ ನೀಡಲಾಗುತ್ತಿದೆ. ಯುವ ಜನರಲ್ಲಿನ ಉದ್ಯಮ ಸ್ಥಾಪಿಸುವ ಹೊಂಗನಸಿಗೆ ರಾಜ್ಯ ಸರ್ಕಾರ ನೀರೆರೆಯುತ್ತಿದೆ. ಉದ್ಯಮ ಸ್ಥಾಪಿಸುವ ಆಲೋಚನೆ, ಕ್ಷೇತ್ರಗಳ ಆಯ್ಕೆ, ಬಂಡವಾಳ ಹೂಡಿಕೆ, ತರಬೇತಿ ಮತ್ತು ಉದ್ದಿಮೆ ಆರಂಭಿಸುವಲ್ಲಿ ಸ್ಥಿರತೆ ಕಾಯ್ದುಕೊಳ್ಳುವಂತಹ ಹಲವಾರು ಪ್ರಾಥಮಿಕ ಸಂಗತಿಗಳನ್ನು ಉದಯೋನ್ಮುಖ ಉದ್ದಿಮೆಗಳಿಗೆ ಮನವರಿಕೆ ಮಾಡಿಕೊಡಲು ಸರ್ಕಾರ ಮುಂದಾಗಿದೆ. ಹೊಸ ಉದ್ದಿಮೆ ಆರಂಭಿಸುವ ಬಗ್ಗೆ ನವೋದ್ಯೋಮಿಗಳ ಉತ್ಸಾಹವನ್ನು ಕಾರ್ಯರೂಪಕ್ಕೆ ತರಲು ಹಲವಾರು ಬಗೆಯ ತರಬೇತಿಗಳನ್ನೂ ನೀಡಲಾಗುತ್ತಿದೆ. ಅವುಗಳ ಪೈಕಿ ಪ್ರವಾಸ ಸೌಲಭ್ಯವೂ ಸೇರಿದೆ. ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ಅನುಭವ ಪಡೆದು ಮರಳಿ ಬರುವ ಯುವ ಉದ್ಯಮಿಗಳು ಪೂರ್ಣ ಪ್ರಮಾಣದ ಉದ್ಯಮ ಸ್ಥಾಪನೆಗೂ ನೆರವು ಸಿಗಲಿದೆ.

**ಎಸ್‌ಬಿಐ ಪ್ರತ್ಯೇಕ ಶಾಖೆ**

ರಾಜ್ಯದಲ್ಲಿನ ಸ್ಟಾರ್ಟ್‌ಅಪ್ ಕ್ರಾಂತಿಗೆ ಬೆಂಬಲ ನೀಡಲು, ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸ್ಟಾರ್ಟ್‌ಅಪ್‌ಗಳಿಗಾಗಿಯೇ ಬೆಂಗಳೂರಿನಲ್ಲಿ ಪ್ರತ್ಯೇಕ ಶಾಖೆ ಆರಂಭಿಸಿ ರಾಜ್ಯ ಸರ್ಕಾರದ ಯೋಜನೆಗಳಿಗೆ ಅಗತ್ಯ ಸಲಹೆ, ಹಣಕಾಸು ನೆರವು ನೀಡುವ ಮೂಲಕ ಒತ್ತಾಸೆಯಾಗಿ ನಿಂತಿದೆ. 'ಎಸ್‌ಬಿಐನ ಇನ್ ಕ್ಯೂಬ್', ಸ್ಟಾರ್ಟ್‌ಅಪ್‌ಗಳ ಯುವ ಉದ್ಯಮಿಗಳಿಗೆ ಸಲಹಾ ಸೇವೆ ಸೇರಿದಂತೆ ಅಗತ್ಯ ನೆರವು ನೀಡಲಿದೆ. ಯುವ ಉದ್ಯಮಿಗಳು ತಾವು ಕೈಗೊಳ್ಳುವ ವಹಿವಾಟಿನಲ್ಲಿ ಸ್ವಲ್ಪ ಯಶಸ್ಸು ಗಳಿಸುತ್ತಿದ್ದಂತೆ ಹಣಕಾಸಿನ ನೆರವು ನೀಡುವುದು ಬ್ಯಾಂಕಿನ ಉದ್ದೇಶವಾಗಿದೆ. ಸ್ಟಾರ್ಟ್‌ಅಪ್‌ಗಳಲ್ಲಿ ಹಣ ಹೂಡಿಕೆ ಮಾಡುವವರಿಗೇನೂ ಕೊರತೆ ಇಲ್ಲ. ಇದಕ್ಕೆ ಪೂರಕವಾಗಿ ಸರ್ಕಾರವೇ ರೂ 10 ಸಾವಿರ ಕೋಟಿಗಳಷ್ಟು ನೆರವಿಗೆ ಮುಂದಾಗಿರುವುದು,

ನವೋದ್ಯಮಗಳ ಆರಂಭಕ್ಕೆ ಭಾರಿ ಉತ್ತೇಜನ ನೀಡಲಿದೆ. ಸ್ಟಾರ್ಟ್‌ಅಪ್‌ಗಳಿಗೆಂದೇ ಅನೇಕ ರಿಯಾಯ್ತಿಗಳನ್ನು ಘೋಷಿಸಿರುವುದರ ಜತೆಗೆ, ಉದ್ದಿಮೆ ವಹಿವಾಟು ಆರಂಭಿಸಲು 'ಉದ್ಯಮ ಸ್ನೇಹಿ'ಯಾದ ಪೂರಕ ವಾತಾವರಣ ಕಲ್ಪಿಸಲು ಸರ್ಕಾರ ಬದ್ಧತೆ ಪ್ರಕಟಿಸಿರುವುದೂ ಇಲ್ಲಿ ಮುಖ್ಯವಾಗಿದೆ. ಹೊಸ ಉದ್ದಿಮೆಗಳ ಏಳಿಗೆಗೆ ಈ ಎಲ್ಲ ಕ್ರಮಗಳು ನೆರವಾಗಲಿವೆ. ಆರಂಭದ ಇದೇ ಬಗೆಯ ಉತ್ಸಾಹವನ್ನು ನಿರಂತರವಾಗಿ ಕಾಯ್ದುಕೊಳ್ಳಬೇಕಾಗಿದೆ. ಸರ್ಕಾರದ ಹಸ್ತಕ್ಷೇಪ ಕಡಿಮೆಯಾದಷ್ಟೂ ಸ್ಟಾರ್ಟ್‌ಅಪ್‌ಗಳು ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಲಿವೆ.

ಹಣಕಾಸು, ಸಣ್ಣ ಕೈಗಾರಿಕೆ, ಕಂಪೆನಿ ವ್ಯವಹಾರ, ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಗಳು ಸ್ಟಾರ್ಟ್‌ಅಪ್‌ಗಳಿಗೆ ಬೆಂಬಲವಾಗಿ ನಿಲ್ಲಬೇಕಾಗಿದೆ. ಹೊಸ ಉದ್ದಿಮೆ ಸ್ಥಾಪಿಸುವ ಬಗ್ಗೆ ಯುವ ಜನತೆಯಲ್ಲಿ ಕಂಡು ಬಂದಿರುವ ಉತ್ಸಾಹದ ಫಲವಾಗಿ ಬೆಂಗಳೂರು ಸ್ಟಾರ್ಟ್‌ಅಪ್‌ಗಳ ರಾಜಧಾನಿಯಾಗಿಯೂ ಬೆಳೆಯುತ್ತಿರುವುದು ಸಂತಸದ ಬೆಳವಣಿಗೆಯಾಗಿದೆ. ಸಮಾಜದ ಬಹುದೊಡ್ಡ ಬಳಕೆದಾರರ ವಿವಿಧ ಬಗೆಯ ಅಗತ್ಯಗಳು ಮತ್ತು ಆಶೋತ್ತರಗಳನ್ನು ಈಡೇರಿಸುವ ಸಾಫ್ಟ್‌ವೇರ್, ಮೊಬೈಲ್ ಆ್ಯಪ್ ಆಧರಿತ ಉದ್ದಿಮೆಗಳನ್ನು ಸ್ಥಾಪಿಸುವ ಪ್ರವೃತ್ತಿ ಯುವ ತಂತ್ರಜ್ಞರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ದೊಡ್ಡ ಕಂಪೆನಿಗಳ ಗುತ್ತಿಗೆಗಳನ್ನು ಪಡೆಯುವ ಅಥವಾ ತಾವೇ ತಯಾರಿಸಿದ ತಂತ್ರಾಂಶಗಳನ್ನು ದೊಡ್ಡ ಕಂಪೆನಿಗಳಿಗೆ ಮಾರಾಟ ಮಾಡಿ ಬಂದ ದುಡ್ಡಿನಿಂದ ವಹಿವಾಟು ವೃದ್ಧಿಸುವ ಈ ಕಂಪೆನಿಗಳ ಬಂಡವಾಳ ಅದರಲ್ಲಿ ದುಡಿಯುವ ಬೆರಳಿಕೆಯಷ್ಟು ಕೌಶಲಭರಿತ ನೌಕರರು ಮಾತ್ರ. ಇಂತಹ ಕಂಪೆನಿಗಳು ಬೆಂಗಳೂರಿನಲ್ಲಿ ಗಮನಾರ್ಹ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬರುತ್ತಿವೆ.

### ನಾಸ್ಕಾಂ ನೆರವಿನ ಹಸ್ತ

ತಮ್ಮ ಬಳಿಯಲ್ಲಿ ಇರುವ ಅಲ್ಪಮಟ್ಟಿಗಿನ ಬಂಡವಾಳವನ್ನೇ ಹೂಡಿಕೆ ಮಾಡಿ ಸಣ್ಣ ಪ್ರಮಾಣದಲ್ಲಿ ಹೊಸದಾಗಿ ಉದ್ದಿಮೆ ಆರಂಭಿಸುವ ಉತ್ಸಾಹಿ ಉದ್ಯಮಶೀಲರ ಮತ್ತು ಅವರು ಆರಂಭಿಸಿದ ಉದ್ದಿಮೆಯ ಹಿತಾಸಕ್ತಿ ರಕ್ಷಿಸಲು ರಾಷ್ಟ್ರೀಯ ಸಾಫ್ಟ್‌ವೇರ್ ಹಾಗೂ 'ಸೇವಾ ಸಂಸ್ಥೆಗಳ ಒಕ್ಕೂಟ' (ನಾಸ್ಕಾಂ) ಕೂಡ ಮುಂದಾಗಿದೆ. ಸ್ಟಾರ್ಟ್‌ಅಪ್ ಕಂಪೆನಿಗಳನ್ನು ತೆರೆಯುವವರಿಗೆ ವಿಶಾಲವಾದ ಕಚೇರಿ ಸ್ಥಳಾವಕಾಶ, ಉದ್ಯೋಗಿಗಳ ಕಾರ್ಯನಿರ್ವಹಣೆಗೆ ಜಾಗ, ನಿರಂತರ ವಿದ್ಯುತ್ ಪೂರೈಕೆ, ಅಡೆತಡೆ ಇಲ್ಲದಂತಹ ಅಂತರ್ಜಾಲ ಸಂಪರ್ಕ ವ್ಯವಸ್ಥೆ, ಜತೆಗೆ ಕಚೇರಿ ಆಡಳಿತಕ್ಕೆ ಸಂಬಂಧಿಸಿದಂತೆ ಸಭೆ ನಡೆಸಲು ಯೋಗ್ಯವಾದ ಸಭಾಂಗಣ ಕೊಠಡಿಗಳನ್ನು ಒದಗಿಸಿದೆ.

'ನಾಸ್ಕಾಂ' ನೀಡಿರುವ ವಿಶ್ವಶ್ರೇಣಿ ಮೂಲಸೌಕರ್ಯದಿಂದ ಸ್ಟಾರ್ಟ್‌ಅಪ್ ಕಂಪೆನಿಗಳ ಆರಂಭ ಮಾತ್ರವಲ್ಲ, ಅವುಗಳ ಭವಿಷ್ಯವೂ ಉತ್ತಮವಾಗಿರಲಿದೆ. ಒಂದೇ ಸೂರಿನಡಿ ಹಲವು ಅನ್ವೇಷಣೆಗಳು ನಡೆಯುವ ಸಾಧ್ಯತೆ ಇವೆ. ಹಲವು ಕಂಪೆನಿಗಳು ಒಗ್ಗೂಡಿ ತಮ್ಮ ಜ್ಞಾನ, ಅನುಭವವನ್ನು ಹಂಚಿಕೊಂಡಲ್ಲಿ ಉದ್ದಿಮೆಯೂ ಉತ್ತಮವಾಗಿ ನಡೆಯಲಿದೆ. 'ಸ್ಟಾರ್ಟ್‌ಅಪ್'ಗೆ ಉತ್ತೇಜನ ನೀಡುವ ಕರ್ನಾಟಕ ಸರ್ಕಾರದ ನಿರ್ಧಾರದಿಂದಾಗಿ ಸ್ಥಳೀಯ ಉದ್ದಿಮೆ ಹಾಗೂ ಉದ್ಯೋಗಾಕಾಂಕ್ಷಿಗಳಿಗೆ ಹೆಚ್ಚು ಪ್ರಯೋಜನ ಲಭಿಸಿದೆ. ಈ ಉದ್ದಿಮೆ ಕ್ಷೇತ್ರವನ್ನು 2020ರ ವೇಳೆಗೆ ಹತ್ತುಪಟ್ಟುಗಳಷ್ಟು ಬೃಹತ್ ಪ್ರಮಾಣದಲ್ಲಿ ಬೆಳೆಸುವುದು 'ಸ್ಟಾರ್ಟ್‌ಅಪ್' ಯೋಜನೆಯ ಪ್ರಮುಖ ಗುರಿಯಾಗಿದೆ.

ನಾಸ್ಕಾಂ ಅಲ್ಲದೆ ನುಮಾ ಸೇರಿದಂತೆ ಹಲವಾರು ಸಂಸ್ಥೆಗಳು ಖಾಸಗಿ ನೆಲೆಯಲ್ಲಿ ಸ್ಟಾರ್ಟ್‌ಅಪ್‌ಗಳಿಗೆ ಇನ್ಕ್ಯುಬೇಟರ್ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಿವೆ. ಬಹುರಾಷ್ಟ್ರೀಯ ಇಲ್ಲವೆ ದೇಶಿ ಬೃಹತ್ ಉದ್ದಿಮೆ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳನ್ನು ನಿಭಾಯಿಸುತ್ತಿದ್ದ ಅನೇಕ ಉತ್ಸಾಹಿಗಳು ಹುದ್ದೆ ತೊರೆದು ಹೊಸ ಉದ್ದಿಮೆ ಸ್ಥಾಪಿಸುತ್ತಿದ್ದಾರೆ. ತಮ್ಮ ದುಡಿಮೆಯ ಹಣವನ್ನು ಮೂಲ ಬಂಡವಾಳವಾಗಿ ತೊಡಗಿಸಿ ಸಮಾಜಕ್ಕೆ ಉಪಯುಕ್ತವಾಗುವಂತಹ ಹಲವಾರು ಉದ್ದಿಮೆಗಳನ್ನು ಸ್ಥಾಪಿಸುತ್ತಿದ್ದಾರೆ. ಇದರಿಂದ ಸಮಾಜಕ್ಕೆ ತುಂಬ ಪ್ರಯೋಜನ ಆಗುತ್ತಿದೆ. ಜತೆಗೆ ಅರ್ಥ ವ್ಯವಸ್ಥೆಗೂ ಲಾಭ ದೊರೆಯುತ್ತಿದೆ. ನಿರುದ್ಯೋಗಿಗಳಿಗೆ ಹೊಸ ಹೊಸ ಉದ್ಯೋಗ ಅವಕಾಶಗಳೂ ಸೃಷ್ಟಿಯಾಗುತ್ತಿವೆ. ಈ ಮೂಲಕ ದೇಶಿ ಅರ್ಥವ್ಯವಸ್ಥೆಯಲ್ಲಿ ಹೊಸ ಸಂಚಲನವೇ ಮೂಡಿದೆ. ಈಹೊಸ ನವೋದ್ಯಮಗಳಲ್ಲಿ ಮೊಬೈಲ್ ಅಪ್ಲಿಕೇಷನ್, ಅಂತರ್ಜಾಲ ತಾಣಗಳ ಅಭಿವೃದ್ಧಿ ಸೇರಿದಂತೆ ಹೊಸ ತಲೆಮಾರಿನ ಆಧುನಿಕ ಸ್ವರೂಪದ ಉದ್ದಿಮೆಗಳ ಸಂಖ್ಯೆಯೇ ದೊಡ್ಡದಿದೆ. ಈ ಸ್ಟಾರ್ಟ್‌ಅಪ್ ಎಂಬ ಸಣ್ಣ ಉದ್ಯಮ ಕ್ಷೇತ್ರ ಉತ್ತಮ ಕೌಶಲ ಹೊಂದಿರುವವರಿಗೆ ವರವಾಗಿ ಪರಿಣಮಿಸಿದೆ.

ಕರ್ನಾಟಕದಲ್ಲಿ ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳು ಎಂಜಿನಿಯರಿಂಗ್ ಪದವಿ ಪಡೆದು ಹೊರಬರುತ್ತಿದ್ದಾರೆ. ಮಾಹಿತಿ ತಂತ್ರಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ 400ಕ್ಕೂ ಹೆಚ್ಚು ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರಗಳು ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಉದ್ಯೋಗ ಬೇಟೆಗೆ ತೊಡಗುವ ಬೃಹತ್ ಪ್ರಮಾಣದ ಮಾನವ ಸಂಪನ್ಮೂಲಕ್ಕೆ ಉದ್ಯೋಗ ಒದಗಿಸುವುದಕ್ಕೆ ಸ್ಟಾರ್ಟ್‌ಅಪ್ ಕಂಪೆನಿಗಳೇ ಸೂಕ್ತ ಪರಿಹಾರ ಎಂಬುದನ್ನು ರಾಜ್ಯ ಸರ್ಕಾರವೂ ಮನಗಂಡಂತಿದೆ. ಇದೇ ಕಾರಣಕ್ಕೆ ಕರ್ನಾಟಕದಲ್ಲಿಯೂ 'ಸ್ಟಾರ್ಟ್‌ಅಪ್' ಪರಿಕಲ್ಪನೆಗೆ ಉತ್ತೇಜನ ನೀಡುವ ಭರವಸೆ ನೀಡಿ ಅದನ್ನು ಜಾರಿಗೆ ತರಲೂಮುಂದಾಗಿದೆ.

ಬೆಂಗಳೂರಿನಲ್ಲಿ ಸ್ಟಾರ್ಟ್‌ಅಪ್ ಕಂಪನಿಗಳ ಸ್ಥಾಪನೆ ಪ್ರಮಾಣವು ಇತ್ತೀಚಿನ ದಿನಗಳಲ್ಲಿ ಗಮನಾರ್ಹ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಬೆಂಗಳೂರನ್ನು ಸ್ಟಾರ್ಟ್‌ಅಪ್ ರಾಜಧಾನಿಯನ್ನಾಗಿ ಇನ್ನಷ್ಟು ಅಭಿವೃದ್ಧಿಪಡಿಸಬೇಕಾಗಿದೆ. ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಮೊದಲ ತಲೆಮಾರಿನ ಸ್ಟಾರ್ಟ್‌ಅಪ್ ಉದ್ಯಮಿಗಳಾಗುವಂತೆ ಉತ್ತೇಜಿಸಲು ಸಾಕಷ್ಟು ಕ್ರಮಗಳನ್ನೂ ಕೈಗೊಳ್ಳಬೇಕಾಗಿದೆ. ಈಗಾಗಲೇ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಕೇಂದ್ರವಾಗಿರುವ ಬೆಂಗಳೂರು, ಭಾರತದ ಸ್ಟಾರ್ಟ್‌ಅಪ್ ರಾಜಧಾನಿಯಾಗಿಯೂ ಬೆಳೆಯುವ ನಿಟ್ಟಿನಲ್ಲಿ ದಾಪುಗಾಲು ಹಾಕುತ್ತಿದೆ. ಸ್ಟಾರ್ಟ್‌ಅಪ್‌ಗಳ ಬೆಳವಣಿಗೆಗೆ ಪೂರಕವಾದ ಪರಿಸರ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ರಾಜ್ಯ ಸರ್ಕಾರವೂ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದೆ. ❑

ಒತ್ತಾಸೆ

# ಸಣ್ಣ ಉದ್ದಿಮೆಗಳಿಗೆ ಮುದ್ರಾ

* ಉಮಾಶಂಕರ ಬ. ಹಿರೇಮಠ

ದೇಶದ ಆರ್ಥಿಕತೆಯ ಮೇಲೆ ವ್ಯತಿರಿಕ್ತ ಪ್ರಭಾವ ಬೀರುವ ನಿರುದ್ಯೋಗಕ್ಕೆ ಕಡಿವಾಣ ಹಾಕುವುದರ ಜೊತೆಗೆ ಯುವಕರು ಸ್ವಯಂ ಉದ್ಯೋಗ ಕೈಗೊಳ್ಳಲು, ಸಣ್ಣ ಉದ್ದಿಮೆ ಸ್ಥಾಪಿಸಲು ಬೇಕಾದ ಹಣಕಾಸಿನ ನೆರವು ನೀಡುವ ಸದುದ್ದೇಶದಿಂದ ಕೇಂದ್ರ ಸರ್ಕಾರ ಈಚೆಗೆ ಜಾರಿಗೆ ತಂದ ಮಹತ್ವಾಕಾಂಕ್ಷೆಯ ಹಣಕಾಸು ಸಂಸ್ಥೆಯೇ ಮುದ್ರಾ ಬ್ಯಾಂಕ್.

ಕಿರು ಹಣಕಾಸು ಸಂಸ್ಥೆಗಳಿಗೆ ಸಾಲ ನೀಡುವ ಸಂಸ್ಥೆಯಾಗಿರುವ ಭಾರತೀಯ ಸಣ್ಣ ಉದ್ಯಮಗಳ ಅಭಿವೃದ್ಧಿ ಬ್ಯಾಂಕ್‌ನ ಅಂಗ ಸಂಸ್ಥೆಯಾಗಿರುವ ಈ ಮುದ್ರಾ ಪ್ರಾರಂಭದಲ್ಲಿ ಪ್ರಧಾನಮಂತ್ರಿ ಮುದ್ರಾ ಯೋಜನೆ ಎಂಬ ಕಾರ್ಯಕ್ರಮವಾಗಿ ಜನ್ಮತಾಳಿ ಈಗ ಸಣ್ಣ ಉದ್ಯಮಗಳ ಅಭಿವೃದ್ಧಿ ಮತ್ತು ಮರು ಹಣಕಾಸು ಸಂಸ್ಥೆಯೇ ಮುದ್ರಾ ಬ್ಯಾಂಕ್ ಆಗಿ ರೂಪುಗೊಂಡಿದೆ.

ದೇಶದ ಸಣ್ಣ, ಅತಿ ಸಣ್ಣ ಉದ್ಯಮಗಳಿಗೆ ಆರ್ಥಿಕ ನೆರವು ನೀಡಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 2015–16ನೇ ಸಾಲಿನ ಬಜೆಟ್‌ದಲ್ಲಿ ಘೋಷಿಸಿದ ಮುದ್ರಾ ಯೋಜನೆ ಸಣ್ಣ ಉದ್ಯಮಿಗಳಿಗೆ ಸಂಜೀವಿನಿಯಾಗಿ ಪರಿವರ್ತನೆಗೊಂಡಿದೆ. ಏಪ್ರಿಲ್ 8, 2015 ರಂದು ಲೋಕಾರ್ಪಣೆಗೊಂಡ ಈ ಬ್ಯಾಂಕಿಂಗ್ ವ್ಯವಸ್ಥೆ ಸ್ವಯಂ ಉದ್ಯೋಗಿಗಳಿಗೆ ಮತ್ತು ಕಿರು ಉದ್ಯಮಗಳಿಗೆ ಆಶಾಕಿರಣವಾಗಿದೆ. ಸಣ್ಣ ಹಣಕಾಸು ಸಂಸ್ಥೆಗಳಿಗೆ ಮರುಸಾಲ ಸೌಲಭ್ಯವನ್ನು ಶೇ 7ರ ಬಡ್ಡಿದರದಲ್ಲಿ ಮುದ್ರಾ ಬ್ಯಾಂಕ ಒದಗಿಸುತ್ತದೆ. ಸಣ್ಣ ಉದ್ದಿಮೆದಾರರು ಪಡೆಯುವ ಸಾಲದ ಮೇಲೆ ಗರಿಷ್ಠ ಬಡ್ಡಿಯ ದರ ಶೇ. 12ರಷ್ಟು ಮಾತ್ರ ವಿಧಿಸುತ್ತದೆ. ಸಾಲದ ಮರುಪಾವತಿಯ ಅವಧಿಯು ಕೂಡಾ 3ರಿಂದ 5ವರ್ಷ ವರೆಗೆ ಕಾಲಾವಕಾಶ ನೀಡಲಾಗುತ್ತದೆ. ಈ ಎಲ್ಲ ಪೂರಕವಾದ ಅಂಶಗಳ ಜೊತೆಗೆ ಅತೀ ಮುಖ್ಯವಾಗಿದ್ದು, ಯಾವುದೇ ಭದ್ರತೆ ಒದಗಿಸದೇ ಸಣ್ಣ ಉದ್ದಿಮೆದಾರರು ಸಾಲ ಪಡೆಯಲು ಅವಕಾಶ ನೀಡಿರುವುದಾಗಿದೆ.

### ಹಿನ್ನೆಲೆ

ಸೇವಾ ವಲಯದಲ್ಲಿರುವ ನಿರ್ಮಾಣ, ವ್ಯಾಪಾರ, ಸಾರಿಗೆ, ಹೋಟೆಲ್, ರಿಯಲ್ ಎಸ್ಟೇಟ್ ಮತ್ತು ಇತರೆ ಸೇವಾ ವೃತ್ತಿಗಳ ಕುಶಲ ಕರ್ಮಿಗಳ ದೃಷ್ಟಿಯಲ್ಲಿಟ್ಟುಕೊಂಡು ಅವರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಸರ್ಕಾರ ಮುದ್ರಾ ಯೋಜನೆಯನ್ನು ಜಾರಿಗೊಳಿಸಿತು.

ಒಟ್ಟಾರೆ ಆಂತರಿಕ ಉತ್ಪಾದನೆಯಲ್ಲಿ ಈ ವರ್ಗದಿಂದಲೂ ಶೇ 50ರಷ್ಟು ಕೊಡುಗೆ ಇರುವುದನ್ನು ಮನಗಂಡ ಸರ್ಕಾರ ಈ ನಿರ್ಧಾರಕ್ಕೆ ಬಂದಿದ್ದು ಈಗ

**ಮುದ್ರಾ ಬ್ಯಾಂಕಿನ ಸದುಪಯೋಗ ಪಡೆಯುವಲ್ಲಿ ದಕ್ಷಿಣ ಭಾರತದ ರಾಜ್ಯಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಈ ಮೂಲಕ ಸಣ್ಣ ಉದ್ಯಮಗಳು ಈ ರಂಗದಲ್ಲಿ ಹೊಸ ಮನ್ವಂತರಕ್ಕೆ ಕಾರಣವಾಗುತ್ತಿರುವುದು ಸಂತಸದ ಸಂಗತಿಯೇ ಸರಿ.**

| ಮುದ್ರಾ ಬ್ಯಾಂಕಿನ ಸಾಲ ವಿತರಣೆಯ ಮಾದರಿಗಳು | | |
|---|---|---|
| # ಶಿಶು | ರೂ. 50ಸಾವಿರ ವರೆಗೆ | ಆರಂಭದ ಹಂತ |
| # ಕಿಶೋರ | ರೂ. 50,000 ರಿಂದ 5ಲಕ್ಷ | ಮಧ್ಯದ ಹಂತ |
| # ತರುಣ್ | ರೂ. 5ಲಕ್ಷ ದಿಂದ 10 ಲಕ್ಷದವರೆಗೆ | ಕೊನೆಯ ಹಂತ |

* ಪತ್ರಕರ್ತರು, ಯಲಬುರ್ಗಾ – 583236, ಕೊಪ್ಪಳ ಜಿಲ್ಲೆ. E-mail : ubhiremath@gmail.com

ಇತಿಹಾಸ. ಬ್ಯಾಂಕುಗಳ ನಿರ್ಲಕ್ಷ್ಯದಿಂದಾಗಿ ಸ್ಥಳೀಯ ಹಣಕಾಸು ಸಂಸ್ಥೆ ಹಾಗೂ ಕೈಸಾಲಕ್ಕೆ ಮುಂದಾಗಿ ಅಭಿವೃದ್ಧಿ ಕಾಣದೇ ಹೆಚ್ಚಿನ ಬಡ್ಡಿ ಕಟ್ಟಿ ತೀವ್ರ ನಷ್ಟ ಅನುಭವಿಸುತ್ತಿರುವ ಹೆಚ್ಚಿನ ಸನ್ನಿವೇಶಗಳನ್ನು ಪರಾಮರ್ಶಿಸಲಾಯಿತು; ಕಡಿಮೆ ಬಡ್ಡಿದರದಲ್ಲಿ, ಯೋಗ್ಯತೆಗನುಗುಣವಾಗಿ ಸರಳ ನಿಯಮಾವಳಿಗಳ ಅಡಿಯಲ್ಲಿ ಸಾಲ ಸೌಲಭ್ಯ ಕಲ್ಪಿಸಿ ಹಿಂದುಳಿದ ಸಣ್ಣ ಮತ್ತು ಅತೀ ಸಣ್ಣ ಉದ್ದಿಮೆದಾರರನ್ನು ಅಭಿವೃದ್ಧಿಗೊಳಿಸುವುದರ ಜೊತೆಗೆ ದೇಶದ ಆಂತರಿಕ ಉತ್ಪಾದಕತೆ ಹೆಚ್ಚಿಸಿ ಆರ್ಥಿಕಾಭಿವೃದ್ಧಿ ಕಂಡುಕೊಳ್ಳುವ ದೂರದೃಷ್ಟಿ ಈ ಬ್ಯಾಂಕ್ ಹುಟ್ಟಿಗೆ ಕಾರಣವಾಗಿದೆ.

ಇತ್ತೀಚೆಗೆ ಪ್ರಕಟಕೊಂಡ ರಾಷ್ಟ್ರೀಯ ಮಾದರಿ ಸಮೀಕ್ಷೆ ವರದಿ ಪ್ರಕಾರ ದೇಶದಲ್ಲಿ 5,80 ಕೋಟಿ ಉದ್ದಿಮೆಗಳು ಸಣ್ಣ ಮತ್ತು ಮಧ್ಯಮ ವರ್ಗದ ವ್ಯಾಪ್ತಿಯಲ್ಲಿವೆ. ಅಲ್ಲದೇ ಇದರಲ್ಲಿ ಶೇ 65ಕ್ಕೂ ಅಧಿಕ ಉದ್ಯಮಗಳು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸೇರಿದ್ದಾಗಿವೆ. ಮುಖ್ಯವಾಗಿ 1.2ಕೋಟಿ ಜನರಿಗೆ ಉದ್ಯೋಗ ಕಲ್ಪಿಸಿಕೊಟ್ಟ ಈ ಸಣ್ಣ ಮತ್ತು ಅತೀ ಸಣ್ಣ ಉದ್ಯಮಗಳು ಸುಮಾರು 12ಲಕ್ಷ ಕೋಟಿ ಬಂಡವಾಳದೊಂದಿಗೆ ವ್ಯವಹಾರ ನಡೆಸುತ್ತಿರುವ ಬಗ್ಗೆ ಬೆಳಕು ಚೆಲ್ಲಿದೆ.

ಯಾವ ಉದ್ಯಮ ಪ್ರಾರಂಭಿಸಲಾಗಿದೆ ಅಥವಾ ಉದ್ಯಮ ಪ್ರಾರಂಭದ ಪರಿಕಲ್ಪನೆ ಹೊಂದಲಾಗಿದೆ ಎಂಬ ಮಾಹಿತಿಯನ್ನು ಮುದ್ರಾ ಬ್ಯಾಂಕಿಗೆ ಮಾಹಿತಿ ನೀಡಿ ಅಗತ್ಯ ಪೂರಕ ಮಾಹಿತಿ ಪಡೆದು ಉದ್ಯಮದ ಉತ್ತೇಜನಕ್ಕೆ ಸ್ಪಷ್ಟ ಚಿತ್ರಣ ನೀಡುವ ಮೂಲಕ ಸಾಲ ಪಡೆಯಲು ಅರ್ಹತೆ ಪಡೆಯಬಹುದಾಗಿದೆ. ಕಾರ್ಡ್ ಬಳಸಿ ಉದ್ಯಮಕ್ಕೆ ಬೇಕಾದ ಅಗತ್ಯ ಸಾಮಗ್ರಿಗಳನ್ನು ಖರೀದಿಸಲು ಅನುಕೂಲವಾಗುತ್ತದೆ.

ಆದರೆ ನಿರ್ಲಕ್ಷ್ಯಕ್ಕೆ ಒಳಗಾದ, ರಾಷ್ಟ್ರೀಕೃತ ಬ್ಯಾಂಕುಗಳ ಕಠಿಣ ಸಾಲ ನೀತಿ, ಅಧಿಕ ಬಡ್ಡಿ ಹಾಗೂ ಅಗತ್ಯ ಷರತ್ತುಗಳು ಹೀಗೆ ಉದ್ಯಮಗಳ ಅಭಿವೃದ್ಧಿಗೆ ಸ್ನೇಹವಾಗಿರದ ಪ್ರಸ್ತುತ ಸನ್ನಿವೇಶದಲ್ಲಿ ಮುದ್ರಾ ಬ್ಯಾಂಕ್ ವರದಾನವಾಗಿದೆ. ಇದಕ್ಕೂ ಮೊದಲು ಎಸ್‌ಐಡಿಬಿಐ ಕೂಡಾ ಕೈಗಾರಿಕೆಗಳಿಗೆ ಆರ್ಥಿಕ ನೆರವು ನೀಡುತ್ತಿದ್ದರೂ ನಿರೀಕ್ಷೆಯಂತೆ ಪ್ರಗತಿ ಕಾಣದೇ ಇರುವುದರಿಂದ ಅದರ ಅಡಿಯಲ್ಲಿಯೇ ಹೊಸ ವಿನ್ಯಾಸದೊಂದಿಗೆ ಮೇಕ್ ಇನ್ ಇಂಡಿಯಾ ಪರಿಕಲ್ಪನೆಗೆ ಪೂರಕವಾಗುವಂತೆ ಕೇಂದ್ರ ಸಣ್ಣ ಕೈಗಾರಿಕೆಗಳ ಉತ್ತೇನಕ್ಕೆ ಈ ಮುದ್ರಾ ಬ್ಯಾಂಕ್ ತಲೆ ಎತ್ತಿದೆ.




**ಪ್ರಚಲಿತ**

ರೂ.3000ಕೋಟಿ ಸಾಲ ಖಾತ್ರಿ ನಿಧಿ ಲಭ್ಯತೆಯ ಜೊತೆಗೆ ರೂ. 20ಸಾವಿರ ಕೋಟಿ ಮೂಲ ಬಂಡವಾಳದೊಂದಿಗೆ ಕಾರ್ಯಾರಂಭ ಮಾಡಿರುವ ಈ ಮುದ್ರಾ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದಲ್ಲಿ 1.22ಲಕ್ಷ ಕೋಟಿ ಸಾಲ ವಿತರಣೆಯ ಗುರಿ ಹೊಂದಲಾಗಿತ್ತು. ಆದರೆ 2016ರ ಜ.8ಕ್ಕೆ ಇರುವಂತೆ ರೂ.81ಸಾವಿರ ಕೋಟಿ ಸಾಲ ನೀಡಿದ್ದು, 2.3 ಕೋಟಿ ಇದರ ಫಲಾನುಭವಿಗಳಾಗಿದ್ದಾರೆ. ಇದು ಸ್ಥಾಪನೆಗೊಂಡು ಒಂದು ವರ್ಷದ ಅವಧಿಯಲ್ಲಿ ಮಾಡಿದ ಸಾಧನೆಯ ಒಂದು ಚಿತ್ರಣ. ಆರ್ಥಿಕ ಬಲವರ್ಧನೆಯಲ್ಲಿ ಮುದ್ರಾ ಬ್ಯಾಂಕ್ ಮಹತ್ವದ ಪಾತ್ರ ನಿರ್ವಹಿಸುತ್ತಿರುವುದುರಿಂದ ಮುದ್ರಾ ಬ್ಯಾಂಕ್‌ನ ಅಭಿವೃದ್ಧಿ ಬಗ್ಗೆ ಸರ್ಕಾರವು ಕೂಡಾ ಹೆಚ್ಚಿನ ಆಸಕ್ತಿ ತೋರುವಂತೆ ಮಾಡಿದೆ.

ಕಿರು ಅಥವಾ ಸ್ವ ಸಹಾಯ ಸಂಘಗಳ ಉದ್ಯಮಕ್ಕೆ ಆರ್ಥಿಕ ನೆರವು ನೀಡುವ ಉದ್ದೇಶ ಈಡೇರಿಕೆಯಲ್ಲಿ ಸಂಪೂರ್ಣ ಯಶಸ್ವಿಯಾಗಿದೆ. ಜಾರಿಗೆ ಬಂದ ಕೆಲವೇ ದಿನಗಳಲ್ಲಿ ಮುದ್ರಾಯೋಜನೆ ಅಡಿ 42,520ಕೋಟಿ ಸಾಲ ನೀಡಿದ್ದು, ಈ ಮೂಲಕ 66ಲಕ್ಷ ಜನರು ಆರ್ಥಿಕ ನೆರವು ಪಡೆದಿದ್ದು ಸಾಮಾನ್ಯ ಸಂಗತಿಯಲ್ಲ. ಫಲಾನುಭವಿಗಳ ಪೈಕಿ 3ನೇ ಒಂದು ಭಾಗದಷ್ಟು ಮಹಿಳೆಯರು (23.50ಲಕ್ಷ) ಹಾಗೂ 32.86ಲಕ್ಷ ಹೊಸ ಉದ್ಯಮಿಗಳು ಎಂಬ ಸಂಗತಿ ವಿಶೇಷವಾಗಿದೆ. ಪರಿಶಿಷ್ಟ ಜಾತಿ/ಪಂಗಡ/ಹಿಂದುಳಿದ ವರ್ಗಕ್ಕೆ ಸೇರಿದವರೇ 22ಲಕ್ಷ ಜನರಿದ್ದಾರೆ.

2016ರ ಮಾರ್ಚ ಅಂತ್ಯಕ್ಕೆ ಇರುವ ಅಂಕಿ ಅಂಶಗಳ ಪ್ರಕಾರ, ನಿರೀಕ್ಷೆಗೂ ಮೀರಿ ಪ್ರಗತಿ ಕಂಡು ಬಂದಿದೆ. ಮುದ್ರಾ ಬ್ಯಾಂಕಿನ ನೆರವು ಪಡೆದು ಸಾವಿರಾರು ಸಂಖ್ಯೆಯ ಸಣ್ಣ ಮತ್ತು ಅತೀ ಸಣ್ಣ ಉದ್ದಿಮೆದಾರರು ತಮ್ಮ ಉತ್ಪಾದಕತೆಯನ್ನು ಹೆಚ್ಚಿಸಿ ಆರ್ಥಿಕವಾಗಿ ಪ್ರಗತಿ ಸಾಧಿಸುತ್ತಿದ್ದಾರೆ. ಈ ಬೆಳವಣಿಗೆ ಕೇವಲ ಉದ್ದಿಮೆದಾರರ ವೈಯಕ್ತಿಕ ವಿಕಾಸನವಾಗಿರದೇ ದೇಶದ ಆರ್ಥಿಕ ಬಲವರ್ಧನೆಯಲ್ಲಿಯೂ ದಾಪುಗಾಲು ಇಡುತ್ತಿದೆ ಎಂದರೆ ಗಮನಾರ್ಹ. ಯೋಜನೆ ಪ್ರಾರಂಭಗೊಂಡು ಒಂದು

**ಮುದ್ರಾ ಬ್ಯಾಂಕಿನ ವಿಶೇಷಗಳು**

* ಕೌಶಲ ಹೊಂದಿದವರಿಗೆ ಉದ್ಯಮ ಸ್ಥಾಪನೆಗೆ ಹಣಕಾಸಿನ ನೆರವು ನೀಡಿ ಪ್ರೋತ್ಸಾಹಿಸುವುದು.
* ಬಂಡವಾಳದ ಕೊರತೆಯುಳ್ಳ ಸಾಹಿಸಿ ಸಣ್ಣ ಉದ್ಯಮಗಳಿಗೆ ಸಾಲದ ನೆರವು.
* ಸಣ್ಣ ಪ್ರಮಾಣದ ವ್ಯಾಪಾರಸ್ಥರಿಗೆ ಸಾಲ ಸೌಲಭ್ಯ ಕಲ್ಪಿಸಿ ಅಭಿವೃದ್ಧಿಗೊಳಿಸುವುದು.
* ಕಡಿಮೆ ಬಡ್ಡಿ ದರದಲ್ಲಿ ದೀರ್ಘಾವದಿ ಸಾಲ ನೀಡಿಕೆ.
* ಪರಿಶಿಷ್ಟ ಜಾತಿ/ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ ಆದ್ಯತೆ
* ಗುಡಿ ಕೈಗಾರಿಕೆಗಳಿಗೆ ಉತ್ತೇಜನ.
* ಅತೀ ಸಣ್ಣ ಹಣಕಾಸು ಸಂಸ್ಥೆಗಳನ್ನು ನಿಯಂತ್ರಿಸುವ ಮತ್ತು ಮರು ಹಣಕಾಸು ಹೊಂದಿಸುವ ಜವಾಬ್ದಾರಿ.
* ಸಣ್ಣ ಮತ್ತು ಅತೀ ಸಣ್ಣ ಉದ್ದಿಮೆಗಳಿಗೆ ಹಣಕಾಸು ಒದಗಿಸುವ ಸಂಸ್ಥೆಗೆ ನಿಯಮಾವಳಿ ರೂಪಿಸುವುದು.
* ಉದ್ಯಮದ ಯಂತ್ರೋಪಕರಣ ಅಡಮಾನ ಮೇಲೆ ಸಾಲ.

ವರ್ಷದೊಳಗೆ ಲಕ್ಷಾಂತರ ಉದ್ದಿಮೆದಾರರು ವಿವಿಧ ವಿಭಾಗದಲ್ಲಿ ಆರ್ಥಿಕ ನೆರವು ಪಡೆದು ಅಭಿವೃದ್ಧಿ ಸಾಧಿಸಿಕೊಳ್ಳಲು ಮುಂದೆ ಬಂದಿದ್ದು ಸ್ವಾಗತಿಸುವಂತಹದ್ದು. ದೇಶದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ನಿರುದ್ಯೋಗದ ಪ್ರಮಾಣವನ್ನು ಕಡಿಮೆ ಮಾಡುವಲ್ಲಿ ಈ ಯೋಜನೆ ಮಹತ್ವದ ಪಾತ್ರ ನಿರ್ವಹಿಸುತ್ತಿರುವುದನ್ನು ಒಂದು ವರ್ಷದ ಅವಧಿಯಲ್ಲಿನ ಚಿತ್ರಣ ಸ್ಪಷ್ಟಪಡಿಸುತ್ತದೆ.

ಉದ್ದಿಮೆ ಅಭಿವೃದ್ಧಿ ಜೊತೆಗೆ ಉದ್ಯೋಗಾವಕಾಶಗಳು, ಉತ್ಪಾದಕತೆಯಲ್ಲಿ ಹೆಚ್ಚಳದ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿನ ಸಣ್ಣ ಉದ್ದಿಮೆಗಳ ಉತ್ತೇಜನಕ್ಕೂ ಇದು ಹೆಚ್ಚು ಸಹಕಾರಿಯಾಗಿದ್ದು ದೇಶದ ಆರ್ಥಿಕತೆಯ ಮೇಲೆ ಒಳ್ಳೆಯ ಪ್ರಭಾವ ಬೀರುತ್ತಿರುವುದು ನಿರ್ವಿವಾದ. ಏಕೆಂದರೆ ದೇಶದ ಪ್ರತಿಯೊಂದು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕೂಡಾ ಈ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿದೆ. 2016ರ ಮಾರ್ಚ ಅಂತ್ಯಕ್ಕೆ ಇರುವಂತೆ ಅಂಕಿ ಅಂಶಗಳ ಪ್ರಕಾರ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳು ಕ್ರಮವಾಗಿ ಅತೀ ಹೆಚ್ಚು ಫಲಾನುಭವಿಗಳನ್ನು ಹೊಂದಿರುವ ರಾಜ್ಯ ಎಂಬ ಹಿರಿಮೆಗೆ ಪಾತ್ರವಾಗಿವೆ. ಹಾಗೆಯೇ ಅನುಕ್ರಮವಾಗಿ ಮಹಾರಾಷ್ಟ್ರ, ಉತ್ತರಪ್ರದೇಶ, ಪಶ್ಚಿಮಬಂಗಾಳ, ಮಧ್ಯಪ್ರದೇಶ, ಬಿಹಾರ, ಒಡಿಶಾ, ರಾಜಾಸ್ತಾನ ಹಾಗೂ ಗುಜರಾತ ರಾಜ್ಯಗಳಲ್ಲಿ ಉತ್ತಮ ಪ್ರಗತಿ ಕಂಡು ಬಂದಿದೆ.

**ಮುದ್ರಾ ಯೋಜನೆ ಸಮರ್ಪಕವಾಗಿ ಬಳಕೆ ಮಾಡಿಕೊಂಡ ಪಲಾನುಭವಿಗಳ ಸಂಖ್ಯೆ ಅಗ್ರಸ್ಥಾನದಲ್ಲಿರುವ ಪ್ರಮುಖ 10 ರಾಜ್ಯಗಳು (31.3.2016ಕ್ಕೆ ಇದ್ದಂತೆ)**

| ಕ್ರ.ಸಂ | ರಾಜ್ಯಗಳು | ಫಲಾನುಭವಿಗಳ ಒಟ್ಟು ಸಂಖ್ಯೆ ಮೊತ್ತ (3 ವಿಭಾಗಗಳು ಸೇರಿ) (ಲಕ್ಷ ಗಳಲ್ಲಿ) |
|---|---|---|
| 1 | ತಮಿಳುನಾಡು | 47.81 |
| 2 | ಕರ್ನಾಟಕ | 44.59 |
| 3 | ಮಹಾರಾಷ್ಟ್ರ | 35.35 |
| 4 | ಉತ್ತರ ಪ್ರದೇಶ | 33.45 |
| 5 | ಪಶ್ಚಿಮ ಬಂಗಾಳ | 26.28 |
| 6 | ಮಧ್ಯಪ್ರದೇಶ | 25.11 |
| 7 | ಬಿಹಾರ | 24.51 |
| 8 | ಒಡಿಶಾ | 23.43 |
| 9 | ರಾಜಾಸ್ತಾನ | 11.59 |
| 10 | ಗುಜರಾತ | 10.86 |

**ಮೂರು ಯೋಜನೆಗಳ ಸೇರಿ ಹಂಚಿಕೆಯಾದ ಒಟ್ಟು ಮೊತ್ತಗಳಲ್ಲಿ ಅಗ್ರ ಸ್ಥಾನದಲ್ಲಿರುವ 5 ರಾಜ್ಯಗಳು**

| ಕ್ರ.ಸಂ | ರಾಜ್ಯಗಳ ಹೆಸರು | ಹಂಚಿಕೆಯಾದ ಹಣ (ಕೋಟಿ ರೂ. ಗಳಲ್ಲಿ) |
|---|---|---|
| 1 | ಕರ್ನಾಟಕ | 16,469.43 |
| 2 | ತಮಿಳುನಾಡು | 15,496.86 |
| 3 | ಮಹಾರಾಷ್ಟ್ರ | 13,372.42 |
| 4 | ಉತ್ತರಪ್ರದೇಶ | 11,880.93 |
| 5 | ಮಧ್ಯಪ್ರದೇಶ | 07,769.29 |

ಫಲಾನುಭವಿಗಳ ಲೆಕ್ಕಾಚಾರದಲ್ಲಿ ಅಗ್ರಸ್ಥಾನದಲ್ಲಿರುವ ತಮಿಳುನಾಡಿನಲ್ಲಿ 47,81,567 ಲಕ್ಷ ಫಲಾನುಭವಿಗಳಿಗೆ 15497.86 ಕೋಟಿ ಹಣ ಹಂಚಿಕೆಯಾಗಿದೆ. ಎರಡನೇ ಸ್ಥಾನದಲ್ಲಿರುವ ಕರ್ನಾಟಕದಲ್ಲಿ 4459609 ಲಕ್ಷ ಫಲಾನುಭವಿಗಳಿಗೆ 16469.43 ಕೋಟಿ ಹಣ ವಿತರಿಸಲಾಗಿದೆ. ಹಂಚಿಕೆಯಾದ ಒಟ್ಟಾರೆ ಹಣದಲ್ಲಿ ಕರ್ನಾಟಕ ಅಗ್ರಸ್ಥಾನದಲ್ಲಿದೆ. ಶಿಶು ವಿಭಾಗದ ಸಾಲದ ಫಲಾನುಭವಿ (45,06,237) ಗಳಲ್ಲಿ ತಮಿಳುನಾಡು ಮುಂದೆ ಇದ್ದರೆ, ಕರ್ನಾಟಕದಲ್ಲಿ ಕಿಶೋರ ವಿಭಾಗದ ಸಾಲದ ಫಲಾನುಭವಿ (2,64,744)ಗಳು ಅಧಿಕ ಸಂಖ್ಯೆಯಲ್ಲಿದ್ದಾರೆ. ಹಾಗೆಯೇ ಮಹಾರಾಷ್ಟ್ರ ತರುಣ ವಿಭಾಗದ ಸಾಲದ ಫಲಾನುಭವಿ (43,242)ಗಳು ಇತರೆ ರಾಜ್ಯಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮುದ್ರಾ ಯೋಜನೆ ಅಡಿಯಲ್ಲಿ ಮೂರು ವಿಧದ ಸಾಲದ ವ್ಯವಸ್ಥೆಯಲ್ಲಿ ಕರ್ನಾಟಕ ಕಿಶೋಶ ಪ್ರಥಮ ಸ್ಥಾನ, ಶಿಶು ಹಾಗೂ ತರುಣ ವಿಭಾಗದಲ್ಲಿ ಎರಡನೇ ಸ್ಥಾನದಲ್ಲಿದೆ. ಈ ಮೂಲಕ ಇತರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಮುದ್ರ ಯೋಜನೆಯನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳುವಲ್ಲಿ ಕರ್ನಾಟಕ ದಾಪುಗಾಲು ಇಡುತ್ತಿರುವುದು ಕಂಡು ಬರುತ್ತದೆ.



ಮುದ್ರಾ ಬ್ಯಾಂಕಿನ ಸದುಪಯೋಗ ಪಡಿಸಿಕೊಳ್ಳುವಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಕ್ಷಿಣ ಭಾರತದ ರಾಜ್ಯಗಳಾಗಿವೆ. ಈ ಮೂಲಕ ಸಣ್ಣ ಉದ್ಯಮಗಳು ಈ ಪ್ರದೇಶದಲ್ಲಿ ಹೊಸ ಮನ್ವಂತರಕ್ಕೆ ಕಾರಣವಾಗುತ್ತಿರುವುದು ಸಂತಸದ ಸಂಗತಿಯೇ ಸರಿ. ಅದರಲ್ಲೂ ಕರ್ನಾಟಕ, ಕೇರಳ, ತಮಿಳುನಾಡು, ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳು ಯೋಜನೆಯ ಸಂಪೂರ್ಣ ಸದ್ಬಳಕೆಯ ಮೂಲಕ ಉದ್ದಿಮೆ ಕ್ಷೇತ್ರದಲ್ಲಿ ಪ್ರಗತಿಗೆ ಮುನ್ನುಡಿ ಬರೆಯುತ್ತಿರುವುದು ಕ್ರಾಂತಿಕಾರಕ ಬೆಳವಣಿಗೆ. ಅದರಲ್ಲೂ ಇತರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಈ ದಕ್ಷಿಣ ಭಾರತದ ರಾಜ್ಯಗಳ ಸಾಧನೆ ಗಮನಾರ್ಹವಾಗಿದೆ.

ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಕೂಡಾ ಉತ್ತಮ ಸಾಧನೆ ಕಂಡು ಬರುತ್ತಿದೆ.

**ಬ್ಯಾಂಕುಗಳ ಪ್ರಮುಖ ಜವಾಬ್ದಾರಿಗಳು**

* ಕಿರು ಹಣಕಾಸು ಸಂಸ್ಥೆಗಳ ನೊಂದಣಿ ಪ್ರಕ್ರಿಯೆ
* ಗ್ರಾಹಕ ರಕ್ಷಣಾ ನಿಯಮಗಳ ಜೊತೆ ಜವಾಬ್ದಾರಿಯುತ ಹಣಕಾಸಿನ ವ್ಯವಹಾರ ನಡೆಸುವುದು ಮತ್ತು ಸಾಲ ವಸೂಲಾತಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಗತ್ಯ ಕಾರ್ಯಸೂಚಿ ಸಿದ್ದಪಡಿಸುವುದು.
* ಕಿರು ಹಣಕಾಸು ವ್ಯವಹಾರ ನಡೆಸುವ ಸಂಸ್ಥೆಗಳಿಗೆ ನೀತಿ/ಮಾರ್ಗಸೂಚಿ ಸಿದ್ದಪಡಿಸುವುದು
* ಕಿರು ಹಣಕಾಸು ಸಂಸ್ಥೆಗಳಿಗೆ ಮಾನ್ಯತೆ/ರೇಟಿಂಗ್ ನೀಡುವುದು.
* ಕಟ್ಟಕಡೆಯ ಕಿರು ಉದ್ದಿಮೆ ತನಕವೂ ಸಾಲ ಸೌಲಭ್ಯವನ್ನು ತಲುಪಿಸುವುದಕ್ಕೆ ಅಗತ್ಯವಾದ ನಿಗದಿತ ಮಾರ್ಗಸೂಚಿ ಅಭಿವೃದ್ಧಿಪಡಿಸುವುದು.
* ಕಟ್ಟಕಡೆಯ ವ್ಯವಸ್ಥೆ ತನಕವೂ ಸಮರ್ಪಕ ತಂತ್ರಜ್ಞಾನದ ಸೌಲಭ್ಯ ಒದಗಿಸುವ ಮೂಲಕ ವ್ಯವಸ್ಥೆಯನ್ನು ಸರಳೀಕರಿಸುವುದು.
* ಖಚಿತ ಸಾಲದ ಯೋಜನೆ(ಕಿರುವಾಣಿಜ್ಯೋದ್ಯಮಿಗಳಿಗೆ ಸಾಲ ಸೌಲಭ್ಯ) ಯನ್ನು ರೂಪಿಸಿ ನಿರ್ವಹಿಸುವ ಹೊಣೆ
* ಕಿರು ಉದ್ದಿಮೆ ಕ್ಷೇತ್ರದಲ್ಲಿ ಅಭಿವೃದ್ಧಿಗೆ ಪೂರಕವಾದ ಬೆಂಬಲ ಮತ್ತು ಉತ್ತೇಜನ ಚಟುವಟಿಕೆ.

ಹೆಚ್ಚಿನ ಸಂಖ್ಯೆಯ ಫಲಾನುಭವಿಗಳು ಕಂಡು ಬಂದಿದ್ದು ದೆಹಲಿ ಮತ್ತು ಪಾಂಡಿಚೇರಿಯಲ್ಲಿ. ಕ್ರಮವಾಗಿ 3,94,388 ಹಾಗೂ 82,866 ಫಲಾನುಭವಿಗಳು ವಿವಿಧ ಯೋಜನೆಗಳ ಅಡಿಯಲ್ಲಿ ಸಾಲ ಸೌಲಭ್ಯ ಪಡೆದುಕೊಂಡಿದ್ದಾರೆ. ಉಳಿದಂತೆ ಚಂಡೀಗಢ 22,605, ಲಕ್ಷದ್ವೀಪ 740, ಅಂಡಮಾನ್ ಮತ್ತು ನಿಕೋಬಾರ 24,719 ಹಾಗೂ ದಾದ್ರಾ ಮತ್ತು ಹವೇಲಿ 1236 ಫಲಾನುಭವಿಗಳು ಈ ಯೋಜನೆಯ ಬಳಕೆದಾರರಾಗಿದ್ದಾರೆ.

ಮುದ್ರಾ ಯೋಜನೆಗೆ ಚಾಲನೆ ದೊರೆಯುವ ಮೊದಲು ದೇಶದಲ್ಲಿ ರಾಜ್ಯದಲ್ಲಿರುವ ವಿವಿಧ ರಾಷ್ಟ್ರೀಕೃತ ಬ್ಯಾಂಕು ಅಥವಾ ಇನ್ನಿತರ ಹಣಕಾಸು ಸಂಸ್ಥೆಗಳನ್ನು ಅವಲಂಬಿಸಬೇಕಾಗಿತ್ತು, ಬ್ಯಾಂಕುಗಳ ಕೃಪಾ ಕಟಾಕ್ಷದ ಮೇಲೆ ಉದ್ದಿಮೆಗಳ ಭವಿಷ್ಯ ನಿರ್ಧರಿಸಬೇಕಾದ ಸನ್ನಿವೇಶ ನಿರ್ಮಾಣಗೊಂಡಿತ್ತು. ಶ್ರಮವಹಿಸಿ ಮುಂದೆ ಬರಬಹುದೆಂಬ ದೃಢ ನಿರ್ಧಾರ ಕೈಗೊಂಡಿದ್ದರೂ ಸಕಾಲದಲ್ಲಿ ಹಾಗೂ ಅಗತ್ಯಕ್ಕೆ ತಕ್ಕಂತೆ ಸಾಲ ಸೌಲಭ್ಯ ದೊರೆಯದೇ



ಕಂಡ ಕನಸು ನನಸು ಮಾಡಿಕೊಳ್ಳದೇ ನಿರಾಶೆಯಾಗುವುದೇ ಹೆಚ್ಚಾಗಿರುತ್ತಿತ್ತು. ಆದರೆ ಮುದ್ರಾ ಯೋಜನೆಯಿಂದಾಗಿ ಅಂತಹ ನಿರಾಶೆದಾಯಕವಾಗುವ ಸನ್ನಿವೇಶಗಳು ತೀರಾ ಕಡಿಮೆ. ಅಗತ್ಯಕ್ಕೆ ಹಾಗೂ ಯೋಗತ್ಯಗೆ ಅನುಗುಣವಾಗಿ ಸಾಲದ ವ್ಯವಸ್ಥೆ ಮಾಡುವುದರ ಜೊತೆಗೆ ಪೂರಕ ವಾತಾವರಣ ನಿರ್ಮಾಣಕ್ಕೆ ಸಹಕರಿಸುತ್ತಿರುವುದರಿಂದಲೇ ಇದು ನಿರೀಕ್ಷೆಗಿಂತಲೂ ಹೆಚ್ಚು ಅಭಿವೃದ್ಧಿಗೊಳ್ಳುತ್ತಿದೆ. ಯೋಜನೆ ಅನುಷ್ಠಾನಕ್ಕಾಗಿ ದೇಶದಲ್ಲಿರುವ ಬ್ಯಾಂಕಿಂಗ್ ವ್ಯವಸ್ಥೆಯ ವಿವಿಧ ಬ್ಯಾಂಕುಗಳು ಬಾಗಿಯಾಗಿವೆ. ಅಂಕಿ ಅಂಶಗಳ ಪ್ರಕಾರ ಒಟ್ಟಾರೆ 154 ವಿವಿಧ ಬ್ಯಾಂಕುಗಳು ಯೋಜನೆ ಅಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಸಾಲ ನೀಡುತ್ತಿವೆ. ಅದರಲ್ಲೂ ಪ್ರಾದೇಶಿ ಗ್ರಾಮೀಣ ಬ್ಯಾಂಕುಗಳು (31) ಮತ್ತು ಕಿರುಹಣಕಾಸು ಸಂಸ್ಥೆಗಳು (34) ಹೆಚ್ಚು ಸಕ್ರಿಯವಾಗಿದ್ದು ಗಮನಾರ್ಹ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕಂಡು ಬರುವ ಈ ವಿಧದ ಬ್ಯಾಂಕುಗಳು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶದ ಸಣ್ಣ ಉದ್ದಿಮೆದಾರರಿಗೆ ಹಾಗೂ ಉದ್ಯಮಗಳಿಗೆ ಹೆಚ್ಚಿನ ನೆರವು ನೀಡುತ್ತಿರುವುದಾಗಿದೆ.

**ಮುದ್ರಾ ಯೋಜನೆಯ ಅನುಷ್ಠಾನದಲ್ಲಿ ಭಾಗಿಯಾದ ವಿವಿಧ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ವಿವರ(31.3.2016)**

| ಕ್ರಸಂ | ಬ್ಯಾಂಕುಗಳ/ ಹಣಕಾಸು ಸಂಸ್ಥೆಗಳ ಹೆಸರು | ಸಂಖ್ಯೆ |
|---|---|---|
| 1 | ಸಾರ್ವಜನಿಕ ವಲಯ ಬ್ಯಾಂಕುಗಳು | 27 |
| 2 | ಖಾಸಗಿ ವಲಯ ಬ್ಯಾಂಕುಗಳು | 17 |
| 3 | ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು (ಆರ್‌ಆರ್‌ಬಿ) | 31 |
| 4 | ಸಹಕಾರಿ ಬ್ಯಾಂಕುಗಳು | 10 |
| 5 | ಎಂಎಫ್‌ಐ–ಎನ್‌ಬಿಎಫ್‌ಸಿ | 34 |
| 6 | ಎಂಎಫ್‌ಐ | 9 |
| 7 | ಎನ್‌ಬಿಎಫ್‌ಸಿ | 26 |
| | ಒಟ್ಟು | 154 |

**ಅಗತ್ಯತೆಗಳು**

**1. ವ್ಯಾಪಕ ಪ್ರಚಾರ :** ಕೇಂದ್ರ ಸರ್ಕಾರದ ಅತ್ಯಂತ ಮಹತ್ವದ ಯೋಜನೆಯಾಗಿರುವ ಈ ಮುದ್ರಾ ಯೋಜನೆ(ಬ್ಯಾಂಕ್)ನ ಕಾರ್ಯ ವೈಖರಿ ಹಾಗೂ ಅದರಿಂದಾಗುತ್ತಿರುವ ಪ್ರಯೋಜನೆಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಬೇಕಾಗಿದೆ. ಅದರಲ್ಲೂ ವಿವಿಧ ಬ್ಯಾಂಕುಗಳು ಕೂಡಾ ಈ ಪ್ರಚಾರ ಕಾರ್ಯದಲ್ಲಿ ಕೈ ಜೋಡಿಸಿ ವಿವಿಧ ಶಾಖೆಗಳಲ್ಲಿ ಪ್ರಚುರ ಪಡಿಸುವುದು ಅಗತ್ಯವೆನಿಸಿದೆ.

**2. ಮಾರುಕಟ್ಟೆ ಮತ್ತು ತರಬೇತಿ:** ಮುದ್ರಾ ಬ್ಯಾಂಕ್ ಅಡಿ ಸಾಲ

| ಮುದ್ರಾ ಬ್ಯಾಂಕಿನ ಪ್ರಗತಿ 31.3.2016ಕ್ಕೆ ಇದ್ದಂತೆ ಪ್ರಮುಖ 6ರಾಜ್ಯಗಳ ಸಾಧನೆ (ರೂ. ಕೋಟಿ ಗಳಲ್ಲಿ) | | | | | | | | | | | |
|---|---|---|---|---|---|---|---|---|---|---|---|
| ಶಿಶು (Loans up to Rs. 50,000) | | | ಕಿಶೋರ (Loans from Rs. 50,001 to Rs. 5.00 Lakh) | | | ತರುಣ್ (Loans from Rs. 5.00 to Rs. 10.00 Lakh) | | | ಒಟ್ಟು | | |
| ಮಂಜೂರಾದ ಸಂಖ್ಯೆ | ಮಂಜೂರಾದ ಮೊತ್ತ | ಹಂಚಿಕೆ–ಯಾದ ಹಣ | ಮಂಜೂರಾದ ಸಂಖ್ಯೆ | ಮಂಜೂರಾದ ಮೊತ್ತ | ಹಂಚಿಕೆ–ಯಾದ ಹಣ | ಮಂಜೂರಾದ ಸಂಖ್ಯೆ | ಮಂಜೂರಾದ ಮೊತ್ತ | ಹಂಚಿಕೆ–ಯಾದ ಹಣ | ಮಂಜೂರಾದ ಸಂಖ್ಯೆ | ಮಂಜೂರಾದ ಮೊತ್ತ | ಹಂಚಿಕೆ–ಯಾದ ಹಣ |
| | | | | ಕರ್ನಾಟಕ | | | | | | | |
| 4153714 | 9157.83 | 9071.71 | 264744 | 4890.55 | 4744.94 | 41151 | 2812.97 | 2652.78 | 4459609 | 16861.35 | 16469.43 |
| | | | | ತಮಿಳುನಾಡು | | | | | | | |
| 4506237 | 8252.46 | 8231.68 | 234824 | 4398.88 | 4282.07 | 40506 | 3194.80 | 2983.11 | 4781567 | 15846.14 | 15496.86 |
| | | | | ಆಂಧ್ರಪ್ರದೇಶ | | | | | | | |
| 612312 | 1381.72 | 1312.12 | 165306 | 3286.86 | 3151.60 | 18070 | 1435.56 | 1327.07 | 795688 | 6104.14 | 5790.79 |
| | | | | ಮಹಾರಾಷ್ಟ್ರ | | | | | | | |
| 3337382 | 6695.06 | 6616.11 | 154441 | 3645.03 | 3461.97 | 43242 | 3466.39 | 3294.34 | 3535065 | 13806.48 | 13372.42 |
| | | | | ಮಧ್ಯಪ್ರದೇಶ | | | | | | | |
| 2406310 | 4672.80 | 4610.76 | 84343 | 1806.66 | 1653.63 | 20538 | 1617.28 | 1504.90 | 2511191 | 8096.74 | 7769.29 |
| | | | | ಉತ್ತರಪ್ರದೇಶ | | | | | | | |
| 3149078 | 5969.37 | 5849.68 | 160502 | 3466.06 | 3325.18 | 35802 | 2840.45 | 2706.07 | 3345382 | 12275.88 | 11880.93 |

ಪಡೆದು ಉದ್ದಿಮೆ ನಡೆಸುತ್ತಿರುವ ಫಲಾನುಭವಿಗಳಿಗೆ ಸೂಕ್ತ ಮಾರುಕಟ್ಟೆ ಮತ್ತು ಉತ್ಪಾದಕತೆಯಲ್ಲಿನ ಹೊಸ ಹೊಸ ವಿಧಾನ ಮತ್ತು ಕೌಶಲಗಳ ಕುರಿತು ಮಾಹಿತಿ ನೀಡುವುದು ಮುಖ್ಯ ಎನಿಸಿದೆ. ವಿವಿಧ ಹಂತದಲ್ಲಿ ಸಾಲ ಪಡೆಯುವವರ ಪಟ್ಟಿಯೇ ಲಭ್ಯವಾಗುವುದರಿಂದ ಅಗತ್ಯಕ್ಕೆ ತಕ್ಕಂತೆ ಸೂಕ್ತ ಮಾರ್ಗದರ್ಶನ ನೀಡುವುದರಿಂದ ಉದ್ಯಮಗಳ ಅಭಿವೃದ್ಧಿ ಮತ್ತು ಹೊಸ ಸಾಹಿಸಿ ಉದ್ಯಮಿಗಳಿಗೆ ನೆರವಾಗುತ್ತದೆ. ಈ ಕಾರ್ಯಕ್ರಮ ಈ ಯೋಜನೆಯ ಒಂದು ಭಾಗವಾಗಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಕ್ರಿಯಾಶೀಲವಾಗಿಲ್ಲದ ಕಾರಣ ಹೆಚ್ಚಿನ ಆಸಕ್ತಿ ಅಗತ್ಯವಿದೆ.

**3. ಪ್ರೋತ್ಸಾಹಗಳು :** ಯೋಜನೆ ಅಡಿಯಲ್ಲಿ ಸಾಲ ಪಡೆದು ಯಶಸ್ವಿ ಉದ್ಯಮಿಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು, ಹಾಗೂ ಅವರು ಕೈಗೊಂಡ ಕ್ರಮಗಳು, ಸಾಲ ಮರುಪಾವತಿಯಲ್ಲಿ ಅನುಸರಿಸಿದ ರೀತಿ ನೀತಿಗಳ ಬಗ್ಗೆ ಪರಾಮರ್ಶಿಸಿ ಕಾರ್ಯಕ್ರಮಗಳನ್ನು ಸಂಘಟಿಸುತ್ತಾರೆ.

ಇತರೆ ಉದ್ದಿಮೆದಾರರಿಗೆ ಮಾರ್ಗದರ್ಶನ ನೀಡುವುದು ಹಾಗೂ ನಿರೀಕ್ಷಿತ ಮಟ್ಟದಲ್ಲಿ ಗುರಿ ಸಾಧಿಸಿದವರಿಗೆ ವಿವಿಧ ರೀತಿಯಲ್ಲಿ ಪ್ರೋತ್ಸಾಹಕಗಳನ್ನು ನೀಡುವುದರಿಂದ ಸುಸ್ತಿದಾರರಿಗೆ ಪ್ರೇರಣೆ ನೀಡಿದಂತಾಗುತ್ತದೆ.



**4. ಉದ್ದಿಮೆ ಸ್ಥಾಪನೆಗೆ ಪೂರಕ ವಾತಾವರಣ ನಿರ್ಮಾಣ :** ದೇಶದಲ್ಲಿನ ಕೆಲ ನೈಸರ್ಗಿಕ ಸಂಪನ್ಮೂಲಗಳು ಒಂದೇ ರೀತಿಯಲ್ಲಿ ಲಭ್ಯವಿರುವುದಿಲ್ಲ, ಕೆಲವೊಂದು ಉದ್ಯಮಗಳಿಗೆ ಕಚ್ಚಾ ಸಂಪನ್ಮೂಲಗಳನ್ನು ಸಂಗ್ರಹಿಸಿಕೊಳ್ಳುವುದೇ ದುಬಾರಿ ಯಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಈ ಯೋಜನೆ ಅಡಿಯಲ್ಲಿ ಸಹಾಯ ಮಾಡಲು ಅವಕಾಶ ಕಲ್ಪಿಸುವುದು, ಉದ್ಯಮ ಸ್ಥಾಪನೆಗೆ ಪೂರಕ ವಾತಾವರಣ ನಿರ್ಮಾಣಕ್ಕೂ ಅನುಕೂಲ ಕಲ್ಪಿಸುವುದು ಅಗತ್ಯ.

**5. ಅನಗತ್ಯ ಪರವಾನಿಗಳಿಗೆ ಕಡಿವಾಣ:** ಮುದ್ರಾ ಅಡಿಯಲ್ಲಿನ ಫಲಾನುಭವಿಗಳು ಯಶಸ್ವಿಯಾಗಿದ್ದರೆ, ಅವರಿಗೆ ಇತರೆ ಯೋಜನೆಗಳ ಪ್ರಯೋಜನ ಸುಲಭವಾಗಿ ದೊರೆಯುವಂತಾಗಬೇಕು. ಉದ್ಯಮ ಸ್ಥಾಪನೆಗೆ ಬೇಕಾದ ಕೆಲ ಅನಗತ್ಯ ಪರವಾನಿಗೆಗೆ ಇರುವ ಕಟ್ಟಳೆಗಳು ಅಥವಾ ಷರತ್ತುಗಳಲ್ಲಿ ಸಡಿಲಿಕೆ ವಿಚಾರದಲ್ಲಿ ಈ ನೀತಿ ಅವಶ್ಯಕ. ಹೀಗೆ ಸಾಲ ಸೌಲಭ್ಯದ ಜೊತೆಗೆ ತರಬೇತಿ ಮತ್ತು ಅಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಾಣಗೊಂಡರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶಿಷ್ಟ ಸ್ಥಾನಮಾನ ಕಂಡುಕೊಳ್ಳುವುದರಲ್ಲಿ ಸಂದೇಹವಿಲ್ಲ. ಈ ಮೂಲಕ ದೇಶದ ಆರ್ಥಿಕತೆಯಲ್ಲಿಯೂ ಅಮೂಲಾಗ್ರ ಬದಲಾವಣೆಯನ್ನು ಕಾಣಬಹುದಾಗಿದೆ. ❑

# ಮನ್ ಕೀ ಬಾತ್




ಪ್ರಧಾನಿ
ಶ್ರೀ ನರೇಂದ್ರ ಮೋದಿಯವರು
ದಿನಾಂಕ
29-10-2017ರಂದು
ಮಾಡಿದ
'ಮನ್ ಕೀ ಬಾತ್' –
37 ನೇ ಭಾಷಣದ
ಕನ್ನಡ ಅನುವಾದದ
ಆಯ್ದ ಅವತರಣಿಕೆ

ನನ್ನ ಪ್ರಿಯ ದೇಶವಾಸಿಗಳೇ ನಮಸ್ಕಾರ. ನಮ್ಮ ದೇಶದಲ್ಲಿ ಅತ್ಯಂತ ಕಠಿಣ ನಿಯಮ ನಿಷ್ಠೆಗಳಿಂದ ಪಾಲಿಸುವ ಛಟ್ ಪೂಜೆ ದೀಪಾವಳಿ 6 ದಿನಗಳ ನಂತರ ಆಚರಿಸುವ ಬಹು ದೊಡ್ಡ ಹಬ್ಬವಾಗಿದೆ. ಭಕ್ತಿಯ ಈ ಮಹಾಪರ್ವದಲ್ಲಿ ಉದಯಿಸುವ ಸೂರ್ಯನ ಆರಾಧನೆ ಮತ್ತು ಅಸ್ತಮಿಸುವ ಸೂರ್ಯನ ಪೂಜೆಯ ಸಂದೇಶಗಳು ಅದ್ವಿತೀಯವಾಗಿದ್ದು ಪರಿಪೂರ್ಣವಾಗಿವೆ. ನಮ್ಮ ಜೀವನದಲ್ಲಿ ಸ್ವಚ್ಛತೆಯ ಮಹತ್ವದ ಕುರಿತಾದ ಅಭಿವ್ಯಕ್ತಿ ಕೂಡಾ ಈ ಹಬ್ಬದಲ್ಲಿದೆ. ಛಟ್ ಪೂಜೆಗೆ ಮೊದಲು ಸಂಪೂರ್ಣ ಮನೆಯ ಸ್ವಚ್ಛತೆಯ ಜೊತೆಗೆ ನದಿ, ಹಳ್ಳ ಕೊಳ್ಳಗಳ ತೀರಗಳ, ಪೂಜಾ ಸ್ಥಳವಾದ ಘಾಟ್‌ಗಳ ಸ್ವಚ್ಛತೆಯನ್ನು ಸಾಕಷ್ಟು ಹುಮ್ಮಸ್ಸಿನಿಂದ ಎಲ್ಲರೂ ಒಟ್ಟಾಗಿ ಮಾಡುತ್ತಾರೆ. ಸೂರ್ಯ ವಂದನೆ – ಛಟ್ ಪೂಜೆ – ಪರಿಸರ ಸಂರಕ್ಷಣೆ, ರೋಗಗಳ ನಿವಾರಣೆ ಮತ್ತು ನೀತಿ ನಿಯಮಗಳ ಋತುವಾಗಿದೆ. ಸಾಮಾನ್ಯವಾಗಿ ಏನನ್ನಾದರೂ ಕೇಳಿ ಪಡೆಯುವುದನ್ನು ಅತ್ಯಂತ ಹೀನ ಭಾವನೆಯಿಂದ ಕಾಣುತ್ತಾರೆ ಆದರೆ ಛಟ್ ಪೂಜೆಯಲ್ಲಿ ಬೆಳಗ್ಗೆ ಅರ್ಘ್ಯ ನೀಡಿದ ನಂತರ ಪ್ರಸಾದವನ್ನು ಕೇಳಿ ತಿನ್ನುವ ಒಂದು ವಿಶಿಷ್ಟವಾದ ಸಂಪ್ರದಾಯವಿದೆ. ಪ್ರಸಾದವನ್ನು ಕೇಳಿ ಪಡೆಯುವ ಈ ಸಂಪ್ರದಾಯದೊಂದಿಗೆ ಅಹಂಕಾರವನ್ನು ನಾಶಗೊಳಿಸುವ ಉದ್ದೇಶವಿದೆ ಎಂದು ಹೇಳಲಾಗುತ್ತದೆ. ಅಹಂಕಾರವೆಂಬುದು ಮಾನವನ ಪ್ರಗತಿಯಲ್ಲಿ ಅಡ್ಡಗೋಡೆಯಾಗಿ ನಿಲ್ಲುತ್ತದೆ. ಭಾರತದ ಈ ಮಹತ್ತರವಾದ ಸಂಪ್ರದಾಯದ ಬಗ್ಗೆ ಎಲ್ಲರಿಗೂ ಹೆಮ್ಮೆ ಎನಿಸುವುದು ಸಹಜವೇ.

ನನ್ನ ಪ್ರಿಯ ದೇಶವಾಸಿಗಳೇ, ಮನದ ಮಾತಿನ ಪ್ರಶಂಸೆಯೂ ಆಗುತ್ತದೆ ಮತ್ತು ಆ ಕುರಿತು ಆಲೋಚನೆಯೂ ನಡೆಯುತ್ತದೆ. ಆದರೆ ನಾನು ಮನದ ಮಾತಿನ ಪ್ರಭಾವದ ಬಗ್ಗೆ ಅವಲೋಕಿಸಿದಾಗ ಮನದ ಮಾತು ನೂರಕ್ಕೆ ನೂರು ಜನರ ಮನದಲ್ಲಿ ಒಂದು ಅವಿನಾಭಾವ ಸಂಬಂಧದೊಂದಿಗೆ ಬೆರೆತು ಹೋಗಿದೆ ಎಂಬ ದೃಢವಿಶ್ವಾಸ ಮೂಡುತ್ತದೆ. ಖಾದಿ ಮತ್ತು ಕೈಮಗ್ಗದ ಉದಾಹರಣೆಯನ್ನೇ ತೆಗೆದುಕೊಳ್ಳಿ, ಗಾಂಧಿ ಜಯಂತಿಯ ಸಂದರ್ಭದಲ್ಲಿ ನಾನು ಯಾವಾಗಲೂ ಖಾದಿ ಮತ್ತು ಕೈಮಗ್ಗದ ಬಗ್ಗೆ ಮಾತನಾಡುತ್ತೇನೆ. ಅದರ ಪರಿಣಾಮವೇನೆಂದು ತಿಳಿದು ನಿಮಗೂ ಸಂತೋಷವಾಗಬಹುದು. ಅಕ್ಟೋಬರ್ 17 ರಂದು ಧನ್‌ತೆರಸ್ ಆಚರಣೆಯ ದಿನ ದೆಹಲಿಯ ಖಾದಿಯ ಗ್ರಾಮೋದ್ಯೋಗ ಭವನದ ಮಳಿಗೆಯಲ್ಲಿ ಸುಮಾರು 1 ಕೋಟಿ 20 ಲಕ್ಷ ರೂಪಾಯಿಯ ದಾಖಲೆಯ ವ್ಯಾಪಾರವಾಗಿದೆ ಎಂದು ನನಗೆ ತಿಳಿದು ಬಂದಿದೆ. ಖಾದಿ ಮತ್ತು ಕೈಮಗ್ಗದ ಒಂದೇ ಮಳಿಗೆಯಲ್ಲಿ ಇಷ್ಟೊಂದು ವ್ಯಾಪಾರವಾಗಿದೆ ಎಂದು ಕೇಳಿ ನಿಮಗೂ ಆನಂದವಾಗಿರಬಹುದು. ಖಾದಿ ಮತ್ತು



ಕೈಮಗ್ಗ ಅತೀ ಬಡವರ ಜೀವನದಲ್ಲೂ ಬದಲಾವಣೆ ತರುವುದರ ಜೊತೆಗೆ ಅವರನ್ನು ಸಶಕ್ತರನ್ನಾಗಿಸುವ ಶಕ್ತಿಯುತ ಸಾಧನವಾಗಿ ಹೊರಹೊಮ್ಮುತ್ತಿದೆ. ಗ್ರಾಮೋದಯದಲ್ಲಿ ಇದು ಬಹು ದೊಡ್ಡ ಪಾತ್ರ ವಹಿಸುತ್ತಿದೆ.


ಈ ಬಾರಿ ಜಮ್ಮು ಕಾಶ್ಮೀರದ ಗುರೇಜ್‌ನಲ್ಲಿ ಭದ್ರತಾ ಪಡೆಯವರೊಂದಿಗೆ

* ಕೃಪೆ; ಆಕಾಶವಾಣಿ, ಬೆಂಗಳೂರು

ದೀಪಾವಳಿ ಆಚರಿಸಿದ್ದು ನನಗೆ ಅವಿಸ್ಮರಣೀಯವಾಗಿದೆ. ಗಡಿಯಲ್ಲಿ ಎಂಥ ಕಠಿಣ ಮತ್ತು ವಿಷಮ ಪರಿಸ್ಥಿತಿಗಳನ್ನು ಎದುರಿಸುತ್ತಾ ನಮ್ಮ ಸೇನಾನಿಗಳು ದೇಶದ ರಕ್ಷಣೆ ಮಾಡುತ್ತಾರೆ. ಅವರ ಆ ಸಂಘರ್ಷ, ಸಮರ್ಪಣೆ ಮತ್ತು ತ್ಯಾಗಕ್ಕೆ ಎಲ್ಲ ದೇಶವಾಸಿಗಳ ಪರವಾಗಿ ನಮ್ಮ ಭದ್ರತಾ ಪಡೆಯ ಪ್ರತಿ ಸೈನಿಕನನ್ನು ಗೌರವಿಸುತ್ತೇನೆ.

ನನ್ನ ಪ್ರೀತಿಯ ದೇಶವಾಸಿಗಳೇ, ನಮ್ಮ ಪುಣ್ಯ ಭೂಮಿಯು ಯಾರು ನಿಸ್ವಾರ್ಥ ಭಾವದಿಂದ ಮಾನವತೆಯ ಸೇವೆ ಮಾಡಿದ್ದಾರೋ ಅಂತಹ ಮಹಾ ಜನರಿಂದ ಶೋಭಿತವಾಗಿದೆ. ಸೋದರಿ ನಿವೇದಿತಾ ಅವರೂ ಸಹ ಆ ಅಸಾಧಾರಣ ಜನರಲ್ಲಿ ಒಬ್ಬರಾಗಿದ್ದರು. ನಮ್ಮ ಸಂಸ್ಕೃತಿಯಲ್ಲಿ ಆಧ್ಯಾತ್ಮಿಕತೆ ಮತ್ತು ವಿಜ್ಞಾನ ಎರಡೂ ಒಂದಕ್ಕೊಂದು ಪೂರಕವಾಗಿದೆ ಎನ್ನುವುದೇ ಭಾರತದಲ್ಲಿ ಒಂದು ವಿಶೇಷ. ಸಿಸ್ಟರ್ ನಿವೇದಿತಾ ಮತ್ತು ವಿಜ್ಞಾನಿ ಜಗದೀಶ್ ಚಂದ್ರ ಬೋಸ್ ಇದಕ್ಕೊಂದು ಬಲವಾದ ಉದಾಹರಣೆ. 1899 ರಲ್ಲಿ ಕೋಲ್ಕತ್ತಾದಲ್ಲಿ ಭಯಾನಕವಾದ ಪ್ಲೇಗ್ ಹರಡಿತು ಮತ್ತು ನೋಡು ನೋಡುತ್ತಲೇ ನೂರಾರು ಜನರ ಪ್ರಾಣ ಹೊರಟು ಹೋಯಿತು. ಸಿಸ್ಟರ್ ನಿವೇದಿತಾ ಅವರು ತಮ್ಮ ಆರೋಗ್ಯದ ಚಿಂತೆಯನ್ನು ಸಹ ಮಾಡದೆ ಚರಂಡಿ ಮತ್ತು ರಸ್ತೆಗಳನ್ನು ಶುಚಿಗೊಳಿಸುವ ಕೆಲಸವನ್ನು ಪ್ರಾರಂಭಿಸಿದರು. ಅವರು ಎಂತಹ ಮಹಿಳೆಯೆಂದರೆ ತುಂಬಾ ಆರಾಮದಾಯಕ ಜೀವನವನ್ನು ನಡೆಸಬಹುದಾಗಿದ್ದರೂ ಕೂಡ ಬಡವರ ಸೇವೆಯಲ್ಲಿ ತೊಡಗಿಸಿಕೊಂಡರು. ಪ್ರತಿಯೊಬ್ಬ ಭಾರತೀಯನೂ ಅವರ ಜೀವನದಿಂದ ಪಾಠ ಕಲಿತು ಸ್ವತಃ ಅಂತಹ ಸೇವೆಯ ದಾರಿಯಲ್ಲಿ ನಡೆಯಲು ಪ್ರಯತ್ನ ಪಡುವುದೇ ಅಂಥಹ ಮಹಾನ್ ವ್ಯಕ್ತಿತ್ವಕ್ಕೆ ಸಲ್ಲುವ ಶ್ರದ್ಧಾಂಜಲಿ. ನಮ್ಮ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರ ಜನ್ಮದಿನದಂದು ಚಿಲ್ಡ್ರನ್ಸ್ ಡೇ, ಮಕ್ಕಳ ದಿನಾಚರಣೆ ಪ್ರಯುಕ್ತ ಎಲ್ಲ ಮಕ್ಕಳಿಗೂ ಹಾರ್ದಿಕ ಶುಭಾಶಯಗಳು. ಮಕ್ಕಳು ನವ ಭಾರತದ ನಿರ್ಮಾಣದಲ್ಲಿ ಎಲ್ಲಕ್ಕಿಂತ ಮುಖ್ಯವಾದ ನಾಯಕರು. ಮಕ್ಕಳೂ ಕೂಡ ಮಧುಮೇಹಕ್ಕೆ ತುತ್ತಾಗುತ್ತಿದ್ದಾರೆ ಎಂದು ಕೇಳುವುದಕ್ಕೆ ಬಹಳ ಆಶ್ಚರ್ಯ ಎನಿಸುತ್ತದೆ. ಇಂತಹ ಖಾಯಿಲೆಗಳಿಗೆ ತುತ್ತಾಗುವುದಕ್ಕೆ ಒಂದು ಪ್ರಮುಖ ಕಾರಣ ನಮ್ಮ ಜೀವನಶೈಲಿ ಯಲ್ಲಿ ದೈಹಿಕ ಚಟುವಟಿಕೆಗಳು ಕಡಿಮೆಯಾಗಿರುವುದು ಮತ್ತು ನಮ್ಮ ಆಹಾರ ಕ್ರಮದಲ್ಲಿ ಆಗಿರುವ ಬದಲಾವಣೆ. ಕುಟುಂಬದ ಸದಸ್ಯರು ತಮ್ಮ ಮಕ್ಕಳಿಗೆ ಪ್ರಜ್ಞಾಪೂರ್ವಕವಾಗಿ ತೆರೆದ ಮೈದಾನದಲ್ಲಿ ಆಟವಾಡುವ ಅಭ್ಯಾಸವನ್ನು ಮಾಡಿಸಲು ಪ್ರಯತ್ನಿಸಬೇಕೆಂದು ನಾನು ಬಯಸುತ್ತೇನೆ.

ಯೋಗವು ವಿಶೇಷವಾಗಿ ನಮ್ಮ ಯುವ ಮಿತ್ರರಿಗೆ ಒಂದು ಆರೋಗ್ಯಕರ ಜೀವನಶೈಲಿ ರೂಪಿಸಿಕೊಳ್ಳುವಲ್ಲಿ ಮತ್ತು ಜೀವನ ಶೈಲಿಯಿಂದ ಬರುವ ರೋಗಗಳನ್ನು ದೂರವಿಡಲು ಸಹಾಯ ಮಾಡುತ್ತದೆ.




ಆಯುರ್ವೇದ ಮತ್ತು ಯೋಗ ಇವುಗಳನ್ನು ನಾವು ಬರೀ ಚಿಕಿತ್ಸೆಯ ಮಾಧ್ಯಮವಾಗಿ ಮಾತ್ರ ನೋಡಬಾರದು. ಅವುಗಳನ್ನು ನಮ್ಮ ಜೀವನದ ಭಾಗವಾಗಿಸಿಕೊಳ್ಳಬೇಕು.

ನನ್ನ ಪ್ರೀತಿಯ ದೇಶವಾಸಿಗಳೇ, ಮುಖ್ಯವಾಗಿ ನನ್ನ ಯುವ ಜನರೇ, ಕ್ರೀಡಾ ಕ್ಷೇತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಒಳ್ಳೆಯ ಸುದ್ದಿ ಬಂದಿದೆ. ಬೇರೆ ಬೇರೆ ಆಟಗಳಲ್ಲಿ ನಮ್ಮ ಆಟಗಾರರು ದೇಶದ ಹೆಸರನ್ನು ಎತ್ತರಕ್ಕೆ ಏರಿಸಿದ್ದಾರೆ. ಹಾಕಿಯಲ್ಲಿ ಭಾರತವು ಅದ್ಭುತವಾಗಿ ಆಡಿ ಏಶಿಯ ಕಪ್ ಹಾಕಿ ಪ್ರಶಸ್ತಿ ಗೆದ್ದಿದೆ. ನಮ್ಮ ಆಟಗಾರರು ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ ಅದರ ಬಲದಿಂದ ಭಾರತವು 10 ವರ್ಷಗಳ ನಂತರ ಏಶಿಯಾ ಕಪ್ ಚಾಂಪಿಯನ್ ಆಗಿದೆ.




ಬ್ಯಾಡ್ಮಿಂಟನ್ ಸ್ಟಾರ್ ಕಿಡಂಬಿ ಶ್ರೀಕಾಂತ್ ಉತ್ಕೃಷ್ಟ ಪ್ರದರ್ಶನ ನೀಡಿ ಡೆನ್ಮಾರ್ಕ್ ಓಪನ್ ಪ್ರಶಸ್ತಿಗೆದ್ದು ಪ್ರತಿಯೊಬ್ಬ ಭಾರತೀಯರಿಗೂ ಹೆಮ್ಮೆ ತಂದಿದ್ದಾರೆ. ಸ್ನೇಹಿತರೇ, ಇದೇ ತಿಂಗಳು FIFA Under-17 World Cup ಇದರ ಆಯೋಜನೆಯಾಗಿತ್ತು. ಎಲ್ಲಾ ತಂಡಗಳೂ ತಮ್ಮ ಸರ್ವ ಶ್ರೇಷ್ಠ ಪ್ರದರ್ಶನ ನೀಡಿದವು. ಭಾರತವು ಪ್ರಶಸ್ತಿ ಗೆಲ್ಲಲಿಲ್ಲ ಸರಿ, ಆದರೆ ಭಾರತದ ಯುವ ಆಟಗಾರರಂತೂ ಎಲ್ಲರ ಹೃದಯವನ್ನು ಗೆದ್ದರು.

ನನ್ನ ಪ್ರೀತಿಯ ದೇಶವಾಸಿಗಳೇ, ಸ್ವಚ್ಛ ಭಾರತದ ವಿಷಯದಲ್ಲಿ ಎಷ್ಟೊಂದು ಜನ ಬರೆಯುತ್ತಾರೆ ಅಂದರೆ ಒಂದು ವೇಳೆ ನಾನು ಅವರ ಭಾವನೆಗಳಿಗೆ ನ್ಯಾಯ ಒದಗಿಸಬೇಕು ಅಂತ ಅಂದುಕೊಂಡರೆ ನನಗೆ ಪ್ರತಿದಿನ ಮನ್ ಕಿ ಬಾತ್ ಕಾರ್ಯಕ್ರಮ ಮಾಡಬೇಕಾಗುತ್ತದೆ ಮತ್ತು ಪ್ರತಿದಿನ ನಾನು ಸ್ವಚ್ಛತೆಯ ವಿಷಯಕ್ಕೆ ಸಂಬಂಧಿಸಿದಂತೆಯೇ ಮನ್ ಕಿ ಬಾತ್ ಅನ್ನು ಅರ್ಪಣೆ ಮಾಡಬೇಕಾಗುತ್ತದೆ. ಮಹಾರಾಷ್ಟ್ರದ ಚಂದ್ರಪುರದ ಕೋಟೆಯಲ್ಲಿ ಎಕಲಾಜಿಕಲ್ ಪ್ರೊಟೆಕ್ಷನ್ ಆರ್ಗನೈಸೇಷನ್ ತಂಡ ಚಂದ್ರಪುರದ ಕೋಟೆಯಲ್ಲಿ ಶುಚಿತ್ವದ ಒಂದು ಅಭಿಯಾನ ನಡೆಸಿದರು. 200



ದಿನಗಳವರೆಗೆ ನಡೆದ ಈ ಅಭಿಯಾನದಲ್ಲಿ ಜನರು ನಿಲ್ಲಿಸದೆ, ಸುಸ್ತಾಗದೆ ಒಂದು ತಂಡದಂತೆ ಕೋಟೆಯ ಸ್ವಚ್ಛತೆಯ ಕೆಲಸವನ್ನು ಮಾಡಿದರು. ಅವರ ತಂಡಕ್ಕೆ ಮತ್ತು ಚಂದ್ರಪುರದ ಸಮಸ್ತ ನಾಗರೀಕರಿಗೂ ತುಂಬು ಹೃದಯದ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ.

ನನ್ನ ಪ್ರಿಯ ದೇಶವಾಸಿಗಳೇ, ಬರುವ ನವೆಂಬರ್ 4 ರಂದು ನಾವೆಲ್ಲರೂ ಗುರು ನಾನಕ್ ರ ಜನ್ಮದಿನವನ್ನು ಆಚರಿಸುತ್ತೇವೆ. ಗುರು ನಾನಕ್ ರು ಬರೀ ಸಿಖ್ಖರ ಮೊದಲ ಗುರು ಮಾತ್ರವಲ್ಲ, ಅವರು ಜಗತ್ತಿಗೇ ಗುರುಗಳು. ಗುರು ನಾನಕರು ಸಾರ್ಥಕ ಜೀವನಕ್ಕಾಗಿ 3 ಸಂದೇಶಗಳನ್ನು ನೀಡಿದರು. ಅವೆಂದರೆ – ಪರಮಾತ್ಮನ ನಾಮವನ್ನು ಜಪಿಸು, ಕಷ್ಟ ಪಟ್ಟು ದುಡಿಮೆ ಮಾಡು, ಮತ್ತು ಅವಶ್ಯಕತೆ ಇದ್ದವರಿಗೆ ಸಹಾಯ ಮಾಡು,

**(51ನೇ ಪುಟಕ್ಕೆ)**

## ನಿಮಗಿದು ತಿಳಿದಿದೆಯೇ?

### ಉದ್ಯೋಗ ಆಧಾರ್ ಮೆಮೊರಾಂಡಮ್

ಸರ್ಕಾರ, ವಿವಿಧ ಯೋಜನೆಗಳಡಿ ನೀಡುವ ಪ್ರಯೋಜನಗಳನ್ನು ಪಡೆದುಕೊಳ್ಳಲು ಕಿರು, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ಎಂಎಸ್‌ಎಂಇ ನೊಂದಣಿ ಮಾಡಿಕೊಳ್ಳುವುದು ಅತ್ಯಗತ್ಯ. ನೊಂದಣಿಯ ವಿಸ್ತೃತ ಪ್ರಕ್ರಿಯೆಯಿಂದಾಗಿ ಅನೇಕ ಉದ್ದಿಮೆಗಳು ಇದುವರೆಗೆ ನೊಂದಣಿ ಮಾಡಿಸಿಕೊಳ್ಳುತ್ತಿರಲಿಲ್ಲ. ಹೀಗಾಗಿ ಪ್ರಯೋಜನಗಳೂ ಲಭಿಸುತ್ತಿರಲಿಲ್ಲ. ಎಂಎಸ್‌ಎಂಇ ಕುರಿತ ಕೆ.ವಿ. ಕಾಮತ್ ತಂಡ, ನೊಂದಣಿಯನ್ನು ಸಾರ್ವತ್ರೀಕರಿಸುವಂತೆ ಶಿಫಾರಸು ಮಾಡಿದೆ. ಈ ಹಿನ್ನೆಲೆಯಲ್ಲಿ ಉದ್ಯೋಗ ಆಧಾರ್ ಮೆಮೊರಾಂಡಮ್ ಜಾರಿಗೆ ತರಲಾಗಿದೆ. ಸುಲಭ ನೊಂದಣಿಯನ್ನು ಸಣ್ಣ ಉದ್ದಿಮೆಗಳನ್ನು ಗಮನದಲ್ಲಿಟ್ಟು ಮಾಡಲಾಗಿದೆ.

ಉದ್ಯೋಗ ಆಧಾರ್ ತಿಳಿವಳಿಕೆ, ಒಂದು ಪುಟ ಸರಳ ಮಾಹಿತಿಯ ನೊಂದಣಿಯಾಗಿದೆ. ಇದರಲ್ಲಿ ಕೆಲವು ಸರಳ ಅತ್ಯಗತ್ಯ ಮಾಹಿತಿ ಒದಗಿಸಬೇಕಾಗುತ್ತದ್ದೆ, ಸ್ವಘೋಷಣೆ ಇರುತ್ತದೆ. ಇದರ ವಿಶೇಷತೆಗಳೆಂದರೆ * ಒಂದೇ ಪುಟದ ಆನ್‌ಲೈನ್ ನೊಂದಣಿ – ಮೊಬೈಲ್ ಸ್ನೇಹಿ ವ್ಯವಸ್ಥೆ. * ಸ್ವಪ್ರಮಾಣೀಕರಣ * ಒಂದಕ್ಕಿಂತ ಹೆಚ್ಚು ಆಧಾರ್ ಉದ್ಯೋಗ ಸಾದರಪಡಿಸಬಹುದು. * ದಾಖಲೆಗಳ ಅಗತ್ಯವಿಲ್ಲ. * ಶುಲ್ಕವಿಲ್ಲ.

ಕಿರು, ಸಣ್ಣ ಮತ್ತು ಮಧ್ಯಮ ಗಾತ್ರ ಉದ್ದಿಮೆಗಳು ಉದ್ದಿಮೆದಾರರ ಅನುಕೂಲಕ್ಕಾಗಿ ನೊಂದಣಿ ಆನ್‌ಲೈನ್ ಭರ್ತಿಗಾಗಿ ಸರ್ಕಾರ http:// udyogaadhaar.gov.in ಉದ್ಯೋಗ ಆಧಾರ್ ಪೋರ್ಟಲ್ ಆರಂಭಿಸಿದೆ. ಈ ಪೋರ್ಟಲ್ ಮೊಬೈಲ್ ಉಪಕರಣಗಳ ಮೂಲಕವೂ ಲಭ್ಯ ಇರುತ್ತದೆ.


ಸರಳೀಕೃತ ಆಧಾರ್ ಆಧರಿತ ನೊಂದಣಿ ವ್ಯವಸ್ಥೆಗೆ ಉದ್ದಿಮೆದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇದುವರೆಗೆ (ಅಕ್ಟೋಬರ 10, 2017) ಉದ್ಯೋಗ ಆಧಾರ್ ಸಂಖ್ಯೆ ಬಳಸಿ, 3,,629,754 ಉದ್ದಿಮೆಗಳು ನೊಂದಾಯಿಸಿಕೊಂಡಿವೆ. ❑

(50ನೇ ಪುಟದಿಂದ)

## ಮನ್ ಕೀ ಬಾತ್

ಗುರು ನಾನಕರು ತಮ್ಮ ಮಾತುಗಳನ್ನು ಹೇಳಲು ಗುರುಬಾನಿಗಳನ್ನು ರಚಿಸಿದರು. ಬರುವ 2019 ರಲ್ಲಿ ನಾವು ಗುರು ನಾನಕರ 550 ನೇ ಜಯಂತಿಯನ್ನು ಆಚರಿಸಲು ಯೋಜಿಸಿದ್ದೇವೆ. ಬನ್ನಿ, ನಾವು ಅವರ ಸಂದೇಶ ಮತ್ತು ಶಿಕ್ಷಣ ದ ಮಾರ್ಗದಲ್ಲಿ ಮುಂದೆ ಹೋಗುವ ಪ್ರಯತ್ನ ಮಾಡೋಣ.

ನನ್ನ ಪ್ರೀತಿಯ ದೇಶವಾಸಿಗಳೇ, 2 31 ಅಕ್ಟೋಬರ್ ರಂದು ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರ ಹುಟ್ಟು ಹಬ್ಬ. ಆಧುನಿಕ ಅಖಂಡ ಭಾರತದ ಪ್ರಸ್ತಾವನೆಯನ್ನು ಇವರೇ ಕೊಟ್ಟಿದ್ದು ಎಂದು ನಮಗೆಲ್ಲರಿಗೂ ಗೊತ್ತು. ಭಾರತ ಮಾತೆಯ ಆ ಮಹಾನ್ ಸಂತಾನದ ಅಸಾಧಾರಣ ಜೀವನದಿಂದ ಇಂದು ನಾವು ಬಹಳ ತಿಳಿದುಕೊಳ್ಳಬಹುದು. 31 ಅಕ್ಟೋಬರ್ ರಂದು ಶ್ರೀಮತಿ ಇಂದಿರಾ ಗಾಂಧಿ ಯವರು ಸಹ ಈ ಜಗತ್ತನ್ನು ತೊರೆದು ಹೋದರು. ಸರ್ದಾರ್ ವಲ್ಲಭ ಭಾಯಿ ಪಟೇಲರ ವಿಶೇಷವೆಂದರೆ ಅವರು ಬರೀ ಪರಿವರ್ತನೆ ವಿಚಾರಗಳನ್ನು ಹೇಳುತ್ತಿರಲಿಲ್ಲ, ಅದನ್ನು ಮಾಡಿ ತೋರಿಸುವ ಸಲುವಾಗಿ ಕಷ್ಟಾತಿಕಷ್ಟವಾದ ಸಮಸ್ಯೆಗಳನ್ನು ವ್ಯಾವಹಾರಿಕವಾಗಿ ಪರಿಹರಿಸುವ ಉಪಾಯ ಹುಡುಕುವುದರಲ್ಲಿ ಸಮರ್ಥರಿದ್ದರು. ವಿಚಾರಗಳನ್ನು ಸಾಕಾರಗೊಳಿಸುವುದರಲ್ಲಿ ಅವರು ಸಮರ್ಥರು. ಸರ್ದಾರ್ ವಲ್ಲಭಭಾಯಿ ಪಟೇಲ್ ಭಾರತದ ಪ್ರಭುತ್ವವನ್ನು ಒಂದೇ ಸೂತ್ರದಲ್ಲಿ ಹಿಡಿದಿಟ್ಟು ನಿಯಂತ್ರಿಸಿದರು. ಕೋಟ್ಯಾಂತರ ಭಾರತೀಯರನ್ನು ಒಂದು ರಾಷ್ಟ್ರ ಮತ್ತು ಒಂದು ಸಂವಿಧಾನದ ನೆಲೆಯೊಳಗೆ ತರಬೇಕೆಂದು ನಿಶ್ಚಯಿಸಿದ್ದರು. ಅವರ ದೃಢ ನಿಶ್ಚಯ ಅವರಿಗೆ ಎಲ್ಲ ಅಡೆತಡೆ ಗಳನ್ನೂ ದಾಟಿ ಹೋಗುವ ಸಾಮರ್ಥ್ಯ ಕೊಟ್ಟಿತು. ಎಲ್ಲಿ ಮನಸ್ಸನ್ನು ಬದಲಿಸುವ ಅವಶ್ಯಕತೆ ಇತ್ತೋ ಅಲ್ಲಿ ಅವರು ಮನ



ಒಲಿಸಿದರು, ಎಲ್ಲಿ ಬಲಪ್ರಯೋಗದ ಅವಶ್ಯಕತೆ ಬಿತ್ತೋ ಅಲ್ಲಿ ಬಲಪ್ರಯೋಗ ಮಾಡಿದರು. ಅವರು ಒಂದು ಉದ್ದೇಶವನ್ನು ನಿಶ್ಚಯ ಮಾಡಿದ್ದರು ಮತ್ತು ಅದರೆಡೆಗೆ ತುಂಬಾ ದೃಢತೆಯಿಂದ ಹೋಗುತ್ತಲೇ ಇದ್ದರು. ದೇಶವನ್ನು ಒಗ್ಗೂಡಿಸುವ ಈ ಕಾರ್ಯವನ್ನು ಅವರೊಬ್ಬರೇ ಮಾಡಬಲ್ಲವರಾಗಿದ್ದರು ಏಕೆಂದರೆ ಅವರು ಎಲ್ಲಾ ಜನರೂ ಸಮಾನರಾಗಿ ಇರುವಂತಹ ದೇಶದ ಪರಿಕಲ್ಪನೆಯನ್ನು ಮಾಡಿದ್ದರು ಮತ್ತು ಅವರು ಜಾತಿ ಮತ್ತು ಪಂಥಗಳ ಯಾವುದೇ ಬೇಧ ನಮ್ಮನ್ನು ತಡೆಯದಿರಲಿ, ಎಲ್ಲರೂ ಭಾರತದ ಸುಪುತ್ರ ಮತ್ತು ಸುಪುತ್ರಿಯರು, ನಾವೆಲ್ಲರೂ ನಮ್ಮ ದೇಶವನ್ನು ಪ್ರೀತಿಸಬೇಕು ಮತ್ತು ಪರಸ್ಪರ ಪ್ರೇಮ ಮತ್ತು ಸದ್ಭಾವನೆಯಿಂದ ನಮ್ಮ ಗುರಿಯನ್ನು ನಿರ್ಮಿಸಿಕೊಳ್ಳಬೇಕಾಗಿದೆ ಎಂದು ಹೇಳಿದ್ದರು. ಸರ್ದಾರ್ ವಲ್ಲಭ ಭಾಯಿ ಪಟೇಲರ ಮಾತು ಎಂದೂ ಯಾವಾಗಲೂ ನಮ್ಮೆಲ್ಲರಿಗೆ ಪ್ರೇರಣೆಯಾಗಿರಬೇಕು ಎಂದು ನಾನು ಹೇಳುತ್ತಿದ್ದೇನೆ. ಸರ್ದಾರ್‌ರ ಈ ಮಾತು ಇಂದಿಗೂ ಕೂಡ ನಮ್ಮ ನವಭಾರತದ ದೂರದರ್ಶಿತ್ವಕ್ಕೆ ಪ್ರೇರಕವಾಗಿದೆ, ಪ್ರಾಸಂಗಿಕವಾಗಿದೆ. ನನ್ನ ಪ್ರೀತಿಯ ದೇಶವಾಸಿಗಳೇ, ದೀಪಾವಳಿಯ ರಜೆಯ ನಂತರ ಹೊಸ ಸಂಕಲ್ಪದೊಂದಿಗೆ, ಹೊಸ ನಿಶ್ಚಯದೊಂದಿಗೆ, ನೀವೆಲ್ಲರೂ ನಿಮ್ಮ ದಿನನಿತ್ಯದ ಜೀವನದಲ್ಲಿ ಮತ್ತೊಮ್ಮೆ ಮುಳುಗಿರುತ್ತೀರಿ. ನನ್ನ ಕಡೆಯಿಂದ ಎಲ್ಲಾ ದೇಶವಾಸಿಗಳಿಗೆ, ಅವರ ಎಲ್ಲಾ ಕನಸುಗಳು ಸಾಕಾರವಾಗಲಿ ಎನ್ನುವ ಶುಭಕಾಮನೆಗಳು. ಅನಂತ ಧನ್ಯವಾದಗಳು.

❑

# ವಾರ್ತಾ ವಿಶೇಷ

ಮೂಲಸೌಕರ್ಯ ವಲಯದ ವಿವಿಧ ಯೋಜನೆಗಳಿಗೆ 7 ಲಕ್ಷ ಕೋಟಿ ರೂ. ವಿನಿಯೋಗಿಸಲು ಮತ್ತು ಬ್ಯಾಂಕಿಂಗ್ ವಲಯಕ್ಕೆ 2 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆ ಮೂಲಕ ಆರ್ಥಿಕತೆಗೆ ಚೇತರಿಕೆ ನೀಡಲು ಕೇಂದ್ರ ಸರ್ಕಾರ ಬೃಹತ್ ಉತ್ತೇಜನಾ ಪ್ಯಾಕೇಜ್‌ಗಳನ್ನು ಪ್ರಕಟಿಸಿದೆ. ಕೇಂದ್ರ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ ಯವರು ಈ ಬಗ್ಗೆ ವಿವರ ನೀಡಿ, ಉತ್ತಮ ಸ್ಥೂಲ ಆರ್ಥಿಕ ಮೂಲತತ್ವಗಳೊಂದಿಗೆ ಮುಂದುವರಿಯುತ್ತಿರುವ ಭಾರತದ ಆರ್ಥಿಕತೆಯು ಸದೃಢವಾಗಿದೆ; ಕಳೆದ ಮೂರು ವರ್ಷಗಳಿಂದ ಭಾರತದ ಆರ್ಥಿಕತೆಯು ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು ಮುಂದಿನ ವರ್ಷಗಳಲ್ಲೂ ಅಭಿವೃದ್ಧಿಯನ್ನು ಕಾಣಲಿದೆ ಎಂದರು. ಆರ್ಥಿಕ ವ್ಯವಹಾರ ಕಾರ್ಯದರ್ಶಿ ಶ್ರೀ ಎಸ್.ಸಿ. ಗಾರ್ಗ್ ಮಾತನಾಡಿ, 2014ರಿಂದ ಹಣದುಬ್ಬರ ಇಳಿಕೆಯಾಗಿದ್ದು ವಿತ್ತೀಯ ವರ್ಷದಲ್ಲಿ ಶೇ. 4 ನ್ನು ದಾಟಿಲ್ಲ ಎಂದರು. ಬೃಹತ್ ಆರ್ಥಿಕತೆಯ ಮೂಲತತ್ವಗಳನ್ನು ವಿವರಿಸಿದ ಅವರು ಈ ವರ್ಷ ಚಾಲ್ತಿ ಖಾತೆ ಕೊರತೆಯು ಶೇ. 2 ಕ್ಕಿಂತಲೂ ಕಡಿಮೆ ಇದ್ದು ವಿದೇಶಿ ವಿನಿಮಯ ಮೀಸಲು ಅಮೆರಿಕನ್ ಡಾಲರ್ 400 ಬಿಲಿಯನ್ ಅನ್ನು ದಾಟಿದೆ. ಇದೇ ವೇಳೆ ಸರ್ಕಾರ ಈ ವಿತ್ತೀಯ ವರ್ಷದಲ್ಲಿ ಒಟ್ಟಾರೆ ರೂ 725000 ಕೋಟಿಗೂ ಅಧಿಕ ಬಂಡವಾಳ ಹಿಂತೆಗೆತ ಗುರಿಯನ್ನು ದಾಟುವ ವಿಶ್ವಾಸವಿದೆ ಎಂದರು.

* * *

ವ್ಯಾಪಾರ, ಬಂಡವಾಳ ಹೂಡಿಕೆ, ರೈಲ್ವೆ ಮತ್ತು ಇಂಧನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಕುರಿತು ಆರು ಒಪ್ಪಂದಗಳಿಗೆ ಭಾರತ ಮತ್ತು ಇಟಲಿ ಸಹಿ ಹಾಕಿವೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಹಾಗೂ ಭಾರತಕ್ಕೆ ಭೇಟಿ ನೀಡಿದ್ದ ಇಟಲಿಯ ಪ್ರಧಾನ ಮಂತ್ರಿ ಶ್ರೀ ಪಾಲೋ ಜೆಂಟಿಲೋನಿ ಅವರ ಸಮ್ಮುಖದಲ್ಲಿ ನವದೆಹಲಿಯಲ್ಲಿ ಒಪ್ಪಂದಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು.

* * *

ಆಹಾರ ಸಂಸ್ಕರಣೆಗೆ ಭಾರತದಲ್ಲಿ ವಿಪುಲ ಅವಕಾಶಗಳಿದ್ದು, ಜಾಗತಿಕ ಬಂಡವಾಳ ಹೂಡಿಕೆದಾರರು, ಪ್ರಮುಖ ಆಹಾರ ಸಂಸ್ಥೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ವಿದೇಶಿ ಉದ್ಯಮಿಗಳು ಭಾರತದಲ್ಲಿ ಬಂಡವಾಳ ಹೂಡಬೇಕೆಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಮನವಿ ಮಾಡಿದ್ದಾರೆ. ನವದೆಹಲಿಯಲ್ಲಿ ಭಾರತೀಯ ವಿಶ್ವ ಆಹಾರ ಮೇಳ – 2017ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಆಹಾರ ಕ್ಷೇತ್ರದ ಮೂಲಕ ಆರ್ಥಿಕ ಪ್ರಗತಿ ಸಾಧಿಸುವುದು ಹಾಗೂ ರೈತರ ಆದಾಯ ದುಪ್ಪಟ್ಟು ಮಾಡುವ ಯೋಜನೆಗಳನ್ನು ಹಮ್ಮಿಕೊಳ್ಳುವುದು ಈ ಮೇಳದ ಮುಖ್ಯ ಉದ್ದೇಶವಾಗಿದೆ. ಅಲ್ಲದೇ ಆಹಾರ ಸಂಸ್ಕರಣೆ ಕ್ಷೇತ್ರಕ್ಕೆ ಜಾಗತಿಕ ಬಂಡವಾಳ ಆಕರ್ಷಿಸುವುದೇ ಸಮಾವೇಶದ ಉದ್ದೇಶವಾಗಿದೆ. ಬಹುಹಂತದ ತೆರಿಗೆಯನ್ನು ತಪ್ಪಿಸಿ, ಸರಕು ಸೇವಾ ತೆರಿಗೆಯನ್ನು ಜಾರಿ ಮಾಡುವ ಮೂಲಕ ದೇಶದ ಆರ್ಥಿಕ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಭಾರತ ಸೃಷ್ಟಿಸಿದೆ ಎಂದರು.

ಆಹಾರ ಮತ್ತು ಸಂಸ್ಕರಣಾ ಖಾತೆ ಸಚಿವೆ ಶ್ರೀಮತಿ ಹರ್ ಸಿಮ್ರತ್ ಕೌರ್ ಬಾದಲ್ ಮಾತನಾಡಿ, ಭಾರತದ ಆರ್ಥಿಕ ಬೆಳವಣಿಗೆಗೆ ಆಹಾರ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿದ್ದು, 65 ಸಾವಿರ ಕೋಟಿ ರೂಪಾಯಿಯಷ್ಟು ಬಂಡವಾಳ ಹೂಡಿಕೆಯ ಪ್ರಸ್ತಾವ ಬಂದಿದೆ ಎಂದರು. ಆಹಾರ ಸಂಸ್ಕರಣೆ ಕ್ಷೇತ್ರಕ್ಕೆ 10 ಬಿಲಿಯನ್ ಅಮೆರಿಕನ್ ಡಾಲರ್ ಬಂಡವಾಳ ಆಕರ್ಷಿಸುವ ಗುರಿ ಹೊಂದಲಾಗಿದೆ. ಅಲ್ಲದೇ ಮುಂದಿನ ಮೂರು ವರ್ಷಗಳಲ್ಲಿ 10 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ ಎಂದರು. ❑

## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.230/-; 2 yrs, Rs.430/- ; 3 yrs, Rs.610/-

Bal Bharati : 1 yr. Rs.160/-; 2 yrs, Rs.300/- ; 3 yrs, Rs.420/-

**(Circle the magazine of your choice and the period of subscription)**

DD/PO/MO No.________________________ date ____________

Name (in block letters) : ________________________

Subscriber's profile : Student / Academician / Institution / Others

Address : ________________________

________________________

PIN : ________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodhi Road, New Delhi * 110 003.

Please allow us 4 to 6 weeks for the dispatch of the first issue.
P.S. : For Renewal / change in address, please quote your subscription number

**To Subscribe Online**
*Log on to*
**http://publicationsdivision.nic.in/**,
*in collaboration with* **bharatkosh.gov.in**